# ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

**ಬೆಂಗಳೂರು**

**ದಿನಾಂಕ: 21-01-2020 ರಂದು ಬೆಳಿಗ್ಗೆ 11-30 ಗಂಟೆಗೆ ಕೊಠಡಿ ಸಂಖ್ಯೆ 313, 3ನೇ ಮಹಡಿ, ವಿಧಾನ ಸೌಧ, ಬೆಂಗಳೂರು ಇಲ್ಲಿ ಮಾನ್ಯ ವಸತಿ, ತೋಟಗಾರಿ ಮತ್ತು ರೇಷ್ಮೆ ಸಚಿವರು ಹಾಗೂ ಅಧ್ಯಕ್ಷರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ರವರ ಅಧ್ಯಕ್ಷತೆಯಲ್ಲಿ ನಡೆದ 2019-20ನೇ ಸಾಲಿನ ದ್ವಿತೀಯ ಮಂಡಳಿ ಸಭೆಯ ನಡವಳಿಗಳು**

| | |
|---|---|
| ಶ್ರೀ ವಿ. ಸೋಮಣ್ಣ<br>ಮಾನ್ಯ ವಸತಿ, ತೋಟಗಾರಿ ಮತ್ತು ರೇಷ್ಮೆ ಸಚಿವರು<br>ಹಾಗೂ<br>ಅಧ್ಯಕ್ಷರು<br>ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ<br>ಬೆಂಗಳೂರು | : ಅಧ್ಯಕ್ಷತೆ |

<u>ಹಾಜರಿದ್ದ ಸದಸ್ಯರು</u>

| | |
|---|---|
| 1. ಶ್ರೀ. ಪಿ.ಆರ್. ಶಿವಪ್ರಸಾದ್, ಕ.ಆ.ಸೇ<br>ಆಯುಕ್ತರು,<br>ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ<br>ಬೆಂಗಳೂರು | : ಸದಸ್ಯ ಕಾರ್ಯದರ್ಶಿ |
| 2. ಶ್ರೀ ಡಿ.ಎಸ್. ರಮೇಶ್<br>ಆಯುಕ್ತರು,<br>ಕರ್ನಾಟಕ ಗೃಹ ಮಂಡಳಿ<br>ಬೆಂಗಳೂರು | : ಸದಸ್ಯರು |
| 3. ಶ್ರೀ ಬಿ.ಆರ್. ಹರೀಶ್<br>ಸಹಾಯಕ ಆಯುಕ್ತರು (ಆಡಳಿತ)<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,<br>ಬೆಂಗಳೂರು. | : ಸದಸ್ಯರು |
| 4. ಶ್ರೀಮತಿ ರಶ್ಮಿಶ್ರೀಕಂಠ್ ಗಜರೆ, ಕ.ಆ.ಸೇ.<br>ಸರ್ಕಾರದ ಉಪ ಕಾರ್ಯದರ್ಶಿಗಳು<br>ವಸತಿ ಇಲಾಖೆ, ವಿಕಾಸ ಸೌಧ,<br>ಬೆಂಗಳೂರು. | : ಸದಸ್ಯರು |
| 5. ಶ್ರೀಮತಿ ಶಾಂತಲ. ಎಂ.ಎಸ್.<br>ನಿರ್ದೇಶಕರು (ನಿರ್ದೇಶಕರ ಪರವಾಗಿ)<br>ನಗರ ಮತ್ತು ಗ್ರಾಮಾಂತರ ನಿರ್ದೇಶನಾಲಯ,<br>ಗೇಟ್ ನಂ. 4, ಬಹುಮಹಡಿಗಳ ಕಟ್ಟಡ, ಬೆಂಗಳೂರು | : ಸದಸ್ಯರು |
| 6. ಶ್ರೀ ಬಿ.ಟಿ. ಉಮೇಶ್<br>ಕ್ಷೇತ್ರಿಯ ಮುಖ್ಯಸ್ಥರು,<br>ಹುಡ್ಕೋ ಸಂಸ್ಥೆ, ಮಣಿಪಾಲ್ ಸೆಂಟರ್,<br>ಬೆಂಗಳೂರು. | : ಸದಸ್ಯರು |

ಹಾಜರಿದ್ದ ವಿಶೇಷ ಆಹ್ವಾನಿತರು

1. ಶ್ರೀ. ಮನೋಜ್‌ಕುಮಾರ್ ಮೀನಾ, ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು
ವಸತಿ ಇಲಾಖೆ, ವಿಕಾಸ ಸೌಧ
ಬೆಂಗಳೂರು
–ವಿಶೇಷ ಆಹ್ವಾನಿತರು–

2. ಡಾ. ವಿ. ರಾಮಪ್ರಸಾಧ್ ಮನೋಹರ್, ಭಾ.ಆ.ಸೇ.
ವ್ಯವಸ್ಥಾಪಕ ನಿರ್ದೇಶಕರು
ರಾಜೀವ್‌ಗಾಂಧಿ ವಸತಿ ನಿಗಮ ನಿಯಮಿತ,
ಕಾವೇರಿ ಭವನ, ಬೆಂಗಳೂರು.
–ವಿಶೇಷ ಆಹ್ವಾನಿತರು–

3. ಆಪ್ತ ಕಾರ್ಯದರ್ಶಿ
ಮಾನ್ಯ ವಸತಿ, ತೋಟಗಾರಿ ಮತ್ತು ರೇಷ್ಮೆ ಸಚಿವರು
ವಿಕಾಸ ಸೌಧ, ಬೆಂಗಳೂರು.
–ವಿಶೇಷ ಆಹ್ವಾನಿತರು–

ಗೈರು ಹಾಜರಿದ್ದವರು

1 ಸರ್ಕಾರದ ಉಪಕಾರ್ಯದರ್ಶಿಗಳು –3
ಆರ್ಥಿಕ ಇಲಾಖೆ,
ವಿಧಾನ ಸೌಧ, ಬೆಂಗಳೂರು
: ಸದಸ್ಯರು

2.. ಜಂಟಿ ನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ,
ಬಹುಮಹಡಿಗಳ ಕಟ್ಟಡ, ಬೆಂಗಳೂರು.
: ಸದಸ್ಯರು

3. ಜಂಟಿ ನಿರ್ದೇಶಕರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ಆನಂದರಾವ್ ವೃತ್ತ,ಬೆಂಗಳೂರು.
: ಸದಸ್ಯರು

4. ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಡಾ. ಅಂಬೇಡ್ಕರ್ ವಿಧಿ, 9ನೇ ಮತ್ತು 10ನೇ ಮಹಡಿ,
ವಿಶ್ವೇಶ್ವರಯ್ಯ ಟವರ್, ಸಂಪಂಗಿರಾಮನಗರ, ಬೆಂಗಳೂರು.
–ವಿಶೇಷ ಆಹ್ವಾನಿತರು–

ಪ್ರಾರಂಭದಲ್ಲಿ ಆಯುಕ್ತರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ರವರು ಮಾನ್ಯ ವಸತಿ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರನ್ನು ಮತ್ತು ಸರ್ಕಾರದ ಕಾರ್ಯದರ್ಶಿಗಳು, ವಸತಿ ಇಲಾಖೆ ರವರನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು. ನಂತರ ಸಭೆಯನ್ನು ಪ್ರಾರಂಭಿಸಲಾಯಿತು.

ವಿಷಯ ಸಂಖ್ಯೆ : 1–

ದಿನಾಂಕ: 8.11.2019 ರಂದು ನಡೆದ ಮಂಡಳಿ ಸಭೆಯ ನಡವಳಿಗಳ ಮೇಲೆ ಕೈಗೊಂಡ ಕ್ರಮದ ಬಗ್ಗೆ ಮಂಡಿಸಿರುವ ಅನುಸರಣಾ ವರದಿಯನ್ನು ಪರಿಶೀಲಿಸಿ ಈ ಕೆಳಕಂಡಂತೆ ನಿರ್ಣಯಿಸಲಾಯಿತು:

ನಿರ್ಣಯ :

ದಿನಾಂಕ: 8.11.2019 ರಂದು ನಡೆದ ಮಂಡಳಿ ಸಭೆಯ ನಿರ್ಣಯಗಳ ಮೇಲೆ ಕೈಗೊಂಡ ಕ್ರಮದ ಅನುಪಾಲನಾ ವರದಿಯ ಮಾಹಿತಿಗಳನ್ನು ವಿವರವಾಗಿ ಮುಂದಿನ ಮಂಡಳಿ ಸಭೆಗೆ ಮಂಡಿಸಲು ನಿರ್ದೇಶಿಸುತ್ತಾ ವಿಷಯವನ್ನು ಮುಂದೂಡಲಾಯಿತು.

ವಿಷಯ ಸಂಖ್ಯೆ:- 2

ವಿಷಯ:- ಶೃಂಗೇರಿ ಪಟ್ಟಣದ ಹನುಮಂತನಗರ ಕೊಳಚೆ ಪ್ರದೇಶಗಳಲ್ಲಿನ ಸಮುದಾಯ ಭವನ ಶಿಥಿಲಾವ್ಯಸ್ಥೆಯಲ್ಲಿರುವ ಸಮುದಾಯ ಭವನ ಕಟ್ಟಡವನ್ನು ತೆರವುಗೊಳಿಸಲು ಮಂಡಳಿ ಸಭೆಯ ಅನುಮೋದನೆ ನೀಡುವ ಬಗ್ಗೆ

ಕಾರ್ಯನಿರ್ವಾಹಕ ಇಂಜಿನಿಯರ್, ನಂ.1ನೇ ವಿಭಾಗ, ಕಕೊಅಮ, ಮೈಸೂರು ರವರು ಪ್ರಸ್ತಾವನೆ ಸಲ್ಲಿಸಿ ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ಪಟ್ಟಣದ ಹನುಮಂತನಗರ ಕೊಳಚೆ ಪ್ರದೇಶದಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ನಿರ್ಮಿಸಿರುವ ಸಮುದಾಯ ಭವನವು ಶಿಥಿಲ ವ್ಯವಸ್ಥೆಯಲ್ಲಿದ್ದು 2018-19ನೇ ಸಾಲಿನ ಶೃಂಗೇರಿ ಭಾಗಕ್ಕೆ ಅತಿಯಾದ ಮಳೆಯಿಂದ ಬಹಳಷ್ಟು ಹಾನಿಯಾಗಿದ್ದು, ಸದರಿ ಸಮುದಾಯ ಭವನಕ್ಕೆ ಹಾನಿ ಉಂಟಾಗಿದ್ದು ದಿನಾಂಕ: 08.07.2019 ರಂದು ಸುರಿದ ಮಳೆಯಿಂದ ಸದರಿ ಕಟ್ಟಡದ ಮುಂಭಾಗ ಭಾಗಶಃ ಕುಸಿದು ಬಿದ್ದಿದ್ದು, ಸದರಿ ಸಮುದಾಯವು ಬಿಳುವ ಸ್ಥಿತಿಯಲ್ಲಿರುವುದರಿಂದ ಸದರಿ ಸಮುದಾಯದ ಉಳಿದ ಕಟ್ಟಡದ ಭಾಗವನ್ನು ತೆರವುಗೊಳಿಸಲು ಅನುಮೋದನೆಯನ್ನು ಕೋರಿರುತ್ತಾರೆ.

ಕಾರ್ಯಪಾಲಕ ಅಭಿಯಂತರರು ನಂ.1ನೇ ವಿಭಾಗ, ಕಕೊಅಮ, ಮೈಸೂರು ರವರು ಈ ಬಗ್ಗೆ ವರದಿ ಸಲ್ಲಿಸಿ ಸದರಿ ಸಮುಧಾಯವನವನ್ನು 2001ರಲ್ಲಿ ರೂ. 6,75,000/-ಗಳ ಅಂದಾಜು ಮೊತ್ತದಲ್ಲಿ (AC Sheet roof) ನಿರ್ಮಿಸಲಾಗಿರುತ್ತದೆ. ಸದರಿ ಸಮುದಾಯದ Structural Stability ಬಗ್ಗೆ ಸಹಾಯಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, 4ನೇ ಉಪ ವಿಭಾಗ, ಕೊಪ್ಪ, ಚಿಕ್ಕಮಗಳೂರು ಜಿಲ್ಲೆ ರವರನ್ನು ಕೋರಲಾಗಿ ಸದರಿ ಸಮುದಾಯ ಭವನವು ಶಿಥಿಲ ವ್ಯವಸ್ಥೆಯಲ್ಲಿದ್ದು, ಅದನ್ನು ದುರಸ್ಥಿಗೊಳಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿರುವುದಾಗಿ ವರದಿಸಿ, ಸಮುದಾಯ ಭವನದ ಕಟ್ಟಡವು ಬಿಳುವ ಸ್ಥಿತಿಯಲ್ಲಿರುವುದರಿಂದ ಕಟ್ಟಡದಿಂದ ಅಕ್ಕಪಕ್ಕದ ನಿವಾಸಿಗಳಿಗೆ ಅನಾಹುತವಾಗುವ ಸಂಭವವಿದೆ ಆದ್ದರಿಂದ ಸದರಿ ಸಮುದಾಯ ಭವನ ಕಟ್ಟಡವನ್ನು ನೆಲಸಮ ಗೊಳಿಸಲು ಅನುಮೋದನೆಯನ್ನು ಕೋರಿರುತ್ತಾರೆ.

ಮೇಲೆ ವಿವರಿಸಿರುವ ಅಂಶಗಳಂತೆ ಕಾರ್ಯಪಾಲಕ ಅಭಿಯಂತರರು ವರದಿಯಲ್ಲಿ ವಿವರಿಸಿರುವಂತೆ ಶಿಥಿಲಾವಸ್ಥೆಯಲಿರುವ ಸಮುದಾಯ ಭವನವನ್ನು ದುರಸ್ಥಿಗೊಳಿಸಲು ಸಾಧ್ಯವಿಲ್ಲದೇ ಇರುವುದರಿಂದ ಹಾಗೂ ಸದರಿ ಕಟ್ಟಡದಿಂದ ಅಕ್ಕಪಕ್ಕದ ನಿವಾಸಿಗಳಿಗೆ ಅನಾಹುತವಾಗುವ ಸಂಭವವಿರುವ ಹಿನ್ನೆಯಲ್ಲಿ ಸಮುದಾಯ ಭವನವನ್ನು ತೆರವುಗೊಳಿಸಲು ಮಂಡಳಿ ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ.

<u>ನಿರ್ಣಯ :</u>

**ಅನುಮೋದಿಸಲಾಯಿತು. ಹಾಗೂ ಸದರಿ ಪ್ರದೇಶದಲ್ಲಿ ಸಮುದಾಯ ಭವನವನ್ನು ಸ್ಥಳೀಯ ಸಂಸ್ಥೆಯ ಅನುದಾನದಿಂದ ನಿರ್ಮಿಸಲು ಕ್ರಮ ವಹಿಸಲು ನಿರ್ದೇಶಿಸಲಾಯಿತು.**

**ಕ್ರಮ :- ತಾಂತ್ರಿಕ ನಿರ್ದೇಶಕರು-1, ಕಕೊಅಮ**

ವಿಷಯ ಸಂಖ್ಯೆ:– 3

ವಿಷಯ:– ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ, ಹೊಳೆನರಸೀಪುರ ರವರು ಮೇಲ್ಕಂಡ ಕಾಮಗಾರಿಯನ್ನು ಹೊಳೆನರಸೀಪುರ ಪಟ್ಟಣದ 09 ಕೊಳಚೆ ಪ್ರದೇಶಗಳ ವ್ಯಾಪ್ತಿಯ ವಿವಿಧ ಅಭಿವೃದ್ಧಿ ಕಾಮಗಾರಿಯು ಅನುಮೋದನೆಯಾಗಿರುವ ಸ್ಥಳದ ಬದಲಾಗಿ ಹೊಸದಾಗಿ ಘೋಷಣೆಯಾಗಿರುವ ಹೊಳೆನರಸೀಪುರ ಪಟ್ಟಣದ ಪರಸಭೆ ವ್ಯಾಪ್ತಿಯಲ್ಲಿನ ವಾಡ ನಂ.17ರ ಸರ್ವೆ ನಂ. 64ರಲ್ಲಿನ 7 ಎಕರೆ 32 ಗುಂಟೆ ಪ್ರದೇಶದಲ್ಲಿ ಕೈಗೊಳ್ಳುವ ಪ್ರಸ್ತಾವನೆಗೆ ಮಂಡಳಿ ಸಭೆಯ ಅನುಮೋದನೆ ನೀಡುವ ಕುರಿತು.

2018–2019 ನೇ ಸಾಲಿನ ಕೊಳಚೆ ಪ್ರದೇಶ ಸುಧಾರಣೆ ಯೋಜನೆಯ ಲೆಕ್ಕ ಶೀರ್ಷಿಕೆ 2217–04–191–2–02 ಕ್ರಿಯಾ ಯೋಜನೆಯಡಿ ಮಂಜೂರಾಗಿರುವ ಹೊಳೆನರಸೀಪುರ ಪಟ್ಟಣದ 09 ಕೊಳಚೆ ಪ್ರದೇಶಗಳ ವ್ಯಾಪ್ತಿಯ ವಿವಿಧ ಅಭಿವೃದ್ಧಿ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ **Sri B.M Rangegowda** ರವರ ಟೆಂಡರ್‌ಗೆ ಮಾನ್ಯ ಆಯುಕ್ತರು ಕಕೊಅಮ,ಬೆಂಗಳೂರು ರವರ ಪತ್ರ ಸಂಖ್ಯೆ:ಕಕೊಅಮ/ಆಯುಕ್ತರು/ತಾಂ.ಕೋ/ಕ್ರಿಯೋ/2019–20/137 ದಿನಾಂಕ: 03/07/2019ರ ಪತ್ರಗಳ ಅನ್ವಯ ಮಂಡಳಿ ಸಭೆಯ ಮಂಡಳಿ ಸಭೆಯ ಘಟನ್ನೋತ್ತರ ಅನುಮೋದನೆ ನಿರೀಕ್ಷಿಸಿ ಈ ಕೆಳಕಂಡಂತೆ ಟೆಂಡರ್‌ಗೆ ಅನುಮೋದನೆ ನೀಡಲಾಗಿರುತ್ತದೆ. ವಿವರಗಳು ಕೆಳಕಂಡಂತಿವೆ.

| ಕಾಮಗಾರಿಯ ಹೆಸರು | ಶೆಡ್ಯೂಲ್–ಬಿ ಮೊತ್ತ | ಗುತ್ತಿಗೆದಾರರ ಹೆಸರು | ಗುತ್ತಿಗೆ ವಹಿಸಿದ ಮೊತ್ತ ರೂ.ಗಳಲ್ಲಿ |
|---|---|---|---|
| **Construction of RCC Drain, CC Road, UGD and Retaining wall @ different slums in Holenarsipura Town in Hassan District.** | ರೂ.2,67,80,657/– | **Sri B.M Rangegowda** | **2,80,92,909/–** |

ಅದರಂತೆ ಮಂಡಳಿಯ ಘಟನ್ನೋತ್ತರ ಅನುಮೋದನೆ ನಿರೀಕ್ಷಿಸಿ ಅನುಮೋದನೆ ನೀಡಿರುವ ಕ್ರಮಕ್ಕೆ ದಿನಾಂಕ:06/11/2019ರಂದು ನಡೆದ ಮಂಡಳಿ ಸಭೆಗೆ ಘಟನ್ನೋತ್ತರ ಮಂಜೂರಾತಿಗಾಗಿ ವಿಷಯವನ್ನು ಮಂಡಿಸಲಾಗಿರುತ್ತದೆ.ಮಂಡಳಿ ಸಭೆಯ ನಡವಳಿ ನಿರೀಕ್ಷಿಸಿದೆ.

ಮುಂದುವರೆದಂತೆ ಕಾರ್ಯಪಾಲಕ ಅಭಿಯಂತರರು, ನಂ.1ನೇ ವಿಭಾಗ, ಮೈಸೂರು ರವರು ತಮ್ಮ ಪತ್ರದ ದಿನಾಂಕ: 22.11.2019 ರಲ್ಲಿ ಮಾನ್ಯ ಶಾಸಕರು, ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ, ಹೊಳೆನರಸೀಪುರ ರವರು ಮೇಲ್ಕಂಡ ಕಾಮಗಾರಿಯನ್ನು ಹೊಳೆನರಸೀಪುರ ಪಟ್ಟಣದ 09 ಕೊಳಚೆ ಪ್ರದೇಶಗಳ ವ್ಯಾಪ್ತಿಯ ವಿವಿಧ ಅಭಿವೃದ್ಧಿ ಕಾಮಗಾರಿಯು ಅನುಮೋದನೆಯಾಗಿರುವ ಸ್ಥಳದ ಬದಲಾಗಿ ಹೊಸದಾಗಿ ಘೋಷಣೆಯಾಗಿರುವ ಹೊಳೆನರಸೀಪುರ ಪಟ್ಟಣದ ಪರಸಭೆ ವ್ಯಾಪ್ತಿಯಲ್ಲಿನ ವಾಡ ನಂ.17ರ ಸರ್ವೆ ನಂ. 64ರಲ್ಲಿನ 7 ಎಕರೆ 32 ಗುಂಟೆ ಪ್ರದೇಶದಲ್ಲಿ ಕೈಗೊಳ್ಳುವಂತೆ ಹಾಗೂ ಪಿ.ಎಂ.ಎ–ಹೆಚ್.ಎಫ್.ಎ ಯೋಜನೆಯಡಿ ನಿರ್ಮಿಸುತ್ತಿರವ 460 ಮನೆಗಳ ಪೈಕಿ ಕೆಲವು ಮನೆಗಳನ್ನು ಹೊಸದಾಗಿ ಘೋಷಣೆಯಾಗಿರುವ ವಾರ್ಡ ನಂ.17ರ ಸರ್ವೆ ನಂ. 64 ರಲ್ಲಿನ 7 ಎಕರೆ 32 ಗೊಂಟೆ ಪ್ರದೇಶದಲ್ಲಿ ಕೈಗೊಳ್ಳಲು ಮಾನ್ಯ ವಸತಿ ಸಚಿವರು ಕರ್ನಾಟಕ ಸರ್ಕಾರವವರನ್ನು ಕೋರಿರುವಂತೆ ಕಾರ್ಯಪಾಲಕ ಅಭಿಯಂತರರು ನಂ–1ನೇ ವಿಭಾಗ ಮೈಸೂರು ರವರು ಮುಂದಿನ ನಿರ್ದೇಶನಕ್ಕಾಗಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿ ಕೋಶ ಹಾಸನ ರವರ ಪತ್ರ ಸಂಖ್ಯೆ:ನಂ/ಮು.ನಿ.ಸಿ(2)/ಸಿ.ಆರ್/03/2019-20 ದಿನಾಂಕ:31/12/2019ರಂದು ಹೊಳೆನರಸೀಪುರ ಪಟ್ಟಣದ ಪರಸಭೆ ವ್ಯಾಪ್ತಿಯಲ್ಲಿನ ವಾಡ ನಂ.17ರ ಸರ್ವೆ ನಂ. 64ರಲ್ಲಿನ 7 ಎಕರೆ 32 ಗುಂಟೆ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಅಂತಿಮ ಅಧಿಸೂಚನೆ ಹೊರಡಿಸಿ, ದಿನಾಂಕ:03/01/2020ರಂದು ಅಂತಿಮ ಅಧಿಸೂಚನೆ ಪ್ರತಿಯೊಂದಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿರುತ್ತಾರೆ.

ಮೇಲೆ ವಿವರಿಸಿರುವ ಅಂಶಗಳ ಅನ್ವಯ ಕಾರ್ಯಪಾಲಕ ಅಭಿಯಂತರರು ನಂ-1ನೇ ವಿಭಾಗ ಮೈಸೂರು ರವರ ಕೋರಿಕೆಯಂತೆ 2018-19ನೇ ಸಾಲಿನ ಕ್ರಿಯಾ ಯೋಜನೆಯಡಿ ಮಂಜೂರಾಗಿರುವ ಹೊಳೆನರಸೀಪುರ ಪಟ್ಟಣದ 09 ವಿವಿಧ ಕೊಳಚೆ ಪ್ರದೇಶಗಳ ವ್ಯಾಪ್ತಿಯಲ್ಲಿ ಅಭಿವೃದ್ಧಿಪಡಿಸುವ ರೂ.300.00 ಲಕ್ಷಗಳ ಕಾಮಗಾರಿಯನ್ನು ಹೊಳೆನರಸೀಪುರ ಪಟ್ಟಣದ ಪರಸಭೆ ವ್ಯಾಪ್ತಿಯಲ್ಲಿನ ವಾಡ ನಂ.17ರ ಸರ್ವೆ ನಂ. 64ರಲ್ಲಿನ 7 ಎಕರೆ 32 ಗುಂಟೆ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಜಿಲ್ಲಾ ನಗರಾಭಿವೃದ್ಧಿ ಕೋಶ ಹಾಸನ ರವರ ಪತ್ರ ಸಂಖ್ಯೆ:ನಂ/ಮು.ನಿ.ಸಿ(2)/ಸಿ.ಆರ್/03/2019-20 ದಿನಾಂಕ:31/12/2019ರ ಅಂತಿಮ ಅಧಿಸೂಚನೆ ಹೊರಡಿಸಿರುವಂತೆ ಸದರಿ ಪ್ರದೇಶದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಸ್ಥಳ ಬದಲಾವಣೆ ಪ್ರಸ್ತಾವನೆಗೆ ಅನುಮೋದನೆ ನೀಡುವ ಪ್ರಾಧಿಕಾರವು ಮಂಡಳಿ ಸಭೆಯ ವ್ಯಾಪ್ತಿಯಲ್ಲಿ ಬರುವುದರಿಂದ ವಿಷಯವನ್ನು ಮಂಡಳಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

<u>ನಿರ್ಣಯ :</u>

ಅನುಮೋದಿಸಲಾಯಿತು.

ಕ್ರಮ : ತಾಂತ್ರಿಕ ನಿರ್ದೇಶಕರು-1, ಕಕೊಅಮ

ವಿಷಯ ಸಂಖ್ಯೆ:- 4

ವಿಷಯ: 2017-18ನೇ ಸಾಲಿನ ಕ್ರಿಯಾ ಯೋಜನೆಯಡಿ ಮಂಜೂರಾಗಿರುವ ಹುಬ್ಬಳ್ಳಿ ನಗರದ ಕೋಳಕೇರ ಪ್ಲಾಟ, ಮೇಹಬೂಬ ನಗರ, ಕರಿಗಣ್ಣವರ ಹಕ್ಕಲ, ಸದರ ಸೋಫಾ ನ್ಯೂಕನ್ಯಾನಗರ 430 ಐ.ಹಚ್.ಎಸ್.ಡಿ.ಪಿ ಹೌಸ ಲೇ-ಔಟ ಎಂ.ಅರಳಿಕಟ್ಟಿ / ಕನ್ಯಾನಗರ ಮತ್ತು ಜಗದೀಶನಗರ ಶಿಕ್ಕಲಗಾರ ತಾಂಡಾ ಕೊಳಗೇರಿ ಪ್ರದೇಶಗಳಲ್ಲಿ ಸಿ.ಸಿ ರಸ್ತೆ, ಸಿ.ಸಿ ಚರಂಡಿಕೀರು ನೀರು ಸರಬರಾಜು ಹಾಗೂ ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿಯ ಕಾಲಾವಧಿ ವಿಸ್ತರಣೆ (Extention of time) ಪ್ರಸ್ತಾವನೆಗೆಮಂಡಳಿ ಸಭೆಯಅನುಮೋದನೆ ನೀಡುವ ಬಗ್ಗೆ.

2017-18ನೇ ಸಾಲಿನ ಕ್ರಿಯಾ ಯೋಜನೆಯಡಿ ಮಂಜೂರಾಗಿರುವ (ಕ್ರಮ ಸಂಖ್ಯೆ:113 ಸಾಮಾನ್ಯರಲ್ಲಿ) ಹುಬ್ಬಳ್ಳಿ ನಗರದ ಕೋಳಕೇರ ಪ್ಲಾಟ, ಮೇಹಬೂಬ ನಗರ, ಕರಿಗಣ್ಣವರ ಹಕ್ಕಲ, ಸದರ ಸೋಫಾ ನ್ಯೂಕನ್ಯಾನಗರ 430 ಐ.ಹಚ್.ಎಸ್.ಡಿ.ಪಿ ಹೌಸ ಲೇ-ಔಟ್ ಎಂ.ಅರಳಿಕಟ್ಟಿ/ಕನ್ಯಾನಗರ ಮತ್ತು ಜಗದೀಶನಗರ ಶಿಕ್ಕಲಗಾರ ತಾಂಡಾ ಕೊಳಗೇರಿ ಪ್ರದೇಶಗಳಲ್ಲಿ ಸಿ.ಸಿ ರಸ್ತೆ, ಸಿ.ಸಿ ಚರಂಡಿಕೀರು ನೀರು ಸರಬರಾಜು ಹಾಗೂ ಮೂಲಭೂತ ಸೌಕರ್ಯಒದಗಿಸುವಕಾಮಗಾರಿಯಕಾರ್ಯಾದೇಶಸಂಖ್ಯೆ:KSDB/EE/D.Dn/Tech-cell/IFT-05/PBA/ T.Agr.No.48/2017-18/975dt:26/03/2018ರಲ್ಲಿ ರೂ.1,58,78,792.00 ಲಕ್ಷಗಳಿಗೆ ಶ್ರೀ.ಅರವಿಂದ್ ಚವ್ಹಾಣ ಇವರಿಗೆ ವಹಿಸಲಾಗಿರುತ್ತದೆ. ಟೆಂಡರ್ ಕರಾರಿನಂತೆ ಕಾಮಗಾರಿಯನ್ನು ಪೂರ್ಣಗೊಳಿಸಲು 06 (ಮಳೆಗಾಲ ಸೇರಿ) ತಿಂಗಳ ಕಾಲಾವಧಿಯಿದ್ದು, ದಿನಾಂಕ:27/03/2018 ರಂದು ಕಾಮಗಾರಿ ಸ್ಥಳವನ್ನು ಹಸ್ತಾಂತರಿಸಿ ದಿನಾಂಕ:26/09/2018ರಂದು ಪೂರ್ಣಗೊಳಿಸಬೇಕಾಗಿರುತ್ತದೆ.

ಕಾರ್ಯಪಾಲಕ ಅಭಿಯಂತರರು, ಧಾರವಾಡ ವಿಭಾಗ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಧಾರವಾಡರವರ ಪತ್ರದಲ್ಲಿ ಕಾಮಗಾರಿಯ ವಿಳಂಭದ ಬಗ್ಗೆ ವರದಿ ಸಲ್ಲಿಸಿ,ಸದರಿ ಪ್ರದೇಶದಲ್ಲಿ ಸಮುದಾಯ ಭವನ ನಿರ್ಮಾಣದ ಕುರಿತು ಕ್ಷೇತ್ರದ ಶಾಸಕರು ಸ್ಥಳ ಬದಲಾವಣೆ ಮಾಡಲು ಸೂಚಿಸಿದ್ದು, ಅದರಂತೆ ಕಾಮಗಾರಿಯ ಸ್ಥಳವನ್ನು ಪಾಲಿಕೆಯಿಂದ ತೆರವುಗೊಳಿಸಬೇಕಾಗಿರುತ್ತದೆ,ಈ ಹಿನ್ನಲೆಯಲ್ಲಿಕಾಮಗಾರಿಯ ಸ್ಥಳವನ್ನು ಗುತ್ತಿಗೆದಾರರಿಗೆ ಹಸ್ತಾಂತರಿಸುವಲ್ಲಿ ಕಾಲ ವಿಳಂಬವಾಗಿರುತ್ತದೆ ಹಾಗೂ ಗುತ್ತಿಗೆ ಕರಾರಿನನ್ವಯ ಕಾಲಾವಧಿಯನ್ನು ವಿಸ್ತರಿಸಲು ಕರಾರಿಸಲು ಕ್ಲಾಸ್2.4.3(PWG-65) ರಲ್ಲಿ ಅವಕಾಶ ವಿರುತ್ತದೆ ಮತ್ತು ಅಗೆದಿರುವ ಸಾಲು ಗುಂಡಿಗಳನ್ನು ಮುಚ್ಚಿಸಿ ರಸ್ತೆಯನ್ನು ಗಟ್ಟಿಪಡಿಸಿ ಕೊಡಲು ಸುಮಾರು 6 ತಿಂಗಳು 3 ವಾರಗಳು 3 ದಿನಗಳು ಕಾಲಾವಕಾಶ ತೆಗೆದುಕೊಂಡಿರುವುದರಿಂದ ವಿಳಂಭವಾಗಿದ್ದು, ಕಾಮಗಾರಿಯ ಸ್ಥಳವನ್ನು ಹಸ್ತಾಂತರಿಸಲುಇಲಾಖೆಯಿಂದ ವಿಳಂಭವಾಗಿರುವುತ್ತದೆ.

ದಿನಾಂಕ:26/09/2018ರ ಅಂತ್ಯಕ್ಕೆಗುತ್ತಿಗೆದಾರರು ರೂ.1,07,73,246/- ಮೊತ್ತದ ಆರ್ಥಿಕ ಪ್ರಗತಿಯನ್ನು ಸಾಧಿಸಿರುತ್ತಾರೆ. ಉಳಿಕೆ ಕಾಮಗಾರಿಯನ್ನು ಕೈಗೊಳ್ಳಲು ಗುತ್ತಿಗೆದಾರರಿಗೆ ಸ್ಥಳ ಹಸ್ತಾಂತರಿಸಿ, ಸದರಿ ಕಾಮಗಾರಿಯನ್ನು ದಿನಾಂಕ:29/09/2018ರಂದು ಪ್ರಾರಂಭಿಸಿ ಪ್ರಸ್ತುತ ಪೂರ್ಣತಾ ಕೆಲಸಗಳಾದ ಹೊರಗೋಡೆಯ ಗಾರೆ ಕೆಲಸ, ನೆಲಹಾಸು ಮತ್ತು ಪೇಂಟಿಂಗ್ಇತ್ಯಾದಿ ಕೆಲಸಗಳು ಬಾಕಿ ಇರುತ್ತದೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕಾಮಗಾರಿಯನ್ನು ಪೂರ್ಣಗೊಳಿಸುವಲ್ಲಿ ಉಂಟಾದ ವಿಳಂಭಕ್ಕೆ ಗುತ್ತಿಗೆದಾರರು ಪೂರ್ಣ ಜವಾಬ್ದಾರರಾಗಿಲ್ಲದ ಕಾರಣ ಕಾರ್ಯಪಾಲಕ ಅಭಿಯಂತರರ ಧಾರವಾಡ ವಿಭಾಗರವರು

ವರದಿಯಲ್ಲಿ ಶಿಫಾರಸ್ಸು ಮಾಡಿಕೊಂಡಿರುವಂತೆ ಸಮುದಾಯ ಭವನ ನಿರ್ಮಾಣಕ್ಕೆ ಕಾಲಾವಧಿ ವಿಸ್ತಾರಣೆ ದಿನಾಂಕ:26/09/2018 ರಿಂದ ದಿನಾಂಕ:19/02/2020 (511 ದಿನಗಳು) ರವರೆಗೆ ಕಾಲಾವಧಿ ವಿಸ್ತರಣೆ ಅನುಮೋದನೆಗಾಗಿ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ KW-4ರನ್ವಯ ನಿರ್ವಹಿಸಿದ್ದು, ಕಾಮಗಾರಿಯಲ್ಲಿ ಉಂಟಾದ ವಿಳಂಭಕ್ಕೆ ಗುತ್ತಿಗೆದಾರರು ಜವಾಬ್ದಾರರಲ್ಲದ ಕಾರಣ ಸರ್ಕಾರದ ಪತ್ರ ಸಂಖ್ಯೆ:HUD/289/MCS/83 ಬೆಂಗಳೂರು ದಿನಾಂಕ:09/06/1986ರಲ್ಲಿ ಸರ್ಕಾರದಿಂದ ಮಂಡಳಿ/ಮಂಡಳಿಯ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಲಾಗಿರುವ ಅಧಿಕಾರ ವ್ಯಾಪ್ತಿಯನುಸಾರ ಅನುಮೋದಿಸಲು ಅವಕಾಶವಿರುತ್ತದೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕಾಮಗಾರಿಯನ್ನು ಪೂರ್ಣಗೊಳಿಸುವಲ್ಲಿ ಉಂಟಾದ ವಿಳಂಭಕ್ಕೆ ಗುತ್ತಿಗೆದಾರರು ಪೂರ್ಣ ಜವಾಬ್ದಾರರಾಗಿಲ್ಲದ ಕಾರಣ ಕಾಪಾಅ ರವರ ವರದಿಯಲ್ಲಿ ಶಿಫಾರಸ್ಸು ಮಾಡಿಕೊಂಡಿರುವಂತೆ ಕಾಲ ವಿಸ್ತರಣೆಗೆಕೋರಿರುವ ವಿವರಗಳು ಈ ಕೆಳಕಂಡಂತಿವೆ.

| ಕಾಮಗಾರಿಯ ಹೆಸರು | ಗುತ್ತಿಗೆದಾರರ ಹೆಸರು | ಗುತ್ತಿಗೆ ಮೊತ್ತ ರೂ.ಲಕ್ಷಗಳಲ್ಲಿ | ಕಾಮಗಾರಿಯನ್ನು ಹಸ್ತಾಂತರಿಸಿದ ದಿನಾಂಕ | ಕಾಮಗಾರಿ ಯನ್ನು ಪೂರ್ಣಗೊಳಿ ಸಬೇಕಾದ ದಿನಾಂಕ | ವಾಸ್ತವವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕೋರಿರುವ ದಿನಾಂಕ | ಕಾಮಗಾರಿಯ ಹೆಚ್ಚುವರಿ ವಿಳಂಭಕ್ಕೆ ವಿಸ್ತರಣೆ ಅವಧಿ |
|---|---|---|---|---|---|---|
| 2017–18ನೇ ಸಾಲಿನ ಕ್ರಿಯಾಯೋಜನೆಯಡಿ ಮಂಜೂರಾಗಿರುವ ಹುಬ್ಬಳ್ಳಿ ನಗರದ ಕೋಳಕೇರ ಪ್ಲಾಟ, ಮೇಹಬೂಬ ನಗರ, ಕರಿಗಣ್ಣವರ ಹಕ್ಕಲ, ಸದರ ಸೋಫಾ ನ್ಯೂಕನ್ಯಾನಗರ 430 ಐ.ಹಚ್.ಎಸ್.ಡಿ.ಪಿ ಹೌಸ ಲೇ–ಔಟ ಎಂ.ಅರಳಿಕಟ್ಟಿ / ಕನ್ಯಾನಗರ ಮತ್ತು ಜಗದೀಶನಗರ ಶಿಕ್ಕಲಗಾರ ತಾಂಡಾ ಕೊಳಗೇರಿ ಪ್ರದೇಶಗಳಲ್ಲಿ ಸಿ.ಸಿ ರಸ್ತೆ, ಸಿ.ಸಿ ಚರಂಡಿಕೀರು ನೀರು ಸರಬರಾಜು ಹಾಗೂ ಮೂಲಭೂತ ಸೌಕರ್ಯಒದಗಿಸುವಕಾಮಗಾರಿಯಕಾಲಾವಧಿ ವಿಸ್ತರಣೆ (Extention of time) ಪ್ರಸ್ತಾವನೆಗೆ ಮಂಡಳಿ ಸಭೆಯಅನುಮೋದನೆ ನೀಡುವ ಬಗ್ಗೆ. | ಶ್ರೀ.ಅರವಿಂದ್ ಚವ್ಹಾಣ | 158.78 | 27/03/2018 | 26/09/2018 | 19/02/2020 | 26/09/2018 ರಿಂದ 19/02/2020 |

ಮೇಲ್ಕಂಡಂತೆ, ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ದಿನಾಂಕ : 11–01–2019 ರಂದು ನಡೆದ ಮಂಡಳಿ ಸಭೆಯ ನಿರ್ಣಯದಂತೆ, ತಾಂತ್ರಿಕ ಸಲಹಾ ಸಮಿತಿಯ ಸಲಹೆಯಂತೆ ನಿಯಮಾನುಸಾರ ಕ್ರಮ ವಹಿಸಲು ಸೂಚಿಸಲಾಗಿರುವಂತೆ, ಮುಂದಿನ ತಾಂತ್ರಿಕ ಸಲಹಾ ಸಮಿತಿಯ ಸಲಹಾ ಸಮಿತಿಯಲ್ಲಿ ಅನುಮೋದನೆ ಪಡೆಯುವ ಷರತ್ತಿಗೊಳಪಟ್ಟು ದಿನಾಂಕ: 26–9–2018 ರಿಂದ 19–02–2020 ರವರೆಗೆ ಒಟ್ಟು 511 ದಿವಸಗಳವರೆಗೆ ಹೆಚ್ಚುವರಿ ವಿಳಂಭಕ್ಕೆ ದಂಡ ರಹಿತ ಕಾಲಾವಧಿ ವಿಸ್ತರಣೆ ಕೋರಿ (Extension ofTime) ಪ್ರಸ್ತಾವನೆಯನ್ನು ಮಂಡಳಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ : ಅನುಮೋದಿಸಲಾಯಿತು.

ಕ್ರಮ : ತಾಂತ್ರಿಕ ನಿರ್ದೇಶಕರು–2, ಕಕೊಅಮ

ವಿಷಯ ಸಂಖ್ಯೆ:- 5

ವಿಷಯ:- ಬೆಂಗಳೂರು ನಗರದ ಜಯನಗರ ವಿಧಾನಸಭಾ ಕ್ಷೇತ್ರದ ರಾಜೇಶ್ವರಿನಗರ ಕೊಳಚೆ ಪ್ರದೇಶದಲ್ಲಿ ಸಮುದಾಯ ಭವನ ಕಟ್ಟಡ ನಿರ್ಮಿಸುವ ಕಾಮಗಾರಿಯನ್ನು ಸ್ಥಳ ಲಭ್ಯತೆಯಿಲ್ಲದ ಕಾರಣ ಮಹದೇವಪುರ ವಿಧಾನಸಭಾ ಕ್ಷೇತ್ರದ ಚನ್ನಸಂದ್ರ ಗ್ರಾಮದ ಸರ್ವೆ ನಂ.115ರ ಜಾಗಕ್ಕೆ ಸ್ಥಳ ಬದಲಾವಣೆ ಮಾಡುವ ಬಗ್ಗೆ.

ಬೆಂಗಳೂರು ನಗರದ ಜಯನಗರ ವಿಧಾನಸಭಾ ಕ್ಷೇತ್ರದ ರಾಜೇಶ್ವರಿನಗರ ಕೊಳಚೆ ಪ್ರದೇಶದಲ್ಲಿ ಸಮುದಾಯ ಭವನ ಕಟ್ಟಡ ನಿರ್ಮಿಸುವ ಕಾಮಗಾರಿಯನ್ನು ಇ-ಪ್ರೊಕ್ಯೂರ್ ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಿ ಗುತ್ತಿಗೆದಾರರಾದ ಶ್ರೀ.ಎಂ.ನಾಗರಾಜು ರವರಿಗೆ ರೂ.78,47,412/-ಗಳಿಗೆ ದಿನಾಂಕ:21.08.2017 ರಂದು ಗುತ್ತಿಗೆ ಆಧಾರದ ಮೇಲೆ ಕಾರ್ಯದೇಶ ನೀಡಲಾಗಿರುತ್ತದೆ. ಸದರಿ ಕಾಮಗಾರಿಯನ್ನು ನಿರ್ವಹಿಸಲು 12 ತಿಂಗಳುಗಳ ಕಾಲಾವಕಾಶವನ್ನು ನೀಡಲಾಗಿರುತ್ತದೆ.

ಅದರೆ ರಾಜೇಶ್ವರಿನಗರ ಕೊಳಚೆ ಪ್ರದೇಶದಲ್ಲಿ ಸಮುದಾಯ ಭವನವನ್ನು ನಿರ್ಮಾಣ ಮಾಡಲು ಕಾನೂನು ತೊಡಕುಗಳಿದ್ದು, ವ್ಯಾಜ್ಯವು ನ್ಯಾಯಾಲಯದಲ್ಲಿದ್ದು ಸ್ಥಳಾವಕಾಶ ಇಲ್ಲದೇಯಿರುವುದರಿಂದ ಮಹದೇವಪುರ ವಿಧಾನಸಭಾ ಕ್ಷೇತ್ರದ ಚನ್ನಸಂದ್ರ ಗ್ರಾಮದ ಸರ್ವೆ ನಂ.115ರಲ್ಲಿ ಎರಡು ಎಕರೆ ಜಮೀನಿನಲ್ಲಿ 2013-14ನೇ ಸಾಲಿನ ನರ್ಮ್-ಬಿಎಸ್‌ಯುಪಿ ಯೋಜನೆಯಡಿಯಲ್ಲಿ 240(ಜಿ+3) ಮನೆಗಳನ್ನು ಮಂಡಳಿ ವತಿಯಿಂದ ನಿರ್ಮಿಸಿದ್ದು, ಈ ಪ್ರದೇಶದಲ್ಲಿ ಸಮುದಾಯ ಭವನವು ಇಲ್ಲದೇಯಿರುವುದರಿಂದ ಮತ್ತು ಗುತ್ತಿಗೆದಾರರು ಪಡೆದಿರುವ ಟೆಂಡರ್ ಕಾರ್ಯಾದೇಶದ ದರಗಳಂತೆ ಪ್ರಸ್ತುತವಾಗಿ ಕಾಮಗಾರಿಯನ್ನು ನಿರ್ವಹಿಸಲು ಒಪ್ಪಿರುವದರಿಂದ, ಚನ್ನಸಂದ್ರ ಗ್ರಾಮದ ಸರ್ವೆ ನಂ.115ರಲ್ಲಿ ಲಭ್ಯವಿರುವ ಸುಮಾರು 50 * 150 ಅಡಿಗಳ ಅಳತೆಯ ಜಾಗದಲ್ಲಿ ಸಮುದಾಯ ಭವನವನ್ನು ನಿರ್ಮಾಣ ಮಾಡಲು ಸ್ಥಳ ಬದಲವಾಣೆ ಅನುಮೋದನೆಯನ್ನು ಕೋರಿ ಕಾಪಾಅ ನಂ.1ನೇ ವಿಭಾಗ ಬೆಂಗಳೂರು, ರವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲಿನ ಅಂಶಗಳ ಹಿನ್ನಲೆಯಲ್ಲಿ ಸಾರ್ವಜನಿಕ ಹಿತದೃಷ್ಠಿಯಿಂದ ರಾಜೇಶ್ವರಿ ಕೊಳಚೆ ಪ್ರದೇಶದ ಬದಲಾಗಿ ಮಹದೇವಪುರ ವಿಧಾನಸಭಾ ಕ್ಷೇತ್ರದ ಚನ್ನಸಂದ್ರ ಗ್ರಾಮದ ಸರ್ವೆ ನಂ.115ರಲ್ಲಿ ಎರಡು ಎಕರೆ ಜಮೀನಿನಲ್ಲಿ ನಿರ್ಮಿಸಿರುವ 240 (ಜಿ+3) ಮನೆಗಳ ಬಡಾವಣೆಯಲ್ಲಿ ಸಮುದಾಯ ಭವನವನ್ನು ನಿರ್ಮಿಸಲು ಅನುಮೋದನೆಗಾಗಿ ವಿಷಯವನ್ನು ಮಂಡಳಿ ಸಭೆಗೆ ಮಂಡಿಸಿದೆ.

ನಿರ್ಣಯ :

ಮಹದೇವಪುರ ವಿಧಾನ ಸಭಾ ಕ್ಷೇತ್ರದ ಶಾಸಕರ ಅಭಿಪ್ರಾಯ ಪಡೆದು ಮುಂದಿನ ಮಂಡಳಿ ಸಭೆಯಲ್ಲಿ ಮಂಡಿಸಲು ಸೂಚಿಸಿ ವಿಷಯವನ್ನು ಮುಂದೂಡಲಾಯಿತು.

ಕ್ರಮ : ತಾಂತ್ರಿಕ ನಿರ್ದೇಶಕರು-1, ಕಕೊಅಮ

ವಿಷಯ ಸಂಖ್ಯೆ:– 6

ವಿಷಯ:– ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ದಾವೆಗಳಿಗೆ ಸಂಬಂಧಿಸಿದಂತೆ ಮಂಡಳಿಯ ಪರವಾಗಿ ನ್ಯಾಯಾಲಯದಲ್ಲಿ ವಾದಿಸಲು **Panel of Advocates** ಪಟ್ಟಿಗೆ ಹೊಸದಾಗಿ ಶ್ರೀ.ಟಿ.ಎಸ್.ವೆಂಕಟೇಶ್ ವಕೀಲರು ರವರನ್ನು ನೇಮಿಸಿಕೊಂಡಿರುವ ಬಗ್ಗೆ ಮಂಡಳಿಯ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

******

ಶ್ರೀ.ಟಿ.ಎಸ್‌ವೆಂಕಟೇಶ್ ವಕೀಲರು ರವರು ದಿನಾಂಕ:04.12.2019 ರಂದು ಮಂಡಳಿಯ **Panel of Advocates** ಪಟ್ಟಿಗೆ ಸೇರ್ಪಡೆಗೊಳಿಸಿಕೊಳ್ಳಲು ವೈಯಕ್ತಿಕ ವಿವರಣಾ ಪತ್ರಗಳೊಂದಿಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ರವರು ಬಿ.ಕಾಂ, ಎಲ್.ಎಲ್.ಬಿ ವಿದ್ಯಾರ್ಹತೆ ಹೊಂದಿದ್ದು, ಇವರು ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್‌ನಲ್ಲಿ **Enrolment No. KAR/1131/1994** ರನ್ವಯ ವಕೀಲರಾಗಿ ನೋಂದಣಿ ಮಾಡಿಸಿರುತ್ತಾರೆ. ಇವರು ಸುಮಾರು 25 ವರ್ಷಗಳಿಂದ ವಕೀಲಿ ವೃತ್ತಿಯನ್ನು ನಿರ್ವಹಿಸುತ್ತಿದ್ದು, ಮಂಡಳಿಯ ವಕೀಲರಾಗಿ ಸೇವೆ ನಿರ್ವಹಿಸಲು ಇಚ್ಛೆಯುಳ್ಳವರಾಗಿರುತ್ತಾರೆ. ಆದುದರಿಂದ ಶ್ರೀ.ಟಿ.ಎಸ್.ವೆಂಕಟೇಶ್, ವಕೀಲರನ್ನು ಮಂಡಳಿಯ ಸಭೆಯ ಅನುಮೋದನೆ ನಿರೀಕ್ಷಿಸಿ, ಮಂಡಳಿಯ **Panel of Advocates** ಪಟ್ಟಿಗೆ ದಿನಾಂಕ:21.12.2019 ರಂದು ನೇಮಿಸಿ ಅಧಿಕೃತ ಜ್ಞಾಪನವನ್ನು ಹೊರಡಿಸಿರುವ ಕ್ರಮದ ಬಗ್ಗೆ ಮಂಡಳಿಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ :

ಮಂಡಳಿಯ ಪ್ಯಾನಲ್ ಆಫ್ ಅಡ್ವೋಕೇಟ್ಸ್ ಪಟ್ಟಿಯಲ್ಲಿ ಎಷು ಜನ ವಕೀಲರಿದ್ದಾರೆ, ಅವರಿಗೆ ಎಷ್ಟು ದಾವೆಗಳನ್ನು ನೀಡಲಾಗಿದೆ, ಸದರಿ ದಾವೆಗಳ ಪ್ರಸ್ತುತ ಹಂತ ಸ್ಥಿತಿಗತಿಗಳ ಬಗ್ಗೆ ಪರಿಶೀಲಿಸಲು ಪೂರ್ಣ ವಿವರಗಳನ್ನು ಮಾನ್ಯ ವಸತಿ ಸಚಿವರ ಆಪ್ತ ಕಾರ್ಯದರ್ಶಿಗಳ ಮೂಲಕ ಮಾನ್ಯ ಸಚಿವರ ಅವಗಾಹನೆಗೆ ಸಲ್ಲಿಸಲು ಸೂಚಿಸಲಾಯಿತು.

ಕ್ರಮ : ಆಯುಕ್ತರು, ಕಕೊಅಮ

ವಿಷಯ ಸಂಖ್ಯೆ: – 7

ವಿಷಯ: ಮೈಸೂರು ನಗರದ ಹಂಚ್ಯಾಸಾತಗಳ್ಳಿ ಬಡಾವಣೆಯಲ್ಲಿ ವಾಂಬೇ ಯೋಜನೆಯಡಿ ನಿರ್ಮಿಸಿರುವ 125 ಮನೆಗಳ ಪೈಕಿ ಮನೆ ಸಂಖ್ಯೆ:85 ರ ಮರು ಹಂಚಿಕೆ ಕುರಿತು ಮಂಡಳಿಯ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ಮೈಸೂರು ನಗರದ ಹಂಚ್ಯಾಸಾತಗಳ್ಳಿ ಬಡಾವಣೆಯಲ್ಲಿ ವಾಂಬೇ ಯೋಜನೆಯಡಿ ನಿರ್ಮಿಸಿರುವ 125 ಮನೆಗಳ ಪೈಕಿ ಮನೆ ಸಂಖ್ಯೆ:85 ನ್ನು ಶ್ರೀ.ರಂಗಣ್ಣ ಬಿನ್ ಗುರುನಾಥ್ ರವರಿಗೆ ಮಾರ್ಚ್ 2005 ರಲ್ಲಿ ಹಂಚಿಕೆ ಮಾಡಲಾಗಿದ್ದು, ಸದರಿ ಮನೆಯಲ್ಲಿ ಹಾಲಿ ವಾಸವಾಗಿದ್ದ ಶ್ರೀಮತಿ.ಸುಬ್ಬಲಕ್ಷಮ್ಮ ಕೋಂ ಶ್ರೀ.ಪಳನಿಸ್ವಾಮಿ(ಲೇ) ರವರಿಗೆ ಹಂಚ್ಯಾಸಾತಗಳ್ಳಿ ಬಡಾವಣೆಯಲ್ಲಿ ನರ್ಮ್–ಬಿ.ಎಸ್.ಯು.ಪಿ ಯೋಜನೆಯಡಿ ನಿರ್ಮಿಸಿರುವ 420 ಮನೆಗಳ ಪೈಕಿ ಹಂಚಿಕೆಯಾಗಿರುವ ಬ್ಲಾಕ್ ನಂ.20, ಜಿ–1ನ್ನು ಮಂಜೂರು ಮಾಡಿ ನಿಗಧಿತ ದಾಖಲೆಗಳನ್ನು ಕಛೇರಿಗೆ ಸಲ್ಲಿಸಿ ಮನೆ ಹಂಚಿಕಾತಿ ಪತ್ರವನ್ನು ಪಡೆಯಬಹುದಾಗಿದೆ ಎಂದು ತಿಳಿಸಿರುವ ಮೇರೆಗೆ ಶ್ರೀಮತಿ.ಸುಬ್ಬಲಕ್ಷಮ್ಮ ಕೋಂ ಪಳನಿಸ್ವಾಮಿ (ಲೇ) ರವರು ಮನೆ ನಂ.85 ರಲ್ಲಿ ನಾನೇ ವಾಸವಾಗಿರುವುದಾಗಿ ಈ ಮನೆಯ ದಾಖಲಾತಿಗಳನ್ನು ತನ್ನ ಹೆಸರಿಗೆ ಮಾಡಿಕೊಡಬೇಕೆಂದು 2013 ರಲ್ಲಿ ಮನವಿ ಸಲ್ಲಿಸಿರುತ್ತಾರೆ.

ಅದರಂತೆ ಮಂಡಳಿಯ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿದ ಸಂದರ್ಭದಲ್ಲಿ ಶ್ರೀಮತಿ.ಸುಬ್ಬಲಕ್ಷಮ್ಮ ಕೋಂ ಶ್ರೀ.ಪಳನಿಸ್ವಾಮಿ(ಲೇ) ರವರು ಮನೆ ನಂ.85 ರಲ್ಲಿ ಕಳೆದ 08 ವರ್ಷಗಳಿಂದಲೂ ಈ ಮನೆಯಲ್ಲಿ ವಾಸಿಸುತ್ತಿದ್ದಾರೆಂದು ಹಾಗೂ ಮನೆ ಹಂಚಿಕೆಯಾದ ಮೂಲ ಫಲಾನುಭವಿಯು ಶ್ರೀ.ರಂಗಣ್ಣ ಬಿನ್ ಗುರುನಾಥ್ ರವರ ಧರ್ಮಪತ್ನಿಯಾದ ಶ್ರೀಮತಿ.ಜಯಮ್ಮ ಕೋಂ ರಂಗಣ್ಣ ರವರ ಹೆಸರಿನಲ್ಲಿ ಮನೆ ನಂ.17 ಪುಲಕೇಶಿ ರಸ್ತೆ, ಬಿ.ಬಿ.ಕೇರಿ ಪೂರ್ವ–ಪಶ್ಚಿಮ 24 ಅಡಿ ಹಾಗೂ ಉತ್ತರ–ದಕ್ಷಿಣ 28 ಅಡಿ ಸ್ವತ್ತಿನಲ್ಲಿ ಸ್ವಂತ ಮನೆಯಿರುವುದು ದಾಖಲಾತಿಗಳಿಂದ ಧೃಡಪಟ್ಟಿರುತ್ತದೆ ಎಂದು ವರದಿ ನೀಡಿರುತ್ತಾರೆ.

ಮೂಲ ಫಲಾನುಭವಿಯಾದ ಶ್ರೀ.ರಂಗಣ್ಣ ಬಿನ್ ಗುರುನಾಥ್ ರವರು ಮನೆ ನಂ.85 ರ ಸಂಬಂಧಿಸಿ ವಕೀಲರಿಂದ ನೀಡಿರುವ ನೋಟಿಸಿಗೆ ಸಮಜಾಯಿಸಿಯನ್ನು ನೀಡಿರುವುದಿಲ್ಲವೆಂದು ಮಾನ್ಯ ಉಚ್ಛನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:45642/2015 ರ ಪ್ರಕರಣವನ್ನು ಸರ್ಕಾರ ಹಾಗೂ ಮಂಡಳಿಯ ವಿರುದ್ದ ಹೂಡಿರುತ್ತಾರೆ.

ಮಾನ್ಯ ಉಚ್ಛನ್ಯಾಯಾಲಯದ ತೀರ್ಪಿನ ಆದೇಶದ ದಿನಾಂಕ:27.03.2019 ರಂದು ಅರ್ಜಿದಾರರ ವಕೀಲರು ದಿನಾಂಕ:21.07.2015 ರಲ್ಲಿ ಎದುರಾಳಿಗಳಿಗೆ / ಮಂಡಳಿಗೆ ಕೊಟ್ಟಿರುವ ಲೀಗಲ್ ನೋಟಿಸನ್ನು ಪರಿಗಣಿಸಿ, ಸದರಿ ನೋಟಿಸಿನ ಬಗ್ಗೆ ಯಾವುದೇ ಕ್ರಮಕೈಗೊಳ್ಳದೆ ಇದ್ದ ಪಕ್ಷದಲ್ಲಿ ಈ ಆದೇಶ ತಲುಪಿದ 4 ತಿಂಗಳೊಳಗಾಗಿ ಮಂಡಳಿಯು ಕಾರಣಗಳೊಂದಿಗೆ ಸೂಕ್ತ ಆದೇಶ ಮಾಡುವುದು ಎಂದು ಆದೇಶಿಸಲಾಗಿರುತ್ತದೆ.

ಅದರಂತೆ ಮೂಲ ಫಲಾನುಭವಿಯಾದ ಶ್ರೀ.ರಂಗಣ್ಣ ಬಿನ್ ಗುರುನಾಥ್ ರವರಿಗೆ ದಿನಾಂಕ:30.10.2019 ರಂದು ಕಾರ್ಯಪಾಲಕ ಅಭಿಯಂತರರು, ಮೈಸೂರು ವಿಭಾಗ ರವರು ಈ ಮನೆಗೆ ಸಂಬಂಧಿಸಿದ ಎಲ್ಲಾ ಅಂಶಗಳನ್ನು ಪರಿಗಣಿಸಿ ಮೈಸೂರು ನಗರದ ಹಂಚ್ಯಾ ಸಾತಗಳ್ಳಿ ಬಡಾವಣೆಯಲ್ಲಿ ವಾಂಬೇ ಯೋಜನೆ ಯಡಿಯಲ್ಲಿ ನಿರ್ಮಿಸಿರುವ 125 ಮನೆಗಳ ಪೈಕಿ ಮನೆ ಸಂಖ್ಯೆ: 85 ರ ಹಂಚಿಕೆದಾರರಾದ ತಮ್ಮ ಮನೆಯನ್ನು ರದ್ದುಪಡಿಸಲು ಮತ್ತು ಶ್ರೀಮತಿ.ಸುಬ್ಬಲಕ್ಷಮ್ಮ ಕೋಂ ಪಳನಿಸ್ವಾಮಿ ರವರಿಗೆ ಹಂಚ್ಯಾಸಾತಗಳ್ಳಿ ಬಡಾವಣೆಯಲ್ಲಿ ನರ್ಮ್ ಬಿ.ಎಸ್.ಯು.ಪಿ ಯೋಜನೆಯಡಿ ನಿರ್ಮಿಸಿರುವ 420 ಮನೆಗಳ ಪೈಕಿ ಹಂಚಿಕೆಯಾಗಿರುವ ಬ್ಲಾಕ್ ನಂ.20, ಜಿ–1 ಹಂಚಿಕಾತಿಯನ್ನು ರದ್ದುಪಡಿಸಲು ಮತ್ತು ಮೈಸೂರು ನಗರದ ಹಂಚ್ಯಾಸಾತಗಳ್ಳಿ ಬಡಾವಣೆಯಲ್ಲಿ ವಾಂಬೇ ಯೋಜನೆಯಡಿ ನಿರ್ಮಿಸಿರುವ 125 ಮನೆಗಳ ಪೈಕಿ ಮನೆ ಸಂಖ್ಯೆ: 85 ನ್ನು ಶ್ರೀಮತಿ. ಸುಬ್ಬಲಕ್ಷಮ್ಮ ಕೋಂ ಪಳನಿಸ್ವಾಮಿ (ಲೇ) ರವರಿಗೆ ಮರುಹಂಚಿಕೆ ಮಾಡಲು ಕ್ರಮ ವಹಿಸಲಾಗುತ್ತಿದೆ ಎಂದು ಪತ್ರದ ಮುಖಾಂತರ ತಿಳಿಸಿ ಹಾಗೂ ದಿನಾಂಕ:02.11.2019 ರಂದು ಸದರಿ ಮನೆಯನ್ನು ಶ್ರೀಮತಿ.ಸುಬ್ಬಲಕ್ಷಮ್ಮ ಕೋಂ ಪಳನಿಸ್ವಾಮಿ ರವರಿಗೆ ಮರು ಹಂಚಿಕೆ ಮಾಡಲು ಮಂಡಳಿ ಸಭೆಗೆ ಮಂಡಿಸಲು ಕೋರಿ ದಿನಾಂಕ:30.10.2019 ರಂದು Speaking Order ನ್ನು ಮಾಡಿರುತ್ತಾರೆ.

ಮೇಲ್ಕಂಡ ಎಲ್ಲಾ ವಾಸ್ತವಾಂಶಗಳ ಹಿನ್ನಲೆಯಲ್ಲಿ ಮಂಡಳಿಯ ಅಧಿಕಾರಿಗಳು ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ನೀಡಿರುವ Speaking Orderನ ಆದೇಶದಂತೆ ಮೈಸೂರು ನಗರದ ಹಂಚ್ಯಾಸಾತಗಳ್ಳಿ ಬಡಾವಣೆಯಲ್ಲಿ ವಾಂಬೇ ಯೋಜನೆಯಡಿಯಲ್ಲಿ ನಿರ್ಮಿಸಿರುವ 125 ಮನೆಗಳ ಪೈಕಿ ಮನೆ ಸಂಖ್ಯೆ:85 ರ ಮೂಲಹಂಚಿಕೆದಾರರಾದ ಶ್ರೀ.ರಂಗಣ್ಣ ಬಿನ್ ಗುರುನಾಥ್ ರವರಿಗೆ ಮನೆಯನ್ನು ರದ್ದುಪಡಿಸಲು ಮತ್ತು ಶ್ರೀಮತಿ.ಸುಬ್ಬಲಕ್ಷಮ್ಮ ಕೋಂ ಪಳನಿಸ್ವಾಮಿ ರವರಿಗೆ ಹಂಚ್ಯಾಸಾತಗಳ್ಳಿ ಬಡಾವಣೆಯಲ್ಲಿ ನರ್ಮ್ ಬಿ.ಎಸ್.ಯು.ಪಿ ಯೋಜನೆಯಡಿ ನಿರ್ಮಿಸಿರುವ 420 ಮನೆಗಳ ಪೈಕಿ ಹಂಚಿಕೆಯಾಗಿರುವ ಬ್ಲಾಕ್ ನಂ.20, ಜಿ–1 ಹಂಚಿಕಾತಿಯನ್ನು ರದ್ದುಪಡಿಸಲು ಮತ್ತು ಮೈಸೂರು ನಗರದ ಹಂಚ್ಯಾಸಾತಗಳ್ಳಿ ಬಡಾವಣೆಯಲ್ಲಿ ವಾಂಬೇ ಯೋಜನೆಯಡಿ ನಿರ್ಮಿಸಿರುವ 125 ಮನೆಗಳ ಪೈಕಿ ಮನೆ ಸಂಖ್ಯೆ:85 ನ್ನು ಶ್ರೀಮತಿ.ಸುಬ್ಬಲಕ್ಷಮ್ಮ ಕೋಂ ಪಳನಿಸ್ವಾಮಿ (ಲೇ) ರವರಿಗೆ ಮರುಹಂಚಿಕೆ ಮಾಡಲು ಮಂಡಳಿ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

<u>ನಿರ್ಣಯ :</u>

ಮಂಡಿಸಿದ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಮೈಸೂರು ನಗರದ ಹಂಚ್ಯಾಸಾತಗಲ್ಲಿ ಬಡಾವಣೆಯಲಿ ವಾಂಬೆ ಯೋಜನೆಯಡಿ ನಿರ್ಮಿಸಿರುವ 125 ಮನೆಗಳ ಪೈಕಿ ಮನೆ ಸಂಖ್ಯೆ 85 ರ ಮೂಲ ಫಲಾನುಭವಿಯಾದ ಶ್ರೀ ರಂಗಣ್ಣ ಬಿನ್ ಗುರುನಾಥ್‌ರ ವಕೀಲರಿಂದ ನೀಡಿರುವ ನೋಟೀಸಿಗೆ ಮಂಡಳಿಯ ಅಧಿಕಾರಿಗಳು ಸಮಜಾಯಿಸಿ ನೀಡಿಲ್ಲದಿರುವುದರಿಂದ ಉಚ್ಚ ನ್ಯಾಯಾಲಯದಲ್ಲಿ ಸರ್ಕಾರ ಮತ್ತು ಮಂಡಳಿಯ ವಿರುದ್ಧ ದಾವೆ ಹೂಡಿರುವುದು ಗಮನಕ್ಕೆ ಬಂದಿರುತ್ತದೆ. ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ನೋಟೀಸ್ ಜಾರಿ ಮಾಡಲು ತಿಳಿಸಿ ವಿಷಯವನ್ನು ಮುಂದೂಡಲಾಯಿತು.

ಕ್ರಮ : ತಾಂತ್ರಿಕ ನಿರ್ದೇಶಕರು–1 / ಕಾರ್ಯದರ್ಶಿ, ಕಕೊಅಮ

ವಿಷಯ ಸಂಖ್ಯೆ:– 8

ವಿಷಯ :– 2019–20ನೇ ಸಾಲಿನ ಕ್ರಿಯಾ ಯೋಜನೆಯಡಿ ಭರಿಸುವ ಷರತ್ತಿಗೆ ಒಳಪಟ್ಟು ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಮಂಡಳಿ ಸಭೆಯ ಘಟನ್ನೋತ್ತರ ಅನುಮೋದನೆ ನಿರೀಕ್ಷಿಸಿ ಆಡಳಿತಾತ್ಮಕ ಅನುಮೋದನೆ ನೀಡಿರುವ ಕ್ರಮಕ್ಕೆ ಮಂಡಳಿ ಸಭೆಯ ಘಟನ್ನೋತ್ತರ ಅನುಮೋದನೆ ನೀಡುವ ಬಗ್ಗೆ.

ಮಂಡಳಿಯ ಕಾರ್ಯಪಾಲಕ ಅಭಿಯಂತರರು ನಂ–1ನೇ ವಿಭಾಗ ಬೆಂಗಳೂರು ರವರು ಸ್ಥಳೀಯ ಶಾಸಕರು, ಜನಪ್ರತಿನಿದಿಗಳು ಕೊಳಗೇರಿ ನಿವಾಸಿಗಳ ಒತ್ತಾಯದ ಮೇರೆಗೆ ಕೊಳಗೇರಿ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯ ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜು ಪಟ್ಟಿಗಳನ್ನು ತಯಾರಿಸಿ ಅನುಮೋದನೆಗಾಗಿ ಸಲ್ಲಿಸಿ, ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಮಂಡಳಿಯಲ್ಲಿ ಯಾವುದೇ ಅನುಧಾನ ಲಭ್ಯವಿಲ್ಲದೆ ಇರುವುದರಿಂದ 2019–20ನೇ ಸಾಲಿನ ಕ್ರಿಯಾ ಯೋಜನೆಯಡಿ ಭರಿಸುವ ಷರತ್ತಿಗೆ ಒಳಪಟ್ಟು ಕಾಮಗಾರಿಗಳಿಗೆ ಆಡಳಿತಾತ್ಮಕ ಮಂಜೂರಾತಿಗಾಗಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಕಾಮಗಾರಿಗಳ ವಿವರಗಳು ಕೆಳಕಂಡಂತಿವೆ.

| ಕ್ರಮ ಸಂಖ್ಯೆ | ಕಾಮಗಾರಿ ಹೆಸರು | ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ |
|---|---|---|
| 01 | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಪಟ್ಟಣದ ದಂಡುಪಾಳ್ಯ ಕೊಳಚೆ ಪ್ರದೇಶದಲ್ಲಿ ಅಡ್ಡ ರಸ್ತೆಗಳಿಗೆ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣದ ಕಾಮಗಾರಿ. | 30.00 |
| 02 | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಪಟ್ಟಣದ ಖಾಜಿಮೊಹಲ್ಲಾ ಕೊಳಚೆ ಪ್ರದೇಶದಲ್ಲಿ ಕೂಡುರಸ್ತೆಗೆ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣದ ಕಾಮಗಾರಿ. | 50.00 |
| 03 | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಪಟ್ಟಣದ ಮಾರುತಿನಗರ ಪ್ರದೇಶದಲ್ಲಿ ಅಡ್ಡ ರಸ್ತೆಗಳಿಗೆ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣದ ಕಾಮಗಾರಿ. | 25.00 |
| 04 | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಪಟ್ಟಣದ ಸಿದ್ಧಾರ್ಥನಗರ ಕೊಳಚೆ ಪ್ರದೇಶದಲ್ಲಿ ರಸ್ತೆಗಳಿಗೆ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣದ ಕಾಮಗಾರಿ. | 25.00 |
| 05 | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಪಟ್ಟಣದ ಪಾರ್ವತಿಪುರ ಕೊಳಚೆ ಪ್ರದೇಶದಲ್ಲಿ ರಸ್ತೆಗಳಿಗೆ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣದ ಕಾಮಗಾರಿ. | 25.00 |
| 06 | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಪಟ್ಟಣದ ಗೌತಮ್ ಕಾಲೋನಿ ಕೊಳಚೆ ಪ್ರದೇಶದಲ್ಲಿ ರಸ್ತೆಗಳಿಗೆ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣದ ಕಾಮಗಾರಿ. | 40.00 |
| 07 | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಪಟ್ಟಣದ ಅಂಬೇಡ್ಕರ್ ಕಾಲೋನಿ ಕೊಳಚೆ ಪ್ರದೇಶದಲ್ಲಿ ಮಳೆ ನೀರಿನ ಚರಂಡಿ (Storm Water Drain) ನಿರ್ಮಾಣದ ಕಾಮಗಾರಿ. | 50.00 |
| 08 | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಪಟ್ಟಣದ ಕುರುಬರಪೇಟೆ ಪ್ರದೇಶದಲ್ಲಿ ಅಡ್ಡ ರಸ್ತೆಗಳಿಗೆ ಕಾಂಕ್ರೀಟ್ ರಸ್ತೆ ನಿರ್ಮಾಣದ ಕಾಮಗಾರಿ. | 35.00 |
| 09 | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಪಟ್ಟಣದ ವಿವಿಧ ಪ್ರದೇಶಗಳಲ್ಲಿ 5 ಸಂಖ್ಯೆ ಬೋರ್‌ವೆಲ್ ಕೊರೆದು ಪಂಪ್ ಮತ್ತು ಮೋಟಾರ್‌ಗಳನ್ನು ಅಳವಡಿಸುವ ಕಾಮಗಾರಿ. | 50.00 |
| 10 | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಪಟ್ಟಣದ ವಿವಿಧ ಪ್ರದೇಶಗಳಲ್ಲಿ 3 ಸಂಖ್ಯೆ ಬೋರ್‌ವೆಲ್‌ಗಳಿಗೆ ಮತ್ತು ಈಗಾಗಲೇ ಕೊರೆದಿರುವ 5 ಸಂಖ್ಯೆ ಬೋರ್‌ವೆಲ್‌ಗಳಿಗೆ ಪಂಪ್ ಮತ್ತು ಮೋಟಾರ್‌ಗಳನ್ನು ಅಳವಡಿಸುವ ಕಾಮಗಾರಿಯ ಅಂದಾಜು ವೆಚ್ಚ. | 50.00 |
| | ಒಟ್ಟು | **380.00** |

ಅದರಂತೆ ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಮಂಡಳಿಯಲ್ಲಿ ಯಾವುದೇ ಅನುಧಾನ ಲಭ್ಯವಿಲ್ಲದೆ ಇರುವುದರಿಂದ 2019–20ನೇ ಸಾಲಿನ ಕ್ರಿಯಾ ಯೋಜನೆಯಡಿ ಭರಿಸಿ ಸೇರಿಸುವ ಷರತ್ತಿಗೆ ಒಳಪಟ್ಟು ಮಾನ್ಯ ಆಯುಕ್ತರು ಮಂಡಳಿ ಸಭೆಯ ಘಟನ್ನೋತ್ತರ ಅನುಮೋದನೆ ನಿರೀಕ್ಷಿಸಿ ಆಡಳಿತಾತ್ಮಕ ಅನುಮೋದನೆ ನೀಡಿ ತ್ವರಿತವಾಗಿ ಟೆಂಡರ್ ಅನ್ನು ಆಹ್ವಾನಿಸಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಸೂಚಿಸಿರುತ್ತಾರೆ. ಅದರಂತೆ ಸದರಿ ಕಾಮಗಾರಿಗಳನ್ನು ನಿಯಮಾನುಸಾರ ಟೆಂಡರ್ ಕರೆದು ಕಾಮಗಾರಿ ಕೈಗೊಳ್ಳಲು ಮತ್ತು ಸದರಿ ಕಾಮಗಾರಿಗಳನ್ನು 2019–20ನೇ ಸಾಲಿನ ಕ್ರಿಯಾ ಯೋಜನೆಯಡಿಯಲ್ಲಿ ಅಳವಡಿಸಿಕೊಳ್ಳಲು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರುಗಳಿಗೆ ಅಗತ್ಯ ಕ್ರಮ ವಹಿಸಲು ಸೂಚಿಸಲಾಗಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ

ಅದರಂತೆ ದಿನಾಂಕ:06/11/2019ರಂದು ನಡೆದ ಮಂಡಳಿ ಸಭೆಗೆ ವಿಷಯ ಸಂಖ್ಯೆ (17) ರಲ್ಲಿ ಸದರಿ ವಿಷಯವನ್ನು ಮಂಡಳಿಯ ಘಟನ್ನೋತ್ತರ ಮಂಜೂರಾತಿಗಾಗಿ ಮಂಡಿಸಲಾಗಿರುತ್ತದೆ. ನಡವಳಿ ನಿರೀಕ್ಷಿಸಿದೆ. ಮುಂದುವರೆದು ದಿನಾಂಕ:03.01.2020ರಂದು ಮಾನ್ಯ ಆಯುಕ್ತರು, ಸದರಿ ಕಾಮಾಗಾರಿಗಳನ್ನು ಮುಂದಿನ ಮಂಡಳಿ ಸಭೆಯಲ್ಲಿ ಮಂಡಿಸಲು ಸೂಚಿಸಿರುತ್ತಾರೆ.

ಮೇಲೆ ವಿವರಿಸಿರುವ ಅಂಶಗಳಂತೆ ಮಂಡಳಿ ಸಭೆಯ ಘಟನ್ನೋತ್ತರ ಅನುಮೋದನೆ ನಿರೀಕ್ಷಿಸಿ ಆಡಳಿತಾತ್ಮಕ ಮಂಜೂರಾತಿ ನೀಡಿರುವ ಕ್ರಮಕ್ಕೆ ಮಂಡಳಿ ಸಭೆಯ ಘಟನ್ನೋತ್ತರ ಮಂಜೂರಾತಿಗಾಗಿ ಮತ್ತೊಮ್ಮೆ ವಿಷಯವನ್ನು ತಯಾರಿಸಿ ಮಂಡಿಸಿದೆ.

**<u>ನಿರ್ಣಯ :</u>**

**ಘಟನೋತ್ತರ ಅನುಮೋದನೆ ನೀಡಲಾಯಿತು.**

**ಕ್ರಮ : ತಾಂತ್ರಿಕ ನಿರ್ದೇಶಕರು–1, ಕಕೊಅಮ**

ವಿಷಯ:– 9

ವಿಷಯ:- ಮಂಡಳಿಯಲ್ಲಿ RAY/PMAY ವಸತಿ ಯೋಜನೆಯಡಿಯಲ್ಲಿ ಬೆಂಗಳೂರು & ತುಮಕೂರು ನಗರ/ಪಟ್ಟಣಗಳ ವಿವಿಧ ಕೊಳಚೆ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ ಕೈಗೊಂಡಿರುವ ಮನೆಗಳ ನಿರ್ಮಾಣ ಕಾಮಗಾರಿಗಳ ಗುತ್ತಿಗೆಯ ಕಾಲಾವಧಿ ವಿಸ್ತರಣೆಗೆ ಮಂಡಳಿ ಸಭೆಯ ಅನುಮೋದನೆ ನೀಡುವ ಬಗ್ಗೆ.

ಮಂಡಳಿಯಲ್ಲಿ RAY/PMAY ವಸತಿ ಯೋಜನೆಯಡಿಯಲ್ಲಿ ಬೆಂಗಳೂರು & ತುಮಕೂರು ನಗರ/ಪಟ್ಟಣಗಳ ವಿವಿಧ ಕೊಳಚೆ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ ಕೈಗೊಂಡಿರುವ ಮನೆಗಳ ನಿರ್ಮಾಣ ಕಾಮಗಾರಿಗಳು ನಿಗಧಿತ ಅವಧಿಯಲ್ಲಿ ಪೂರ್ಣಗೊಳ್ಳದಿರುವ ಹಿನ್ನೆಯಲ್ಲಿ ಗುತ್ತಿಗೆ ಕಾಲಾವಧಿ ವಿಸ್ತರಣೆಗೆ ಅನುಮೋದನೆ ಕುರಿತಂತೆ ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ಸಲ್ಲಿಸಿರುವ ಪ್ರಸ್ತಾವನೆಗಳ ಬಗ್ಗೆ ದಿನಾಂಕ:11/01/2019ರಂದು ನಡೆದ ಮಂಡಳಿ ಸಭೆಯ ನಿರ್ಣಯದಂತೆ ತಾಂತ್ರಿಕ ಸಲಹಾ ಸಮಿತಿ ಸಭೆಯ ಸಲಹೆಯಂತೆ ನಿಯಮಾನುಸಾರ ಕ್ರಮ ವಹಿಸಲು ಸೂಚಿಸಲಾಗಿರುತ್ತದೆ ಅದರಂತೆ ದಿನಾಂಕ: 18/09/2019 ರಂದು ನಡೆದ ತಾಂತ್ರಿಕ ಸಲಹಾ ಸಮಿತಿ ಸಭೆಗೆ ಗುತ್ತಿಗೆ ಕಾಲಾವಧಿ ವಿಸ್ತರಣೆಗೆ ಪ್ರಸ್ತಾವನೆಯನ್ನು ಮಂಡಿಸಲಾಗಿದ್ದು ಸದರಿ ಸಭೆಯ ನಡವಳಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ದಂಡ ರಹಿತ ಗುತ್ತಿಗೆ ಕಾಲಾವಧಿಯನ್ನು ವಿಸ್ತರಿಸಬಹುದಾಗಿರುತ್ತದೆ ಎಂದು ತೀರ್ಮಾನಿಸಲಾಗಿರುತ್ತದೆ.

**ಕ್ರಮ ಸಂಖ್ಯೆ: 9(ಎ) ಬೆಂಗಳೂರು ನಗರದ ಯಲಹಂಕ ವಿಧಾನ ಸಭಾ ಕ್ಷೇತ್ರದ ವಿವಿಧ 3 ಕೊಳಗೇರಿ ಪ್ರದೇಶಗಳಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಮೂಲಭೂತ ಸೌಲಭ್ಯಗಳೊಂದಿಗೆ 507 ಮನೆಗಳ ನಿರ್ಮಾಣ ಕಾಮಗಾರಿಯ ಗುತ್ತಿಗೆ ಕಾಲಾವಧಿ ವಿಸ್ತರಣೆಗೆ ಅನುಮೋದನೆ ನೀಡುವ ಬಗ್ಗೆ.**

ಬೆಂಗಳೂರು ನಗರದ ಯಲಹಂಕ ವಿಧಾನ ಸಭಾ ಕ್ಷೇತ್ರದ ವಿವಿಧ 3 ಕೊಳಗೇರಿ ಪ್ರದೇಶಗಳಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಮೂಲಭೂತ ಸೌಲಭ್ಯಗಳೊಂದಿಗೆ 507 ಮನೆಗಳ ನಿರ್ಮಾಣ ಕಾಮಗಾರಿಗೆ ದಿನಾಂಕ:06/05/2017 ರಂದು **M/s D.E.C Infrastructure & Project (India) Pvt. Ltd.,** ರವರಿಗೆ ಕಾರ್ಯದೇಶ ನೀಡಿ ಕಾಮಗಾರಿಯನ್ನು ಪೂರ್ಣಗೊಳಿಸಲು ಮಳೆಗಾಲ ಸೇರಿದಂತೆ 24 ತಿಂಗಳ ಕಾಲಾವಕಾಶ ನೀಡಲಾಗಿರುತ್ತದೆ.

ಕಾರ್ಯಪಾಲಕ ಅಭಿಯಂತರರು ನಂ–2ನೇ ವಿಭಾಗ ರವರು ತಮ್ಮ ವರದಿಯಲ್ಲಿ ಮನೆಗಳ ನಿರ್ಮಾಣಕ್ಕೆ ಹಾಲೀ ಇರುವ ಕೊಳಚೆ ಪ್ರದೇಶಗಳಲ್ಲಿ ನಿರ್ಮಿಸ ಬೇಕಾಗಿದ್ದು, ಮಂಡಳಿಯಿಂದ Transit shed Accommodation ಅವಕಾಶ ಇಲ್ಲದ ಪ್ರಯುಕ್ತ ನಿವಾಸಿಗಳು ತಾತ್ಕಾಲಿಕವಾಗಿ ಗುಡಿಸಲುಗಳನ್ನು ಹಾಕಿಕೊಂಡು ತಾವು ವಾಸಿಸುತ್ತಿದ್ದ ಮನೆಗಳನ್ನು ತೆರವುಗೊಳಿಸಲು ವಿಳಂಭ ಮಾಡಿರುವುದರಿಂದ ಗುತ್ತಿಗೆದಾರರಿಗೆ ಹಂತ–ಹಂತವಾಗಿ ವಿವಿಧ ದಿನಾಂಕಗಳಲ್ಲಿ ಮನೆಗಳ ನಿರ್ಮಾಣಕ್ಕೆ ಜಾಗವನ್ನು ಹಸ್ತಾಂತರಿಸಲಾಗಿರುತ್ತದೆ ಹಾಗೂ ಪ್ರಸ್ತುತ ಗುತ್ತಿಗೆದಾರರು 507 ಮನೆಗಳ ಪೈಕಿ 385 ಮನೆಗಳ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಿ ಫಲಾನುಭವಿಗಳಿಗೆ ವಾಸಕ್ಕೆ ನೀಡಲಾಗಿರುತ್ತದೆ ಉಳಿದ ಮನೆಗಳು ಪೂರ್ಣಗೊಳ್ಳುವ ಹಂತದಲ್ಲಿದ್ದು, ಒಟ್ಟಾರೆ ಉಳಿಕೆ ಮನೆಗಳ ನಿರ್ಮಾಣ ಕಾಮಗಾರಿಗಳ ಸ್ಥಳವನ್ನು 2019ರ ಅಕ್ಟೋಬರ್ ಮಾಹೆಯಲ್ಲಿ ಸಂಪೂರ್ಣವಾಗಿ ಹಸ್ತಾಂತರ ಮಾಡಲು ಕ್ರಮ ಕೈಗೊಳ್ಳಲಾಗುವುದು ಹಾಗೂ ಸದರಿ ಕಾಮಗಾರಿಗಳನ್ನು ದಿನಾಂಕ 26–04–2020 ರ ಅವಧಿಯೊಳಗೆ ಪೂರ್ಣಗೊಳಿಸಲು ಗುರಿ ಹೊಂದಲಾಗಿರುತ್ತದೆ. ಮೇಲ್ಕಂಡ ಎಲ್ಲ ಕಾರಣಗಳಿಂದ ಗುತ್ತಿಗೆದಾರರು ಕಾಮಗಾರಿಯನ್ನು ಕಾಮಗಾರಿಯನ್ನು ನಿಗಧಿತ ದಿನಾಂಕದೊಳಗೆ ಪೂರ್ಣಗೊಳಿಸಲು ಸಾಧ್ಯ ವಿಲ್ಲದೇ ಇದುವುದರಿಂದ ದಿನಾಂಕ: 06–05–2019 ರಿಂದ 26–04–2020 ರವರೆಗೆ ಅಂದರೆ 356 ದಿನಗಳಿಗೆ ದಂಡ ರಹಿತ ಗುತ್ತಿಗೆ ಕಾಲಾವಧಿ ವಿಸ್ತರಣೆ ಕೋರಿ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

| ಕಾಮಗಾರಿಯ ಹೆಸರು | ಕಾರ್ಯಾದೇಶ ನೀಡಿದ ದಿನಾಂಕ: | ಗುತ್ತಿಗೆದಾರರ ಹೆಸರು | ಗುತ್ತಿಗೆ ಮೊತ್ತ ರೂ.ಲಕ್ಷಗಳಲ್ಲಿ | ಕಾಮಗಾರಿಯನ್ನು ಪೂರ್ಣಗೊಳಿ ಸಬೇಕಾದ ದಿನಾಂಕ | ವಾಸ್ತವವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕೋರಿದ ದಿನಾಂಕ | ಗುತ್ತಿಗೆ ಕಾಲಾವಧಿ ವಿಸ್ತರಿಸಿದ ದಿನಾಂಕ |
|---|---|---|---|---|---|---|
| 1 | 2 | 3 | 4 | 5 | 6 | 7 |
| ಬೆಂಗಳೂರು ನಗರದ ಯಲಹಂಕ ವಿಧಾನ ಸಭಾ ಕ್ಷೇತ್ರದ ವಿವಿಧ 3 ಕೊಳಗೇರಿ ಪ್ರದೇಶಗಳಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಮೂಲಭೂತ ಸೌಲಭ್ಯಗಳೊಂದಿಗೆ 507 ಮನೆಗಳ ನಿರ್ಮಾಣ ಕಾಮಗಾರಿ | 06.05.2017 | M/s D.E.C Infrastructure & Project (India) Pvt. Ltd., | 2934.69 | 26.04.2020 | 05.05.2019 | ದಿನಾಂಕ: 06–05–2019 ರಿಂದ 26–04–2020 ರವರೆಗೆ 356 ದಿವಸಗಳು |

**ಕ್ರಮ ಸಂಖ್ಯೆ:_ 9(ಬಿ) ಬೆಂಗಳೂರು ನಗರದ ಸರ್ವಜ್ಞ ನಗರ ಮತ್ತು ಪುಲಿಕೇಶಿ ನಗರ ವಿಧಾನ ಸಭಾ ಕ್ಷೇತ್ರದ ವಿವಿಧ 9 ಕೊಳಗೇರಿ ಪ್ರದೇಶಗಳಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಮೂಲಭೂತ ಸೌಲಭ್ಯಗಳೊಂದಿಗೆ 662 (ಜಿಎಫ್) & 100 (ಜಿ+4) 762 ಮನೆಗಳ ನಿರ್ಮಾಣ ಕಾಮಗಾರಿ**

ಬೆಂಗಳೂರು ನಗರದ ಬೆಂಗಳೂರು ನಗರದ ಸರ್ವಜ್ಞ ನಗರ ಮತ್ತು ಪುಲಿಕೇಶಿ ನಗರ ವಿಧಾನ ಸಭಾ ಕ್ಷೇತ್ರದ ವಿವಿಧ 9 ಕೊಳಗೇರಿ ಪ್ರದೇಶಗಳಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಮೂಲಭೂತ ಸೌಲಭ್ಯಗಳೊಂದಿಗೆ 662 (ಜಿಎಫ್)&100 (ಜಿ+4) 762 ಮನೆಗಳ ನಿರ್ಮಾಣ ಕಾಮಗಾರಿಯನ್ನು ಮೆ:: ರಾಮಲಿಂಗಂ ಕನ್ಸ್‌ಟ್ರಕ್ಷನ್ಸ್ ಕಂಪೆನೀ ಪ್ರೈವೇಟ್ ಲಿಮಿಟೆಡ್ ರವರಿಗೆ ನೀಡಲಾಗಿದೆ. ಅದರಂತೆ ಗುತ್ತಿಗೆದಾರರು ಕಾಮಗಾರಿಯನ್ನು ಪೂರ್ಣಗೊಳಿಸಲು 24 ತಿಂಗಳು ಕಾಲಾವಕಾಶ ನೀಡಲಾಗಿದೆ.

ಕಾರ್ಯಪಾಲಕ ಅಭಿಯಂತರರು ನಂ–2ನೇ ವಿಭಾಗ ರವರು ಮನೆಗಳನ್ನು ಹಾಲಿ ಕೊಳಚೆ ಪ್ರದೇಶಗಳಲ್ಲಿ ನಿರ್ಮಿಸ ಬೇಕಾಗಿದ್ದು, ಮಂಡಳಿಯಿಂದ Transit shed Accommodation ಅವಕಾಶ ಇಲ್ಲದ ಪ್ರಯುಕ್ತ ನಿವಾಸಿಗಳು ತಾತ್ಕಾಲಿಕವಾಗಿ ಗುಡಿಸಲುಗಳನ್ನು ಹಾಕಿಕೊಂಡು ತಾವು ವಾಸಿಸುತ್ತಿದ್ದ ಮನೆಗಳನ್ನು ತೆರವುಗೊಳಿಸಲು ವಿಳಂಭ ಮಾಡಿರುವುದರಿಂದ ಗುತ್ತಿಗೆದಾರರಿಗೆ ಹಂತ–ಹಂತವಾಗಿ ವಿವಿಧ ದಿನಾಂಕಗಳಲ್ಲಿ ಮನೆಗಳ ನಿರ್ಮಾಣಕ್ಕೆ ಜಾಗವನ್ನು ಹಸ್ತಾಂತರಿಸಲಾಗಿರುತ್ತದೆ ಹಾಗೂ ಪ್ರಾರಂಭದಲ್ಲಿ ಫಲಾನುಭವಿಗಳಿಂದ ಮಂಡಳಿಗೆ ಪಾವತಿಸಬೇಕಾಗಿದ್ದ ವಂತಿಕೆ ಹಣವನ್ನು ಪಾವತಿಸುವಲ್ಲಿ ವಿಳಂಬವಾಗಿರುತ್ತದೆ ಮತ್ತು ಬಿ.ಬಿ.ಎಂ.ಪಿ. ವತಿಯಿಂದ ಸದರಿ ಪ್ರದೇಶದಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿದ್ದರಿಂದ ಕಟ್ಟಡ ಸಾಮಗ್ರಿಗಳನ್ನು ಸಂಗ್ರಹಿಸಲು ಸ್ಥಳ ಲಭ್ಯವಿಲ್ಲದ ಕಾರಣ ಹಂತ–ಹಂತವಾಗಿ ಸಾಮಗ್ರಿಗಳನ್ನು ಸಾಗಿಸಿಕೊಂಡು ಕಾಮಗಾರಿಯನ್ನು ನಿರ್ವಹಿಸಲಾಗಿರುತ್ತದೆ.

ಹಾಗೂ ಪ್ರಸ್ತುತ ಗುತ್ತಿಗೆದಾರರು 762 ಮನೆಗಳ ಪೈಕಿ 541 ಮನೆಗಳನ್ನು ಪ್ರಾರಂಭಿಸಿ ಈ ಪೈಕಿ 343 ಮನೆಗಳು ಪೂರ್ಣಗೊಂಡಿದ್ದು, ಫಲಾನುಭವಿಗಳಿಗೆ ವಾಸಕ್ಕೆ ನೀಡಲಾಗಿದೆ. ಉಳಿದ 198 ಮನೆಗಳು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. ಉಳಿಕೆ 221 ಮನೆಗಳ ನಿರ್ಮಾಣ ಕಾಮಗಾರಿಗಳ ಸ್ಥಳವನ್ನು 2020 ನೇ ಸಾಲಿನ ಜನವರಿ ತಿಂಗಳೊಳಗಾಗಿ ಸಂಪೂರ್ಣವಾಗಿ ಹಸ್ತಾಂತರಿಸಲು ಕ್ರಮಕೈಗೊಂಡು ದಿನಾಂಕ: 12–09–2020ರ ಒಳಗೆ ಎಲ್ಲಾ ರೀತಿಯಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲು ಗುತ್ತಿಗೆದಾರರು ದಿನಾಂಕ: 05/07/2019 ರಿಂದ 12/09/2020 ರ ವರೆಗೆ ಅಂದರೆ 436 ದಿನಗಳಿಗೆ ದಂಡ ರಹಿತ ಗುತ್ತಿಗೆ ಅವಧಿ ವಿಸ್ತರಣೆಗೆ ಅನುಮೋದನೆ ಕೋರಿ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

| ಕಾಮಗಾರಿಯ ಹೆಸರು | ಕಾರ್ಯಾದೇಶ ನೀಡಿದ ದಿನಾಂಕ: | ಗುತ್ತಿಗೆದಾರರ ಹೆಸರು | ಗುತ್ತಿಗೆ ಮೊತ್ತ ರೂ.ಲಕ್ಷಗಳಲ್ಲಿ | ಕಾಮಗಾರಿಯನ್ನು ಪೂರ್ಣಗೊಳಿಸಬೇಕಾದ ದಿನಾಂಕ | ವಾಸ್ತವವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕೋರಿದ ದಿನಾಂಕ | ಗುತ್ತಿಗೆ ಕಾಲಾವಧಿ ವಿಸ್ತರಿಸಿದ ದಿನಾಂಕ |
|---|---|---|---|---|---|---|
| 1 | 2 | 3 | 4 | 5 | 6 | 7 |
| **ಬೆಂಗಳೂರು ನಗರದ ಸರ್ವಜ್ಞನಗರ ಮತ್ತು ಪುಲಿಕೇಶಿ ನಗರ ವಿಧಾನ ಸಭಾ ಕ್ಷೇತ್ರದ ವಿವಿಧ 9 ಕೊಳಗೇರಿ ಪ್ರದೇಶಗಳಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಮೂಲಭೂತ ಸೌಲಭ್ಯಗಳೊಂದಿಗೆ 662 (ಜಿಎಫ್) & 100 (ಜಿ+4) 507 ಮನೆಗಳ ನಿರ್ಮಾಣ ಕಾಮಗಾರಿ** | **05/07/2017** | **ರಾಮಲಿಂಗಂ ಕನ್‌ಸ್ಟ್ರಕ್ಷನ್ಸ್ ಕಂಪೆನಿ ಪ್ರೈವೇಟ್ ಲಿ.** | **4262.75** | **04/07/2019** | **12-09-2020** | **ದಿನಾಂಕ: 05-07-2019 ರಿಂದ 12-09-2020 ರವರೆಗೆ 436 ದಿವಸಗಳು** |

**ಕ್ರಮ ಸಂಖ್ಯೆ. 9(ಸಿ):-ಬೆಂಗಳೂರು ನಗರದ ಬಿ.ಟಿ.ಎಂ. ಲೇಔಟ್ ವಿಧಾನ ಸಭಾ ಕ್ಷೇತ್ರದ ವಿವಿಧ ಕೊಳಗೇರಿ ಪ್ರದೇಶಗಳಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಮೂಲಭೂತ ಸೌಲಭ್ಯಗಳೊಂದಿಗೆ 963 (ಜಿಎಫ್) & 45 (ಜಿ+4) ಒಟ್ಟು 1008 ಮನೆಗಳ ನಿರ್ಮಾಣ ಕಾಮಗಾರಿ.**

ಬೆಂಗಳೂರು ನಗರದ ಬಿ.ಟಿ.ಎಂ. ಲೇಔಟ್ ವಿಧಾನ ಸಭಾ ಕ್ಷೇತ್ರದ ವಿವಿಧ ಕೊಳಗೇರಿ ಪ್ರದೇಶಗಳಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಮೂಲಭೂತ ಸೌಲಭ್ಯಗಳೊಂದಿಗೆ 963 (ಜಿಎಫ್) & 45 (ಜಿ+4) ಒಟ್ಟು 1008 ಮನೆಗಳ ನಿರ್ಮಾಣ ಕಾಮಗಾರಿಯನ್ನು ಮೆ: ಮೇವರಿಕ್ ಹೋಲ್ಡಿಂಗ್ಸ್ & ಇನ್‌ವೆಸ್ಟ್‌ಮೆಂಟ್ ಪ್ರೈ.ಲಿ ರವರಿಗೆ ರವರಿಗೆ ದಿನಾಂಕ: 06-05-2017 ರಂದು ನೀಡಲಾಗಿದೆ ಅದರಂತೆ ಗುತ್ತಿಗೆದಾರರು ಕಾಮಗಾರಿಯನ್ನು ಪೂರ್ಣಗೊಳಿಸಲು 24 ತಿಂಗಳು ಕಾಲಾವಕಾಶ ನೀಡಲಾಗಿದೆ.

ಕಾರ್ಯಪಾಲಕ ಅಭಿಯಂತರರು ನಂ-2ನೇ ವಿಭಾಗ ರವರು ತಮ್ಮ ವರದಿಯಲ್ಲಿ ಮನೆಗಳ ನಿರ್ಮಾಣಕ್ಕೆ ಹಾಲೀ ಇರುವ ಕೊಳಚೆ ಪ್ರದೇಶಗಳಲ್ಲಿ ನಿರ್ಮಿಸ ಬೇಕಾಗಿದ್ದು, ಮಂಡಳಿಯಿಂದ Transit shed Accommodation ಅವಕಾಶ ಇಲ್ಲದ ಪ್ರಯುಕ್ತ ನಿವಾಸಿಗಳು ತಾತ್ಕಾಲಿಕವಾಗಿ ಗುಡಿಸಲುಗಳನ್ನು ಹಾಕಿಕೊಂಡು ತಾವು ವಾಸಿಸುತ್ತಿದ್ದ ಮನೆಗಳನ್ನು ತೆರವುಗೊಳಿಸಲು ವಿಳಂಭ ಮಾಡಿರುವುದರಿಂದ ಗುಡಿಸಲುಗಳನ್ನು ತೆರವುಗೊಳಿಸಲು ಗುತ್ತಿಗೆದಾರರಿಗೆ ಹಂತ-ಹಂತವಾಗಿ ವಿವಿಧ ದಿನಾಂಕಗಳಲ್ಲಿ ಮನೆಗಳ ನಿರ್ಮಾಣಕ್ಕೆ ಜಾಗವನ್ನು ಹಸ್ತಾಂತರಿಸಲಾಗಿರುತ್ತದೆ ಹಾಗೂ ಪ್ರಾರಂಭದಲ್ಲಿ ಫಲಾನುಭವಿಗಳಿಂದ ಮಂಡಳಿಗೆ ಪಾವತಿಸಬೇಕಾಗಿದ್ದ ವಂತಿಕೆ ಹಣವನ್ನು ಮಂಡಳಿಗೆ ಸಹಾ ಪಾವತಿಸುವಲ್ಲಿ ವಿಳಂಬವಾಗಿರುತ್ತದೆ

ಪ್ರಸ್ತುತ ಗುತ್ತಿಗೆದಾರರು 1008 ಮನೆಗಳ ಪೈಕಿ 538 ಮನೆಗಳನ್ನು ಪ್ರಾರಂಭಿಸಿ ಈ ಪೈಕಿ 348 ಮನೆಗಳು ಪೂರ್ಣಗೊಂಡಿದ್ದು, ಫಲಾನುಭವಿಗಳಿಗೆ ವಾಸಕ್ಕೆ ನೀಡಲಾಗಿದೆ. ಉಳಿದ 180 ಮನೆಗಳು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. ಉಳಿಕೆ 470 ಮನೆಗಳ ನಿರ್ಮಾಣ ಕಾಮಗಾರಿಗಳ ಸ್ಥಳವನ್ನು 2019ರ ಡಿಸೆಂಬರ್ ಮಾಹೆಯಲ್ಲಿ ಸಂಪೂರ್ಣವಾಗಿ ಹಸ್ತಾಂತರ ಮಾಡಲು ಕ್ರಮ ಕೈಗೊಂಡು, ದಿನಾಂಕ 06/05/2020 ರ ಅವಧಿಯೊಳಗೆ ಪೂರ್ಣಗೊಳಿಸಲು ಗುರಿ ಹೊಂದಲಾಗಿರುವುದಾಗಿ ವರದಿಸಿ ಈ ಹಿನ್ನೆಲೆಯಲ್ಲಿ ಗುತ್ತಿಗೆದಾರರು ದಿನಾಂಕ: 06/05/2019 ರಿಂದ 06/05/2020 ರವರೆಗೆ ಅಂದರೆ 366 ದಿನಗಳಿಗೆ ದಂಡ ರಹಿತ ಗುತ್ತಿಗೆ ಕಾಲಾವಧಿ ವಿಸ್ತರಣೆಗೆ 366 ದಿನಗಳ ವಿಸ್ತರಣೆಗೆ ಅನುಮೋದನೆ ಕೋರಿರುತ್ತಾರೆ.

| ಕಾಮಗಾರಿಯ ಹೆಸರು | ಕಾರ್ಯಾದೇಶ ನೀಡಿದ ದಿನಾಂಕ: | ಗುತ್ತಿಗೆದಾರರ ಹೆಸರು | ಗುತ್ತಿಗೆ ಮೊತ್ತ ರೂ.ಲಕ್ಷಗಳಲ್ಲಿ | ಕಾಮಗಾರಿಯನ್ನು ಪೂರ್ಣಗೊಳಿಸಬೇಕಾದ ದಿನಾಂಕ | ವಾಸ್ತವವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕೋರಿದ ದಿನಾಂಕ | ಗುತ್ತಿಗೆ ಕಾಲಾವಧಿ ವಿಸ್ತರಿಸಿದ ದಿನಾಂಕ |
|---|---|---|---|---|---|---|
| 1 | 2 | 3 | 4 | 5 | 6 | 7 |
| ಬೆಂಗಳೂರು ನಗರದ ಬಿ.ಟಿ.ಎಂ. ಲೇಔಟ್ ವಿಧಾನ ಸಭಾ ಕ್ಷೇತ್ರದ ವಿವಿಧ ಕೊಳಗೇರಿ ಪ್ರದೇಶಗಳಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಮೂಲಭೂತ ಸೌಲಭ್ಯಗಳೊಂದಿಗೆ 1008 ಮನೆಗಳ ನಿರ್ಮಾಣ ಕಾಮಗಾರಿ | 06/05/2017 | ಮೆ: ಮೇವರಿಕ್ ಹೋಲ್ಡಿಂಗ್ಸ್ & ಇನ್‌ವೆಸ್ಟ್‌ಮೆಂಟ್ ಪ್ರೈ.ಲಿ | 5864.57 | 05/05/2019 | 06-05-2020 | ದಿನಾಂಕ:06-05-2019 ರಿಂದ 06-05-2020 ರವರೆಗೆ 366 ದಿವಸಗಳು |

**ಕ್ರಮ ಸಂಖ್ಯೆ 9(ಡಿ):- ಬೆಂಗಳೂರು ನಗರ ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಮಹಾಲಿಂಗೇಶ್ವರ ಕೊಳಚೆ ಪ್ರದೇಶದಲ್ಲಿ ರೇ ಯೋಜನೆಯಡಿಯಲ್ಲಿ ಮೂಲ ಭೂತ ಸೌಲಭ್ಯಗಳೊಂದಿಗೆ 273(ಜಿ) (ಪ್ಯಾಕೇಜ್-4) ಮಾದರಿಯ ಮನೆಗಳ ನಿರ್ಮಾಣ ಕಾಮಗಾರಿ .**

ಬೆಂಗಳೂರು ನಗರ ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಮಹಾಲಿಂಗೇಶ್ವರ ಕೊಳಚೆ ಪ್ರದೇಶದಲ್ಲಿ ರೇ ಯೋಜನೆಯಡಿಯಲ್ಲಿ ಮೂಲ ಭೂತ ಸೌಲಭ್ಯಗಳೊಂದಿಗೆ 273(ಜಿ) (ಪ್ಯಾಕೇಜ್-4) ಮಾದರಿಯ ಮನೆಗಳ ನಿರ್ಮಾಣ ಕಾಮಗಾರಿಯನ್ನು ಶ್ರೀ ಜಿ.ಚಂದ್ರೇಗೌಡ, ಪ್ರಥಮ ದರ್ಜೆ ಗುತ್ತಿಗೆದಾರರು ಇವರಿಗೆ ದಿನಾಂಕ:26/09/2014ರಂದು ವಹಿಸಲಾಗಿರುತ್ತದೆ. ಟೆಂಡರ್ ಕರಾರಿನಂತೆ ಕಾಮಗಾರಿಯನ್ನು ಪೂರ್ಣಗೊಳಿಸಲು 18 ತಿಂಗಳ ಕಾಲಾವಕಾಶ ನೀಡಲಾಗಿದ್ದು, ದಿನಾಂಕ: 25-03-2016 ರೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ.

ಕಾರ್ಯಪಾಲಕ ಅಭಿಯಂತರರು ನಂ-2ನೇವಿಭಾಗ ರವರು ಮನೆಗಳ ನಿರ್ಮಾಣವನ್ನು ಹಾಲಿ ಕೊಳಚೆ ಪ್ರದೇಶಗಳಲ್ಲಿ ನಿರ್ಮಿಸ ಬೇಕಾಗಿದ್ದು, ಮಂಡಳಿಯಿಂದ ನಿವಾಸಿಗಳು ತಾತ್ಕಾಲಿಕವಾಗಿ ಗುಡಿಸಲುಗಳನ್ನು ನಿರ್ಮಿಸಲು ಹಾಕಿಕೊಂಡು ತಾವು ವಾಸಿಸುತ್ತಿದ್ದ ಮನೆಗಳನ್ನು ತೆರವುಗೊಳಿಸಲು ವಿಳಂಭ ಮಾಡಿರುವುದರಿಂದ ಹಾಗೂ ಸದರಿ ಪ್ರದೇಶದಲ್ಲಿ 273 (ಜಿಎಫ್)ಮಾದರಿಯ ಮನೆಗಳನ್ನು ನಿರ್ಮಿಸಲು ಅನುಮೋದನೆಯಾಗಿರುತ್ತದೆ. ಈ ಪೈಕಿ 201 ಮನೆಗಳ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದು, ಈ ಪೈಕಿ 72 ಮನೆಗಳಿಗೆ ಜಾಗ ಲಭ್ಯವಿಲ್ಲದೆ ಇದ್ದುದರಿಂದ ಜಿ ಮನೆಗಳ ಬದಲಾಗಿ 'ಜಿ+2' ಮಾದರಿಯಂತೆ ಕೊಳಚೆ ಪ್ರದೇಶದಲ್ಲಿ ಲಭ್ಯವಿರುವ ಜಾಗದಲ್ಲಿ ನಿರ್ಮಿಸಬೇಕಾಗಿತ್ತು. ಆದರೆ ಸದರಿ 72 ಮನೆಗಳ ನಿರ್ಮಿಸುವ ಜಾಗವು Filled Up Soil (Debries) ಯಿಂದ ಕೂಡಿದ್ದರಿಂದ, ನುರಿತ ತಾಂತ್ರಿಕ ತಜ್ಞರಿಂದ (ಕರ್ನಾಟಕ ಮೆಟೀರಿಯಲ್ ಟೆಸ್ಟಿಂಗ್ ಹೌಸ್) ರವರಿಂದ ಮಣ್ಣು ಪರೀಕ್ಷೆ ಮಾಡಿಸಿ ಮತ್ತು ವಿನ್ಯಾಸ ಮತ್ತು ನಕ್ಷೆಯನ್ನು ಮೆ॥ ಇಂಪ್ರಿಂಟ್ಸ್ ಏಜೆನ್ಸಿ ರವರಿಂದ ಪಡೆದು Raft Footing ಅಳವಡಿಸಿ ಕೊಂಡು ಅ 2016-17 ನೇ ಸಾಲಿನ 2217 ಲೆಕ್ಕಶೀರ್ಷಿಕೆಯಡಿಯಲ್ಲಿ ಅನುದಾನದ ಅವಕಾಶ ಮಾಡಿಕೊಂಡು ನಂತರ ಕಾಮಗಾರಿಯನ್ನು ದಿನಾಂಕ:18-05-2019 ಸ್ಥಳ ಹಸ್ತಾಂತರಿಸಿ ದಿನಾಂಕ:17-04-2020 ರೊಳಗೆ ಕಾಮಗಾರಿಯನ್ನು ಎಲ್ಲಾರಿತಿಯಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿ ದಿನಾಂಕ: 25-03-2016 ರಿಂದ

17-04-2020ರ ವರೆಗೆ ಕಾಲಾವಕಾಶ ಅವಶ್ಯಕತೆಯಿದ್ದು, ಸದರಿ ದಿನಗಳಿಗೆ ದಂಡ ರಹಿತ ಕಾಲಾವಧಿ ವಿಸ್ತರಣೆ ಎಂದು ಪರಿಗಣಿಸಿ ಮಂಜೂರು ಮಾಡಲು ಕೋರಿರುತ್ತಾರೆ.

| ಕಾಮಗಾರಿಯ ಹೆಸರು | ಕಾರ್ಯಾದೇಶ ನೀಡಿದ ದಿನಾಂಕ: | ಗುತ್ತಿಗೆದಾರರ ಹೆಸರು | ಗುತ್ತಿಗೆ ಮೊತ್ತ ರೂ.ಲಕ್ಷಗಳಲ್ಲಿ | ಕಾಮಗಾರಿಯನ್ನು ಪೂರ್ಣಗೊಳಿಸಬೇಕಾದ ದಿನಾಂಕ | ವಾಸ್ತವವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕೋರಿದ ದಿನಾಂಕ | ಗುತ್ತಿಗೆ ಕಾಲಾವಧಿ ವಿಸ್ತರಿಸಿದ ದಿನಾಂಕ |
|---|---|---|---|---|---|---|
| 1 | 2 | 3 | 4 | 5 | 6 | 7 |
| ಬೆಂಗಳೂರು ನಗರ ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಮಹಾಲಿಂಗೇಶ್ವರ ಕೊಳಚೆ ಪ್ರದೇಶದಲ್ಲಿ ರೇ ಯೋಜನೆಯಡಿಯಲ್ಲಿ ಮೂಲ ಭೂತ ಸೌಲಭ್ಯಗಳೊಂದಿಗೆ 273(ಜಿ) (ಪ್ಯಾಕೇಜ್-4) ಮಾದರಿಯ ಮನೆಗಳ ನಿರ್ಮಾಣ ಕಾಮಗಾರಿ | 26/09/2014 | ಶ್ರೀ ಜಿ.ಚಂದ್ರೇಗೌಡ | 1211.05 | 25/03/2016 | 17/04/2020 | ದಿನಾಂಕ: 25/03/2016 ರಿಂದ 17/04/2020 ರ 1483 ರವರೆಗೆ ದಿವಸಗಳು |

**ಕ್ರಮ ಸಂಖ್ಯೆ: 9(ಇ):- ಬೆಂಗಳೂರು ನಗರದ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕುವೆಂಪು ನಗರ ವಾರ್ಡ ನಂ.11 ಕೊಳಗೇರಿ ಪ್ರದೇಶದಲ್ಲಿ ರೇ ಯೋಜನೆಯಡಿಯಲ್ಲಿ ಮೂಲ ಭೂತ ಸೌಲಭ್ಯಗಳೊಂದಿಗೆ 666 (ಜಿಎಫ್) ಮಾದರಿಯ ಮನೆಗಳ ನಿರ್ಮಾಣ ಕಾಮಗಾರಿ (ಪ್ಯಾಕೇಜ್-4)**

ಬೆಂಗಳೂರು ನಗರದ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕುವೆಂಪು ನಗರ ವಾರ್ಡ ನಂ.11 ಕೊಳಗೇರಿ ಪ್ರದೇಶದಲ್ಲಿ ರೇ ಯೋಜನೆಯಡಿಯಲ್ಲಿ ಮೂಲ ಭೂತ ಸೌಲಭ್ಯಗಳೊಂದಿಗೆ 666 (ಜಿಎಫ್) ಮಾದರಿಯ ಮನೆಗಳ ನಿರ್ಮಾಣ ಕಾಮಗಾರಿಯನ್ನು ಶ್ರೀ ಜಿ.ಚಂದ್ರೇಗೌಡ, ಪ್ರಥಮ ದರ್ಜೆ ಗುತ್ತಿಗೆದಾರರು ಇವರಿಗೆ ದಿನಾಂಕ:25/11/2014 ರಂದು ವಹಿಸಲಾಗಿರುತ್ತದೆ. ಟೆಂಡರ್ ಕರಾರಿನಂತೆ ಕಾಮಗಾರಿಯನ್ನು ಪೂರ್ಣಗೊಳಿಸಲು 24 ತಿಂಗಳ ಕಾಲಾವಕಾಶ ನೀಡಲಾಗಿದ್ದು, ದಿನಾಂಕ:24-11-2016ರೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ.

ಕಾರ್ಯಪಾಲಕ ಅಭಿಯಂತರರು ನಂ-2ನೇ ವಿಭಾಗ ಬೆಂಗಳೂರು ರವರು ಮನೆಗಳ ನಿರ್ಮಾಣವನ್ನು ಹಾಲಿ ಕೊಳಚೆ ಪ್ರದೇಶಗಳಲ್ಲಿ ನಿರ್ಮಿಸ ಬೇಕಾಗಿದ್ದು, ಮಂಡಳಿಯಿಂದ Transit shed Accommodation ಅವಕಾಶ ಇಲ್ಲದ ಪ್ರಯುಕ್ತ ನಿವಾಸಿಗಳು ತಾತ್ಕಾಲಿಕವಾಗಿ ಗುಡಿಸಲುಗಳನ್ನು ಹಾಕಿಕೊಂಡು ತಾವು ವಾಸಿಸುತ್ತಿದ್ದ ಮನೆಗಳನ್ನು ತೆರವುಗೊಳಿಸಲು ವಿಳಂಭ ಮಾಡಿರುವುದರಿಂದ ಗುಡಿಸಲುಗಳನ್ನು ಗುತ್ತಿಗೆದಾರರಿಗೆ ಹಂತ-ಹಂತವಾಗಿ ವಿವಿಧ ದಿನಾಂಕಗಳಲ್ಲಿ ಮನೆಗಳ ನಿರ್ಮಾಣಕ್ಕೆ ಜಾಗವನ್ನು ಹಸ್ತಾಂತರಿಸಲಾಗಿರುತ್ತದೆ ಹಾಗೂ ಪ್ರಾರಂಭದಲ್ಲಿ ಫಲಾನುಭವಿಗಳಿಂದ ಮಂಡಳಿಗೆ ಪಾವತಿಸಬೇಕಾಗಿದ್ದ ವಂತಿಕೆ ಹಣವನ್ನು ಮಂಡಳಿಗೆ ಸಹಾ ಪಾವತಿಸುವಲ್ಲಿ ವಿಳಂಬವಾಗಿದ್ದು ಮತ್ತು ಬಿ.ಬಿ.ಎಂ.ಪಿ. ವತಿಯಿಂದ ಸದರಿ ಪ್ರದೇಶದಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿದ್ದರಿಂದ ಗುತ್ತಿಗೆದಾರರು ಕಟ್ಟಡ ಸಾಮಗ್ರಿಗಳನ್ನು ಸಂಗ್ರಹಿಸಲು ಸ್ಥಳಾವಕಾಶವಿಲ್ಲದ ಕಾರಣ ಹಂತ-ಹಂತವಾಗಿ ಸಾಮಗ್ರಿಗಳನ್ನು ಸಾಗಿಸಿಕೊಂಡು ಕಾಮಗಾರಿಯನ್ನು ನಿರ್ವಹಿಸಬೇಕಾಗಿರುವುದರಿಂದ ಕಾಮಗಾರಿಯನ್ನು ವಾಸ್ತವವಾಗಿ ದಿನಾಂಕ:05/05/2019ರಂದು ಪೂರ್ಣಗೊಳಿಸಿ ಮನೆಗಳನ್ನು ಫಲಾನುಭವಿಗಳಿಗೆ ವಾಸಕ್ಕೆ ನೀಡಲಾಗಿರುತ್ತದೆ.

ಮೇಲ್ಕಂಡ ಎಲ್ಲಾ ಕಾರಣಗಳ ಹಿನ್ನೆಲೆಯಲ್ಲಿ ಕಾಮಗಾರಿಯನ್ನು ನಿಗಧಿತ ಸಮಯದಲ್ಲಿ ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ. ಗುತ್ತಿಗೆದಾರರು ದಿನಾಂಕ: 25-11-2016 ರಿಂದ 05-05-2019 ರವರೆಗೆ

891 ದಿನಗಳ ವಿಸ್ತರಣೆಯನ್ನು ಕೋರಿ ದಂಡ ರಹಿತ ಕಾಲಾವಧಿ ವಿಸ್ತರಣೆ ಮಂಜೂರು ಮಾಡಲು ಕೋರಿ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

| ಕಾಮಗಾರಿಯ ಹೆಸರು | ಕಾರ್ಯಾದೇಶ ನೀಡಿದ ದಿನಾಂಕ: | ಗುತ್ತಿಗೆದಾರರ ಹೆಸರು | ಗುತ್ತಿಗೆ ಮೊತ್ತ ರೂ.ಲಕ್ಷಗಳಲ್ಲಿ | ಕಾಮಗಾರಿಯನ್ನು ಪೂರ್ಣಗೊಳಿಸಬೇಕಾದ ದಿನಾಂಕ | ವಾಸ್ತವವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕೋರಿದ ದಿನಾಂಕ | ಗುತ್ತಿಗೆ ಕಾಲಾವಧಿ ವಿಸ್ತರಿಸಿದ ದಿನಾಂಕ |
|---|---|---|---|---|---|---|
| 1 | 2 | 3 | 4 | 5 | 6 | 7 |
| ಬೆಂಗಳೂರು ನಗರದ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕುವೆಂಪು ನಗರ ವಾರ್ಡ ನಂ.11 ಕೊಳಗೇರಿ ಪ್ರದೇಶದಲ್ಲಿ ರೇ ಯೋಜನೆಯಡಿಯಲ್ಲಿ ಮೂಲ ಭೂತ ಸೌಲಭ್ಯಗಳೊಂದಿಗೆ 666 (ಜಿಎಫ್) ಮಾದರಿಯ ಮನೆಗಳ ನಿರ್ಮಾಣ ಕಾಮಗಾರಿ | 25.11.2014 | ಶ್ರೀ ಜಿ. ಚಂದ್ರೇಗೌಡ, ಪ್ರಥಮ ದರ್ಜೆ ಗುತ್ತಿಗೆದಾರರು | 3753.30 | 25/11/2016 | 05/05/2019 | ದಿನಾಂಕ:25-11-2016 ರಿಂದ 05-05-2019 ರವರೆಗೆ 891 ದಿವಸಗಳು |

**ಕ್ರಮ ಸಂಖ್ಯೆ: 9(ಎಫ್):- ರಾಜೀವ್ ಆವಾಸ್ ಯೋಜನೆಯಡಿ ತುಮಕೂರು ನಗರದ ಆಯ್ದ 6 ಕೊಳಗೇರಿ ಪ್ರದೇಶದಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ ನಿರ್ಮಿಸಿರುವ 1566 ಮನೆಗಳ ನಿರ್ಮಾಣ ಕಾಮಗಾರಿಯ ಗುತ್ತಿಗೆ ಕಾಲಾವಧಿ ವಿಸ್ತರಣೆಗೆ ಅನುಮೋದನೆ ನೀಡುವ ಬಗ್ಗೆ.**

ತುಮಕೂರು ನಗರದ ಆಯ್ದ 5 ಕೊಳಗೇರಿ ಪ್ರದೇಶದಲ್ಲಿ ರಾಜೀವ್ ಆವಾಸ್ ಯೋಜನೆಯಡಿ ನಿರ್ಮಿಸಿರುವ 816 (GF) ಮನೆಗಳ ನಿರ್ಮಾಣ ಕಾಮಗಾರಿಗೆ ದಿನಾಂಕ:12/11/2014 ರಂದು ಡಿ.ಇ.ಸಿ ಇನ್ಫ್ರಾಸ್ಟ್ರಚ್ಚರ್ ಬೆಂಗಳೂರು ರವರಿಗೆ ಕಾರ್ಯದೇಶ ನೀಡಿ ಕಾಮಗಾರಿಯನ್ನು ಪೂರ್ಣಗೊಳಿಸಲು ಮಳೆಗಾಲ ಸೇರಿದಂತೆ 24 ತಿಂಗಳ ಕಾಲಾವಕಾಶ ನೀಡಲಾಗಿರುತ್ತದೆ.

ಕಾರ್ಯಪಾಲಕ ಅಭಿಯಂತರರು ನಂ-3ನೇ ವಿಭಾಗ ರವರು ಸದರಿ ಯೋಜನೆಯಡಿ ಮನೆಗಳನ್ನು ಹಾಲಿ ಪ್ರದೇಶದಲ್ಲಿ ನಿರ್ಮಿಸಬೇಕಾಗಿದ್ದು, ನಿವಾಸಿಗಳು ತಾವು ವಾಸಮಾಡುತ್ತಿದ್ದ ಗುಡಿಸಲುಗಳನ್ನು ಸಕಾಲದಲ್ಲಿ ತೆರವುಗೊಳಿಸಲು ವಿಳಂಭಮಾಡಿರುವುದರಿಂದ ಗುತ್ತಿಗೆದಾರರಿಗೆ ನಿವೇಶನಗಳನ್ನು ಹಂತ ಹಂತವಾಗಿ ಹಸ್ತಾಂತರಿಸಲಾಗಿರುವುದರಿಂದ ಹಾಗೂ ಫಲಾನುಭವಿಗಳ ವಂತಿಕೆ ಹಣ ಪಾವತಿಸಲು ವಿಳಂಭಮಾಡಿರುವುದರಿಂದ ನಿಗಧಿತ ಆರ್ಥಿಕ ಹಾಗೂ ಭೌತಿಕ ಪ್ರಗತಿ ಸಾಧಿಸಲು ಸಾಧ್ಯವಾಗಿರುವುದಿಲ್ಲ. ಗುತ್ತಿಗೆದಾರರು 816 ಮನೆಗಳ ಪೈಕಿ 632 ಮನೆಗಳ ನಿರ್ಮಾಣ ಕಾಮಗಾರಿಯನ್ನು ಟೆಂಡರ್ ಅವಧಿಯಲ್ಲಿ ಪ್ರಾರಂಭಿಸಿದ್ದು, ಸದರಿ ಮನೆಗಳ ನಿರ್ಮಾಣ ವಿಳಂಭವಾದುದರಿಂದ ಸದರಿ ಕಾಮಗಾರಿಗೆ ದಿನಾಂಕ: 19-12-2016 ರಿಂದ ದಿನಾಂಕ:31/06/2018ರ ವರೆಗೆ ಮೊದಲನೇ ಕಾಲಾವಧಿ ವಿಸ್ತರಣೆಗೆ ಅನುಮೋದನೆ ಪಡೆದುಕೊಳ್ಳಲಾಗಿರುತ್ತದೆ. ಸದರಿ ಅವಧಿಯಲ್ಲಿ 632 ಮನೆಗಳು ಪೂರ್ಣಗೊಂಡಿರುತ್ತವೆ.

ಉಳಿದ 184 ಮನೆಗಳನ್ನು ಹಂತ ಹಂತವಾಗಿ 21-03-2019ರ ಅಂತ್ಯಕ್ಕೆ ಹಸ್ತಾಂತರ ಮಾಡಿದ್ದು, ಸದರಿ ಮನೆಗಳ ಕಾಮಗಾರಿಗಳನ್ನು ನಿರ್ವಹಿಸಲು ಗುತ್ತಿಗೆದಾರರು ದಿನಾಂಕ: 30-11-2019 ರ ವರೆಗೆ ಹೆಚ್ಚುವರಿ ಕಾಲಾವಕಾಶ ಕೋರಿರುತ್ತಾರೆ. ವಿವರಗಳು ಕೆಳಕಂಡಂತಿದೆ. ಉಳಿಕೆ ಮನೆಗಳ ಕಾಮಗಾರಿಗಳನ್ನು ನಿರ್ವಹಿಸಲು ಗುತ್ತಿಗೆದಾರರು ದಿನಾಂಕ: 01-07-2018 ರಿಂದ 30-11-2019 ರವರೆಗೆ 456 ದಿವಸಗಳ ವರೆಗೆ ದಂಡ ರಹಿತ ಹೆಚ್ಚುವರಿ ಗುತ್ತಿಗೆ ಕಾಲಾವಧಿ ವಿಸ್ತರಣೆಗೆ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

| ಕಾಮಗಾರಿಯ ಹೆಸರು | ಕಾರ್ಯಾದೇಶ ನೀಡಿದ ದಿನಾಂಕ: | ಗುತ್ತಿಗೆದಾರರ ಹೆಸರು | ಗುತ್ತಿಗೆ ಮೊತ್ತ ರೂ.ಲಕ್ಷಗಳಲ್ಲಿ | ಕಾಮಗಾರಿಯನ್ನು ಪೂರ್ಣ ಗೊಳಿ ಸಬೇಕಾದ ದಿನಾಂಕ | ಕಾಮಗಾರಿಯನ್ನು ಪೂರ್ಣಗೊಳಿಸಲು ಸಂಭವನೀಯ ದಿನಾಂಕ | ಗುತ್ತಿಗೆ ಕಾಲಾವಧಿ ವಿಸ್ತರಿಸಿದ ದಿನಾಂಕ |
|---|---|---|---|---|---|---|
| 1 | 2 | **3** | **4** | **5** | **6** | **7** |
| ರಾಜೀವ್ ಆವಾಸ್ ಯೋಜನೆಯಡಿಯಲ್ಲಿ ತುಮಕೂರು ನಗರದ ಆಯ್ದ 6 ಕೊಳಗೇರಿ ಪ್ರದೇಶದಲ್ಲಿ ರಾಜೀವ್ ಆವಾಸ್ ಯೋಜನೆಯಡಿ ಮೂಲಭೂತ ಸೌಲಭ್ಯಗಳೊಂದಿಗೆ 1566 ಮನೆಗಳ ನಿರ್ಮಿಸುವಕಾಮಗಾರಿ. | ದಿನಾಂಕ :12/11/2014 | **ಡಿ.ಇ.ಸಿ ಇನ್ಫ್ರಾಸ್ಟ್ರಚ್ಚರ್ ಬೆಂಗಳೂರು.** | **3783.54** | **30-06-2018** | **30.11.2019** | **ದಿನಾಂಕ: 01-07-2018 ರಿಂದ 30-11-2019 ರವರೆಗೆ 456 ದಿವಸಗಳು** |

**ಮೇಲೆ ವಿವರಿಸಿರುವಂತೆ ಕ್ರಮ ಸಂಖ್ಯೆ (1) ರಿಂದ (6)ರ ವರೆಗಿನ ಕಾಮಗಾರಿಗಳಿಗೆ ದಿನಾಂಕ: 18/09/2019 ರಂದು ನಡೆದ ತಾಂತ್ರಿಕ ಸಲಹಾ ಸಮಿತಿ ಸಭೆಯ ನಡವಳಿಯಲ್ಲಿ ಕಲಂ (7) ರಲ್ಲಿ ತೋರಿಸಿರುವ ಗುತ್ತಿಗೆ ಕಾಲಾವಧಿ ವಿಸ್ತರಣೆಗೆ ಅನುಮೋದನೆ ಪಡೆಯಲಾಗಿದ್ದು, ಅದರಂತೆ ಕಾಲಾವಧಿ ವಿಸ್ತರಣೆ ಪ್ರಸ್ತಾವನೆಗಳನ್ನು ಮಂಡಳಿ ಸಭೆಯ ಅನುಮೋದನೆಗೆ ಮಂಡಿಸಿದೆ.**

<u>ನಿರ್ಣಯ :</u>

**ಗುತ್ತಿಗೆ ಕಾಲಾವಧಿ ವಿಸ್ತರಣೆ ಬಗ್ಗೆ ಮಂಡಿಸಿರುವ ಪ್ರಸ್ತಾವನೆಯನ್ನು ವಿವರವಾಗಿ ಪರಿಶೀಲಿಸಲಾಯಿತು. ಸದರಿ ಕಾಮಗಾರಿಗಳನ್ನು ಬೆಂಗಳೂರು ಮತ್ತು ತುಮಕೂರು ವ್ಯಾಪ್ತಿಯಲ್ಲಿ ಕೈಗೊಳ್ಳಲಾಗಿದ್ದು, ಮೂಲಭೂತ ಸೌಕರ್ಯಗಳ ಜೊತೆಗೆ ಮನೆಗಳ ನಿರ್ಮಾಣ ಕಾಮಗಾರಿಯಲ್ಲಿ 2-3 ವರ್ಷಗಳು ವಿಳಂಬವಾಗಿರುವುದನ್ನು ಗಮನಿಸಲಾಗಿರುತ್ತದೆ. ಈ ಎಲ್ಲಾ ಕಾಮಗಾರಿಗಳನ್ನು ಮಂಡಳಿಯ ಆಯುಕ್ತರವರೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಉಪ ಆಯುಕ್ತರು (ಅಭಿವೃದ್ಧಿ) ರವರು ಹಾಗೂ ಮಂಡಳಿಯ ಸಹಾಯಕ ಕಂದಾಯ ಅಧಿಕಾರಿಯಾದ ಶ್ರೀ ಎಸ್.ಮುನಿರಾಜು ರವರುಗಳು ಸ್ಥಳ ಪರಿಶೀಲನೆ ಮಾಡಿ ವರದಿಯನ್ನು ನೀಡಲು ಸೂಚಿಸುತ್ತಾ, ಸದರಿ ವರದಿಯನ್ನು ಆಧರಿಸಿ ಕಾಮಗಾರಿಗಳ ಗುತ್ತಿಗೆ ಕಾಲಾವಧಿ ವಿಸ್ತರಣೆಯ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಲು ನಿರ್ಣಯಿಸಲಾಯಿತು.**

**ಕ್ರಮ : ಆಯುಕ್ತರು / ತಾಂತ್ರಿಕ ನಿರ್ದೇಶಕರು-1 ಕಕೊಅಮ**

ವಿಷಯ ಸಂಖ್ಯೆ:- 10

ವಿಷಯ:- ರಾಮನಗರ ಜಿಲ್ಲೆಯ ಕನಕಪುರ ಪಟ್ಟಣದ ವಿವಿಧ 11 ಕೊಳಚೆ ಪ್ರದೇಶಗಳಲ್ಲಿ ಮೂಲ ಭೂತ ಸೌಲಭ್ಯಗಳೊಂದಿಗೆ 1881 (1849-ಜಿಎಫ್ & 32 ಜಿ+3) ಮನೆಗಳ ನಿರ್ಮಾಣ ಕಾಮಗಾರಿಯ ಗುತ್ತಿಗೆ ಕಾಲಾವಧಿ ವಿಸ್ತರಣೆಗೆ ಅನುಮೋದನೆ ನೀಡುವ ಬಗ್ಗೆ.

ರಾಮನಗರ ಜಿಲ್ಲೆಯ ಕನಕಪುರ ಪಟ್ಟಣದ ವಿವಿಧ 11 ಕೊಳಚೆ ಪ್ರದೇಶಗಳಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಮೂಲ ಭೂತ ಸೌಲಭ್ಯಗಳೊಂದಿಗೆ 1881 (1849-ಜಿಎಫ್ & 32 ಜಿ+3)ಮನೆಗಳ ನಿರ್ಮಾಣಕಾಮಗಾರಿಯನ್ನು M/s. Gowri Infraengineers Pvt., Ltd. ಗುತ್ತಿಗೆದಾರರಿಗೆ ದಿನಾಂಕ: 19/04/2017ರಂದು ವಹಿಸಲಾಗಿದ್ದು, ಕಾಮಗಾರಿಯನ್ನು ಪೂರ್ಣಗೊಳಿಸಲು 24 ತಿಂಗಳ ಕಾಲಾವಕಾಶನೀಡಲಾಗಿದ್ದು, ದಿನಾಂಕ:18/05/2019 ರಂದು ಪೂರ್ಣಗೊಳಿಸಬೇಕಿರುತ್ತದೆ.

ಕಾರ್ಯಪಾಲಕ ಅಭಿಯಂತರರು ನಂ-1ನೇ ವಿಭಾಗ ಬೆಂಗಳೂರು ರವರು ಸದರಿ ಯೋಜನೆಯಡಿ ಮನೆಗಳನ್ನು ಹಾಲಿ ಪ್ರದೇಶದಲ್ಲಿ ನಿರ್ಮಿಸಬೇಕಾಗಿದ್ದು, ನಿವಾಸಿಗಳುವಾಸಮಾಡುವ ಗುಡಿಸಲುಗಳನ್ನು ಸಕಾಲದಲ್ಲಿ ತೆರವುಗೊಳಿಸಲು ವಿಳಂಭಮಾಡಿರುವುದರಿಂದ ಗುತ್ತಿಗೆದಾರರಿಗೆ ನಿವೇಶನವನ್ನು ಹಂತ ಹಂತವಾಗಿ ಹಸ್ತಾಂತರಿಸಲಾಗಿರುವುದರಿಂದ ಹಾಗೂ ಫಲಾನುಭವಿಗಳ ವಂತಿಕೆ ಹಣ ಪಾವತಿಸಲು ವಿಳಂಭಮಾಡಿರುವುದರಿಂದ ನಿಗಧಿತ ಆರ್ಥಿಕ ಹಾಗೂ ಭೌತಿಕ ಪ್ರಗತಿ ಸಾಧಿಸಲು ಸಾಧ್ಯವಾಗಿರುವುದಿಲ್ಲ.

ಪ್ರಸ್ತುತ ಗುತ್ತಿಗೆದಾರರು 1881 ಮನೆಗಳ ಪೈಕಿ 287 ಮನೆಗಳ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಿದ್ದು, 450 ಮನೆಗಳು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ, 492 ಮನೆಗಳು ವಿವಿಧ ಹಂತಗಳಲ್ಲಿ ಪ್ರಗತಿಯಲಿರುತ್ತದೆ ಉಳಿದ 697 ಮನೆಗಳನ್ನು ಪ್ರಾರಂಭಿಸಬೇಕಾಗಿರುತ್ತದೆ. ಗುತ್ತಿಗೆದಾರರು ಸದರಿ ಮನೆಗಳನ್ನು ಪೂರ್ಣಗೊಳಿಸಲು ಹೆಚ್ಚುವರಿ ಕಾಲಾವಕಾಶ ಕೋರಿರುವಂತೆ ದಿನಾಂಕ:19/05/2019 ರಿಂದ 18/05/2021ರ ವರೆಗೆ ದಂಡ ರಹಿತ ಹೆಚ್ಚುವರಿ ಕಾಲಾವಕಾಶ ವಿಸ್ತರಣೆಗೆ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ವಿವರಗಳು ಕೆಳಕಂಡಂತಿದೆ.

| ಕಾಮಗಾರಿಯ ಹೆಸರು | ಕಾರ್ಯಾದೇಶ ನೀಡಿದ ದಿನಾಂಕ: | ಗುತ್ತಿಗೆದಾರರ ಹೆಸರು | ಗುತ್ತಿಗೆ ಮೊತ್ತ ರೂ.ಲಕ್ಷಗಳಲ್ಲಿ | ಮೂಲಭೂತ ಹಾಗೂ ಮನೆಗಳ ನಿವೇಶನ ಹಸ್ತಾಂತರಿಸಿದ ದಿನಾಂಕ | ಕಾಮಗಾರಿಯನ್ನು ಪೂರ್ಣ ಗೊಳಿ ಸಬೇಕಾದದಿನಾಂಕ | ಕಾಮಗಾರಿಯನ್ನು ಪೂರ್ಣಗೊಳಿಸಲು ಸಂಭವನೀಯ ದಿನಾಂಕ | ಕಾಮಗಾರಿಯ ಹೆಚ್ಚುವರಿ ವಿಳಂಭಕ್ಕೆ ಎರಡನೇಅವಧಿಗೆ ವಿಸ್ತರಣೆ |
|---|---|---|---|---|---|---|---|
| ರಾಮನಗರ ಜಿಲ್ಲೆಯ ಕನಕಪುರ ಪಟ್ಟಣದ ವಿವಿಧ 11 ಕೊಳಚೆ ಪ್ರದೇಶಗಳಲ್ಲಿ ಮೂಲ ಭೂತ ಸೌಲಭ್ಯಗಳೊಂದಿಗೆ 1881 ( 1849-ಜಿಎಫ್ & 32 ಜಿ+3) ಮನೆಗಳ ನಿರ್ಮಾಣ ಕಾಮಗಾರಿ | 19/04/2017 | Sri.C.P.Umesh M/s Gowri Infraengineers Pvt., Ltd., | **9308.28** ಲಕ್ಷಗಳು | 19.05.2017- 455<br>20.11.2017- 157<br>06.01.2018- 246<br>02.08.2018- 129<br>01.10.2018- 67<br>17.12.2018- 130<br>1184 ಮನೆಗಳು ಪ್ರಗತಿಯಲ್ಲಿರುತ್ತದೆ<br><br>19.05.2019- 150<br>19.11.2019- 150<br>19.05.2020 150<br>19.11.2020 247<br>697 ಮನೆಗಳನ್ನು ಪ್ರಾರಂಭಿಸಬೇಕಿರುತ್ತದೆ | **19.05.2019** | **15/05.2021** | ದಿನಾಂಕ:19.05.2018 ರಿಂದ 18.05.2021 ರವರೆಗೆ 730 ದಿವಸಗಳು |

ಮೇಲ್ಕಂಡಂತೆ ವಿವರಿಸಿರುವ ಅಂಶಗಳ ಹಿನ್ನೆಯಲ್ಲಿ ಸದರಿ ಪ್ರಸ್ತಾವನೆಯನ್ನು ದಿನಾಂಕ:11/01/2019ರಂದು ನಡೆದ ಮಂಡಳಿ ಸಭೆಯ ನಿರ್ಣಯದಂತೆ ತಾಂತ್ರಿಕ ಸಲಹಾ ಸಮಿತಿ ಸಭೆಯ ಸಲಹೆಯಂತೆ ನಿಯಮಾನುಸಾರ ಕ್ರಮ ವಹಿಸಲು ಸೂಚಿಸಲಾಗಿರುವಂತೆ ದಿನಾಂಕ:18/09/2019 ರಂದು ನಡೆದ ತಾಂತ್ರಿಕ ಸಲಹಾ ಸಮಿತಿ ಸಭೆಗೆ ಮೇಲ್ಕಂಡ ಕಾಮಗಾರಿಯ ಕಾಲಾವಧಿ ವಿಸ್ತರಣೆ ಪ್ರಸ್ತಾವನೆಯನ್ನು ಮಂಡಿಸಲಾಗಿದ್ದು, ಅನುಮೋದನೆ ಪಡೆದುಕೊಳ್ಳಲಾಗಿರುತ್ತದೆ. ಅದರಂತೆ ಸದರಿ ಕಾಮಗಾರಿಯ ಕಾಲಾವಧಿ ಪ್ರಸ್ತಾವನೆಯನ್ನು ಮಂಡಳಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

<u>ನಿರ್ಣಯ :</u>

ಗುತ್ತಿಗೆ ಕಾಲಾವಧಿ ವಿಸ್ತರಣೆ ಬಗ್ಗೆ ಮಂಡಿಸಿರುವ ಪ್ರಸ್ತಾವನೆಯನ್ನು ವಿವರವಾಗಿ ಪರಿಶೀಲಿಸಲಾಯಿತು. ಸದರಿ ಕಾಮಗಾರಿಗಳನ್ನು ಬೆಂಗಳೂರು ಮತ್ತು ತುಮಕೂರು ವ್ಯಾಪ್ತಿಯಲ್ಲಿ ಕೈಗೊಳ್ಳಲಾಗಿದ್ದು, ಮೂಲಭೂತ ಸೌಕರ್ಯಗಳ ಜೊತೆಗೆ ಮನೆಗಳ ನಿರ್ಮಾಣ ಕಾಮಗಾರಿಯಲ್ಲಿ 2–3 ವರ್ಷಗಳು ವಿಳಂಬವಾಗಿರುವುದನ್ನು ಗಮನಿಸಲಾಗಿರುತ್ತದೆ. ಈ ಎಲ್ಲಾ ಕಾಮಗಾರಿಗಳನ್ನು ಮಂಡಳಿಯ ಆಯುಕ್ತರವರೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಉಪ ಆಯುಕ್ತರು (ಅಭಿವೃದ್ಧಿ) ರವರು ಹಾಗೂ ಮಂಡಳಿಯ ಸಹಾಯಕ ಕಂದಾಯ ಅಧಿಕಾರಿಯಾದ ಶ್ರೀ ಎಸ್.ಮುನಿರಾಜು ರವರುಗಳು ಸ್ಥಳ ಪರಿಶೀಲನೆ ಮಾಡಿ ವರದಿಯನ್ನು ನೀಡಲು ಸೂಚಿಸುತ್ತಾ, ಸದರಿ ವರದಿಯನ್ನು ಆಧರಿಸಿ ಕಾಮಗಾರಿಗಳ ಗುತ್ತಿಗೆ ಕಾಲಾವಧಿ ವಿಸ್ತರಣೆಯ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಲು ನಿರ್ಣಯಿಸಲಾಯಿತು.

ಕ್ರಮ : ಆಯುಕ್ತರು / ತಾಂತ್ರಿಕ ನಿರ್ದೇಶಕರು–1 ಕಕೊಅಮ

ವಿಷಯ ಸಂಖ್ಯೆ:- 11

ವಿಷಯ:- ಬೆಂಗಳೂರು ನಗರದ ಗೋವಿಂದರಾಜನಗರ ವಿಧಾನ ಸಭಾ ಕ್ಷೇತ್ರದ ಅರುಂಧತಿ ನಗರ ಕೊಳಗೇರಿ ಪ್ರದೇಶದಲ್ಲಿ ರೇ ಯೋಜನೆ ಪ್ಯಾಕೇಜ್ –VIIIಅಡಿಯಲ್ಲಿ ಮೂಲ ಭೂತ ಸೌಲಭ್ಯಗಳೊಂದಿಗೆ 200 (ಜಿಎಫ್) ಮಾದರಿಯ ಮನೆಗಳ ನಿರ್ಮಾಣ ಕಾಮಗಾರಿಯ ಗುತ್ತಿಗೆ ಕಾಲಾವಧಿ ವಿಸ್ತರಣೆಗೆ ಅನುಮೋದನೆ ನೀಡುವ ಬಗ್ಗೆ.

ಬೆಂಗಳೂರು ನಗರದ ಗೋವಿಂದರಾಜನಗರ ವಿಧಾನ ಸಭಾ ಕ್ಷೇತ್ರದ ಅರುಂಧತಿ ನಗರ ಕೊಳಗೇರಿ ಪ್ರದೇಶದಲ್ಲಿ ರೇ ಯೋಜನೆ ಪ್ಯಾಕೇಜ್ –VIII ಅಡಿಯಲ್ಲಿ ಮೂಲ ಭೂತ ಸೌಲಭ್ಯಗಳೊಂದಿಗೆ 200 (ಜಿಎಫ್) ಮಾದರಿಯ ಮನೆಗಳ ನಿರ್ಮಾಣಕಾಮಗಾರಿಯನ್ನು ಶ್ರೀ ಬಿ.ನಾಗರಾಜು ಪ್ರಥಮ ದರ್ಜೆ ಗುತ್ತಿಗೆದಾರರು ಬೆಂಗಳೂರು ಇವರಿಗೆ ರೂ.10,28,99,000/- ಗಳಿಗೆ ದಿನಾಂಕ: 07-11-2014 ರಂದು ವಹಿಸಲಾಗಿರುತ್ತದೆ. ಟೆಂಡರ್ ಕರಾರಿನಂತೆ ಕಾಮಗಾರಿಯನ್ನು ಪೂರ್ಣಗೊಳಿಸಲು 18 ತಿಂಗಳ ಕಾಲಾವಕಾಶ ನೀಡಲಾಗಿದ್ದು, ದಿನಾಂಕ:07-05-2016 ರೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ.

ಕಾರ್ಯಪಾಲಕ ಅಭಿಯಂತರರು ನಂ-1ನೇ ವಿಭಾಗ ಬೆಂಗಳೂರು ರವರು ಗೋವಿಂದರಾಜನಗರ ಕೊಳಚೆ ಪ್ರದೇಶದಲ್ಲಿ ಸದರಿ ಕಾಮಗಾರಿಯ ಸ್ಥಳವನ್ನು ದಿನಾಂಕ:18/12/2014ರಂದು ಹಸ್ತಾಂತರಿಸಲಾಗಿದ್ದು, ಗುತ್ತಿಗೆ ಕರಾರಿನಂತೆ ದಿನಾಂಕ:17/06/2016ರೊಳಗೆ ಕಾಮಗಾರಿ ಪೂರ್ಣಗೊಳಿಸಬೇಕಾಗಿರುತ್ತದೆ. ಅರುಂಧತಿನಗರ ಕೊಳಚೆಪ್ರದೇಶವು ನಗರದ ಕೇಂದ್ರಭಾಗದಲ್ಲಿದ್ದು, ಸದರಿ ಪ್ರದೇಶದ ಜನರು ಕೂಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದು, ಫಲಾನುಭವಿಗಳಿಗೆ ತಾತ್ಕಾಲಿಕ ಶಿಬಿರ ಒದಗಿಸಲು ಸ್ಥಳದ ಅಭಾವವಿರುತ್ತದೆ. ಹಾಗೂ ಫಲಾನುಭವಿಗಳಿಗೆ ಪರ್ಯಾಯವಾಗಿ ಬಾಡಿಗೆ ಮನೆಗಳಿಗೆ ಸ್ಥಳಾಂತರಗೊಳ್ಳಲು ಬಾಡಿಗೆ ಮನೆಯ ಲಭ್ಯತೆಯ ಕೊರತೆ ಇದ್ದುದರಿಂದ ಗುತ್ತಿಗೆದಾರರಿಗೆ ಫಲಾನುಭವಿಗಳು ಮನೆಗಳನ್ನು ತೆರವುಗೊಳಿಸಿದ ನಂತರ ಹಂತ-ಹಂತವಾಗಿ ನಿವೇಶನಗಳನ್ನು ಈ ಕೆಳಕಂಡಂತೆ ವಿವಿಧ ದಿನಾಂಕಗಳಲ್ಲಿ ಹಸ್ತಾಂತರಿಸಲಾಗಿದ್ದು, ಗುತ್ತಿಗೆದಾರರು ವಾಸ್ತವವಾಗಿ ಕಾಮಗಾರಿಯನ್ನು ದಿನಾಂಕ:30.04.2018ರಂದು ಪೂರ್ಣಗೊಳಿಸಿದ್ದು, ದಿನಾಂಕ:18/06/2016ರಿಂದ ದಿನಾಂಕ:30/04/2018ರ ವರೆಗೆ 682 ದಿನಗಳಿಗೆ ದಂಡ ರಹಿತ ಹೆಚ್ಚುವರಿ ಕಾಲಾವಕಾಶ ವಿಸ್ತರಣೆಗೆ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.ವಿವರಗಳು ಕೆಳಕಂಡಂತಿವೆ.

| ಕಾಮಗಾರಿಯ ಹೆಸರು | ಕಾರ್ಯಾದೇಶ ನೀಡಿದ ದಿನಾಂಕ: | ಗುತ್ತಿಗೆದಾರರ ಹೆಸರು | ಗುತ್ತಿಗೆ ಮೊತ್ತ ರೂ.ಲಕ್ಷಗಳಲ್ಲಿ | ಮೂಲಭೂತ ಹಾಗೂ ಮನೆಗಳ ನಿವೇಶನ ಹಸ್ತಾಂತರಿಸಿದ ದಿನಾಂಕ | ಕಾಮಗಾರಿಯನ್ನು ಪೂರ್ಣ ಗೊಳಿ ಸಬೇಕಾದ ದಿನಾಂಕ | ವಾಸ್ತವವಾಗಿ ಕಾಮಗಾರಿಯನ್ನು ಪೂರ್ಣಗೊಳಿದ ದಿನಾಂಕ | ಕಾಮಗಾರಿಯ ಹೆಚ್ಚುವರಿ ವಿಳಂಭಕ್ಕೆ ಎರಡನೇಅವಧಿಗೆ ವಿಸ್ತರಣೆ |
|---|---|---|---|---|---|---|---|
| **ಬೆಂಗಳೂರು ನಗರದ ಗೋವಿಂದರಾಜನಗರ ವಿಧಾನ ಸಭಾ ಕ್ಷೇತ್ರದ ಅರುಂಧತಿ ನಗರ ಕೊಳಗೇರಿ ಪ್ರದೇಶದಲ್ಲಿ ರೇ ಯೋಜನೆ ಪ್ಯಾಕೇಜ್ –VIII ಅಡಿಯಲ್ಲಿ 200 (ಜಿಎಫ್) ಮಾದರಿಯ ಮನೆಗಳ ನಿರ್ಮಾಣ ಕಾಮಗಾರಿ** | 07/11/2014 | ಶ್ರೀ ಬಿ.ನಾಗರಾಜು ಬೆಂಗಳೂರು | **1028.99 ಲಕ್ಷಗಳು** | 18.12.2014- 73 Du's<br>23.02.2015- 37 Du's<br>27.03.2015- 50 Du's<br>14.09.2015- 20 Du's<br>28.04.2016- 01 Du's<br>04.01.2017- 09 Du's<br>03.08.2017- 10 Du's<br>**200** Du's | **17/06/2016** | **30/04/2018** | **ದಿನಾಂಕ:18/06/2016 ರಿಂದ 30/04/2018 ರವರೆಗೆ 682 ದಿವಸಗಳು** |

ಮೇಲ್ಕಂಡಂತೆ ವಿವರಿಸಿರುವ ಅಂಶಗಳ ಹಿನ್ನೆಯಲ್ಲಿ ಸದರಿ ಪ್ರಸ್ತಾವನೆಯನ್ನು ದಿನಾಂಕ:11/01/2019ರಂದು ನಡೆದ ಮಂಡಳಿ ಸಭೆಯ ನಿರ್ಣಯದಂತೆ ತಾಂತ್ರಿಕ ಸಲಹಾ ಸಮಿತಿ ಸಭೆಯ ಸಲಹೆಯಂತೆ ನಿಯಮಾನುಸಾರ ಕ್ರಮ ವಹಿಸಲು ಸೂಚಿಸಲಾಗಿರುವಂತೆ ದಿನಾಂಕ:18/09/2019 ರಂದು ನಡೆದ ತಾಂತ್ರಿಕ ಸಲಹಾ ಸಮಿತಿ ಸಭೆಗೆ ಮೇಲ್ಕಂಡ ಕಾಮಗಾರಿಯ ಕಾಲಾವಧಿ ವಿಸ್ತರಣೆ ಪ್ರಸ್ತಾವನೆಯನ್ನು ಮಂಡಿಸಲಾಗಿದ್ದು, ಅನುಮೋದನೆ ಪಡೆದುಕೊಳ್ಳಲಾಗಿರುತ್ತದೆ. ಅದರಂತೆ ಸದರಿ ಕಾಮಗಾರಿಯ ಕಾಲಾವಧಿ ಪ್ರಸ್ತಾವನೆಯನ್ನು ಮಂಡಳಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ :

ಮಂಡಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಸದರಿ ಕಾಮಗಾರಿಯ ಗುತ್ತಿಗೆ ಕಾಲಾವಧಿಯು 2018ಕ್ಕೆ ಮುಕ್ತಾಯವಾಗಿದ್ದು, ಕಾಲಾವಧಿ ವಿಸ್ತರಣೆಯ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು ಹಾಗೂ ವಿಳಂಬವಾಗಿ ಪ್ರಸ್ತಾವನೆಯನ್ನು ಮಂಡಿಸಲು ಕಾರಣರಾದವರಿಂದ ವಿವರಣೆ ಪಡೆಯಲು ಸೂಚಿಸಲಾಯಿತು.

ಕ್ರಮ : ಆಯುಕ್ತರು, ಕಕೊಅಮ

ವಿಷಯ ಸಂಖ್ಯೆ:- 12

ವಿಷಯ:- ಬೆಂಗಳೂರು ನಗರದ ಗೋವಿಂದರಾಜನಗರ ವಿಧಾನ ಸಭಾ ಕ್ಷೇತ್ರದ ವಿವಿಧ ಕೊಳಗೇರಿ ಪ್ರದೇಶಗಳಲ್ಲಿ ರೇ ಯೋಜನೆ ಪ್ಯಾಕೇಜ್ –III ಅಡಿಯಲ್ಲಿ ಮೂಲ ಭೂತ ಸೌಲಭ್ಯಗಳೊಂದಿಗೆ 100 (ಜಿಎಫ್) ಮಾದರಿಯ ಮನೆಗಳ ನಿರ್ಮಾಣ ಕಾಮಗಾರಿಯ ಗುತ್ತಿಗೆ ಕಾಲಾವಧಿ ವಿಸ್ತರಣೆಗೆ ಅನುಮೋದನೆ ನೀಡುವ ಬಗ್ಗೆ.

ಬೆಂಗಳೂರು ನಗರದ ಗೋವಿಂದರಾಜನಗರ ವಿಧಾನ ಸಭಾ ಕ್ಷೇತ್ರದ ವಿವಿಧ ಕೊಳಗೇರಿ ಪ್ರದೇಶಗಳಲ್ಲಿ ರೇ ಯೋಜನೆ ಪ್ಯಾಕೇಜ್ –ಖಖಖ ಅಡಿಯಲ್ಲಿ ಮೂಲ ಭೂತ ಸೌಲಭ್ಯಗಳೊಂದಿಗೆ 100 (ಜಿಎಫ್) ಮಾದರಿಯ ಮನೆಗಳ ನಿರ್ಮಾಣಕಾಮಗಾರಿಯನ್ನು ಶ್ರೀ ಪ್ರಸನ್ನ.ಎನ್.ರಾಜಪುರೋಹಿತ್ ಪ್ರಥಮ ದರ್ಜೆ ಗುತ್ತಿಗೆದಾರರು ಬೆಂಗಳೂರು ಇವರಿಗೆ ರೂ.4,35,95,121/- ಗಳಿಗೆ ದಿನಾಂಕ: 26/09/2014 ರಂದು ವಹಿಸಲಾಗಿರುತ್ತದೆ. ಟೆಂಡರ್ ಕರಾರಿನಂತೆ ಕಾಮಗಾರಿಯನ್ನು ಪೂರ್ಣಗೊಳಿಸಲು 12 ತಿಂಗಳ ಕಾಲಾವಕಾಶ ನೀಡಲಾಗಿದ್ದು, ದಿನಾಂಕ:26/09/2015ರೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ.

ಕಾರ್ಯಪಾಲಕ ಅಭಿಯಂತರರುಗೋವಿಂದರಾಜನಗರ ಕೊಳಚೆ ಪ್ರದೇಶದಲ್ಲಿ ಮನೆಗಳ ನಿರ್ಮಾಣಕ್ಕಾಗಿ ಸ್ಥಳವನ್ನು ದಿನಾಂಕ:10.07.2015ರಂದು ಹಸ್ತಾಂತರಿಸಲಾಗಿದ್ದು, ಗುತ್ತಿಗೆ ಕರಾರಿನಂತೆ ದಿನಾಂಕ:09.07.2016ರೊಳಗೆ ಪೂರ್ಣಗೊಳಿಸಬೇಕಾಗಿರುತ್ತದೆ. ಆದರೆ ಸದರಿ ಕೊಳಚೆ ಪ್ರದೇಶದ ಕೆಲವು ಫಲಾನುಭವಿಗಳು ಫಲಾನುಭವಿ ವಂತಿಕೆಯನ್ನು ಪಾವತಿಸಲು ಸಿದ್ದವಿಲ್ಲವಾದ್ದರಿಂದ 100 ಮನೆಗಳ ಪೈಕಿ 84 ಮನೆಗಳನ್ನು Proceedings of 2nd SLSMC RAY Meeting dated:25.05.2016 ಅನ್ವಯ ಗೋವಿಂದರಾಜನಗರ ಪ್ರದೇಶದ ಬದಲಾಗಿ ಎ.ಡಿ.ಹಳ್ಳಿ ಮತ್ತು ಗಂಗೊಂಡನಹಳ್ಳಿ ಕೊಳಚೆಪ್ರದೇಶಗಳಲ್ಲಿ ನಿರ್ಮಿಸಲು ಅನುಮೋದನೆ ಪಡೆದು ಕೊಳ್ಳಲಾಗಿರುತ್ತದೆ. ಅದರಂತೆ ಫಲಾನುಭವಿಗಳು ತಮ್ಮ ಶೀಟಿನ ಮನೆಗಳನ್ನು ಹಂತ-ಹಂತವಾಗಿ ತೆರವುಗೊಳಿಸಿದ್ದುದರಿಂದ ಗುತ್ತಿಗೆದಾರರಿಗೆ ಹಂತ ಹಂತವಾಗಿ ನಿವೇಶನ ಹಸ್ತಾಂತರಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಗುತ್ತಿಗೆದಾರರು ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸಾಧ್ಯವಿಲ್ಲದೇ ಇರುವುದರಿಂದ ದಿನಾಂಕ:30.04.2018ರ ವರೆಗೆ ಅಂದರೆ ದಿನಾಂಕ:10/07/2016ರಿಂದ 30/04/2018ರವರೆಗೆ 660 ದಿನಗಳ ವಿಳಂಭಕ್ಕೆ ದಂಡ ರಹಿತ ಹೆಚ್ಚುವರಿ ಕಾಲಾವಕಾಶ ವಿಸ್ತರಣೆಗೆ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ವಿವರಗಳು ಕೆಳಕಂಡಂತಿದೆ.

| ಕಾಮಗಾರಿಯ ಹೆಸರು | ಕಾರ್ಯಾದೇಶ ನೀಡಿದ ದಿನಾಂಕ: | ಗುತ್ತಿಗೆದಾರರ ಹೆಸರು | ಗುತ್ತಿಗೆ ಮೊತ್ತ ರೂ.ಲಕ್ಷಗಳಲ್ಲಿ | ಮೂಲಭೂತ ಹಾಗೂ ಮನೆಗಳ ನಿವೇಶನ ಹಸ್ತಾಂತರಿಸಿದ ದಿನಾಂಕ | ಕಾಮಗಾರಿಯನ್ನು ಪೂರ್ಣ ಗೊಳಿ ಸಬೇಕಾದ ದಿನಾಂಕ | ವಾಸ್ತವವಾಗಿ ಕಾಮಗಾರಿಯನ್ನು ಪೂರ್ಣಗೊಳಿದ ದಿನಾಂಕ | ಕಾಮಗಾರಿಯ ಹೆಚ್ಚುವರಿ ವಿಳಂಭಕ್ಕೆ ಎರಡನೇಅವಧಿಗೆ ವಿಸ್ತರಣೆ |
|---|---|---|---|---|---|---|---|
| ಬೆಂಗಳೂರು ನಗರದ ಗೋವಿಂದರಾಜನಗರ ವಿಧಾನ ವಿವಿಧ ಕೊಳಗೇರಿ ಪ್ರದೇಶದಲ್ಲಿ ರೇ ಯೋಜನೆ ಪ್ಯಾಕೇಜ್ -ಙಙಙ ಅಡಿಯಲ್ಲಿ 100 (ಜಿಎಫ್) ಮಾದರಿಯ ಮನೆಗಳ ನಿರ್ಮಾಣ ಕಾಮಗಾರಿ | 26/09/2014 | ಶ್ರೀ ಸಿಂಗೇಗೌಡ ರತ್ನರವಿ | **345.45 ಲಕ್ಷಗಳು** | 10.07.2015– 14<br>21.09.2015– 07<br>14.01.2016– 06<br>22.08.2016– 17<br>02.11.2016– 16<br>17.03.2017– 14<br>28.06.2017– 17<br>14.09.2017– 09<br>**100 Du's** | **09/07/2016** | **30/04/2018** | **ದಿನಾಂಕ:10/07/2016 ರಿಂದ 30/04/2018 ರವರೆಗೆ 660 ದಿವಸಗಳು** |

ಮೇಲ್ಕಂಡಂತೆ ವಿವರಿಸಿರುವ ಅಂಶಗಳ ಹಿನ್ನೆಯಲ್ಲಿ ಸದರಿ ಪ್ರಸ್ತಾವನೆಯನ್ನು ದಿನಾಂಕ:11/01/2019ರಂದು ನಡೆದ ಮಂಡಳಿ ಸಭೆಯ ನಿರ್ಣಯದಂತೆ ತಾಂತ್ರಿಕ ಸಲಹಾ ಸಮಿತಿ ಸಭೆಯ ಸಲಹೆಯಂತೆ ನಿಯಮಾನುಸಾರ ಕ್ರಮ ವಹಿಸಲು ಸೂಚಿಸಲಾಗಿರುವಂತೆ ದಿನಾಂಕ:18/09/2019 ರಂದು ನಡೆದ ತಾಂತ್ರಿಕ ಸಲಹಾ ಸಮಿತಿ ಸಭೆಗೆ ಮೇಲ್ಕಂಡ ಕಾಮಗಾರಿಯ ಕಾಲಾವಧಿ ವಿಸ್ತರಣೆ ಪ್ರಸ್ತಾವನೆಯನ್ನು ಮಂಡಿಸಲಾಗಿದ್ದು, ಅನುಮೋದನೆ ಪಡೆದುಕೊಳ್ಳಲಾಗಿರುತ್ತದೆ. ಅದರಂತೆ ಸದರಿ ಕಾಮಗಾರಿಯ ಕಾಲಾವಧಿ ಪ್ರಸ್ತಾವನೆಯನ್ನು ಮಂಡಳಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ :

ಮಂಡಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಸದರಿ ಕಾಮಗಾರಿಯ ಗುತ್ತಿಗೆ ಕಾಲಾವಧಿಯು 2018 ಕ್ಕೆ ಮುಕ್ತಾಯವಾಗಿದ್ದು, ಕಾಲಾವಧಿ ವಿಸ್ತರಣೆಯ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು ಹಾಗೂ ವಿಳಂಬವಾಗಿ ಪ್ರಸ್ತಾವನೆಯನ್ನು ಮಂಡಿಸಲು ಕಾರಣರಾದವರಿಂದ ವಿವರಣೆ ಪಡೆಯಲು ಸೂಚಿಸಲಾಯಿತು.

ಕ್ರಮ : ಆಯುಕ್ತರು, ಕಕೊಅಮ

ವಿಷಯ ಸಂಖ್ಯೆ:- 13

ವಿಷಯ :- ಬೆಂಗಳೂರು ನಗರ ಜಯನಗರ ವಿಧಾನಸಭಾ ಕ್ಷೇತ್ರದ ರಾಜೇಶ್ವರಿನಗರ ಕೊಳಚೆ ಪ್ರದೇಶದ ನಿವಾಸಿಗಳ ಫಲಾನುಭವಿಗಳ ನರ್ಮ್-ಬಿಎಸ್‌ಯುಪಿ ಹಂತ-2 ರ ಯೋಜನೆಯಡಿ ನಿರ್ಮಿಸಲಾಗಿರುವ 432 ಮನೆಗಳ ಪೈಕಿ ಅನುಮೋದಿತ 323 ಫಲಾನುಭವಿಗಳ ಪಟ್ಟಿಯನ್ನು ಹೊರತು ಪಡಿಸಿ ಉಳಿಕೆ 109 ಫಲಾನುಭವಿಗಳ ಪಟ್ಟಿಗೆ ಮಂಡಳಿ ಸಭೆಯ ಅನುಮೊದನೆಗಾಗಿ ಸಲ್ಲಿಸವುವ ಬಗ್ಗೆ.

ಬೆಂಗಳೂರು ನಗರ ಜಯನಗರ ವಿಧಾನ ಸಭಾಕ್ಷೇತ್ರದ ರಾಜೇಶ್ವರಿನಗರ ಕೊಳಚೆ ಪ್ರದೇಶದಲ್ಲಿ ಮಂಡಳಿಯಿಂದ ನರ್ಮ್-ಬಿಎಸ್‌ಯುಪಿ ಹಂತ-2ರಡಿಯಲ್ಲಿ 432 (ಜಿ+3) ಮನೆಗಳನ್ನು ನಿರ್ಮಿಸಲಾಗಿರುತ್ತದೆ. ದಿನಾಂಕ:25/02/2013ರ ಆಯುಕ್ತರ ಪತ್ರದಲ್ಲಿ ಮಂಡಳಿಯಿಂದ 304 ಫಲಾನುಭವಿಗಳು ಮತ್ತು ದಿನಾಂಕ:25.03.2017ರ ಮಂಡಳಿ ಸಭೆಯ ವಿಷಯ ಸಂಖ್ಯೆ:35ರಲ್ಲಿ 18 ಫಲಾನುಭವಿಗಳ ಮತ್ತು ದಿನಾಂಕ:13.07.2018ರಂದು ಮಂಡಳಿ ಸಭೆಯ ವಿಷಯ ಸಂಖ್ಯೆ:13ರಲ್ಲಿ 01 ಫಲಾನುಭವಿಗೆ ಅನುಮೋದನೆಯಾಗಿರುತ್ತದೆ. ಒಟ್ಟಾರೆ 323 ಫಲಾನುಭವಿಗಳ ಪಟ್ಟಿಯು ಅನುಮೋದನೆಯಾಗಿರುತ್ತದೆ. ಬಾಕಿ ಉಳಿದ 109 ಫಲಾನುಭವಿಗಳ ಪಟ್ಟಿಯನ್ನು ಮಂಡಳಿಯಿಂದ ಅನುಮೋದಿಸಬೇಕಾಗಿರುತ್ತದೆ.

ದಿನಾಂಕ:18.01.2020 ರಂದು ಮನೆ ಹಂಚಿಕಾತಿ ಸಮಿತಿಯ ಸಭೆ ನಡೆಸಲಾಗಿದ್ದು ಉಪ ವಿಭಾಗದಿಂದ ದಿನಾಂಕ:27.08.2019 ರಂದು ದಾಖಲೆಗಳನ್ನು ಪರಿಶೀಲಿಸಿ ಸ್ಥಳಿಯ ಕೊಳಚೆ ನಿವಾಸಿಗಳು ಮತ್ತು ಮಂಡಳಿಯಿಂದ ನೀಡಿರುವ ತಿಳುವಳಿಕೆ ಪತ್ರವನ್ನು ಮತ್ತು ಸದರಿ ಕೊಳಚೆ ಪ್ರದೇಶದ ವಿಳಾಸವನ್ನು ಹೊಂದಿರುವವರನ್ನು ಪರಿಗಣಿಸಿ 99 ಫಲಾನುಭವಿಗಳ ಪಟ್ಟಿಯನ್ನು ಹಂಚಿಕಾತಿ ಸಭೆಯಲ್ಲಿ ಅಂತಿಮಗೊಳಿಸಲಾಗಿದ್ದು, ಮಂಡಳಿ ಸಭೆಯ ಅನುಮೋದನೆಗೆ ಮಂಡಿಸಲು ತೀರ್ಮಾನಿಸಲಾಗಿರುತ್ತದೆ.

ಶಾಕಾಂಬರಿ ವಾರ್ಡ್-179ರಲ್ಲಿ ಕಡುಬಡವರು, ರಾಜೇಶ್ವರಿನಗರದಲ್ಲಿ ಮಂಡಳಿ ವತಿಯಿಂದ ನಿರ್ಮಿಸಿರುವ ಮನೆಗಳನ್ನು ಹಂಚಿಕೆ ಮಾಡುವ ಬಗ್ಗೆ ಅರ್ಜಿ ಸಲ್ಲಿಸಿದ್ದ ಕಾರಣ ಇವರುಗಳ ಪೈಕಿ ವಸತಿಹೀನರನ್ನು ಪರಿಗಣಿಸಿ 10 ಫಲಾನುಭವಿಗಳನ್ನು ಆಯ್ಕೆಮಾಡಲಾಗಿದ್ದು, ಸದರಿಯವರಿಗೆ ಯಾವುದೆ ಸ್ವಂತವಾದ ಮನೆ ಇಲ್ಲದಿರುವ ಹಾಗೂ ಹಾಲಿ ಸಮರ್ಥಿಸಲಾಗದ ಪ್ರದೇಶದಲ್ಲಿ ವಾಸಿಸುತ್ತಿರುವ ಕಾರಣ ಪರಿಗಣಿಸಲಾಗಿದ್ದು, ಸದರಿ 10 ಫಲಾನುಭವಿಗಳಿಗೆ ಮಂಡಳಿ ಸಭೆಯ ಅನುಮೋದನೆಗೆ ಪರಿಗಣಿಸಲು ತೀರ್ಮಾನಿಸಲಾಗಿರುತ್ತದೆ. ಒಟ್ಟಾರೆಯಾಗಿ 109 ಫಲಾನುಭವಿಗಳ ಪಟ್ಟಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.

ಪ್ರಸ್ತುತ 109 ಫಲಾನುಭವಿಗಳ ಪಟ್ಟಿಯಲ್ಲಿರುವವರಿಗೆ ಮನೆಗಳನ್ನು ಹಂಚಿಕೆ ಮಾಡಲು ಪಟ್ಟಿಯನ್ನು ಅನುಬಂಧದಲ್ಲಿ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ :

ಈ ಬಗ್ಗೆ ಸರ್ಕಾರದ ಸುತ್ತೋಲೆಯಂತೆ ಪರಿಶೀಲಿಸಿ ಮಂಡಿಸಲು ತಿರ್ಮಾನಿಸಿ ವಿಷಯವನ್ನು ಮುಂದೂಡಲಾಯಿತು.

ಕ್ರಮ : ಆಯುಕ್ತರು, ಕಕೊಅಮ

ವಿಷಯ ಸಂಖ್ಯೆ:– 14

ವಿಷಯ :– ಬೆಂಗಳೂರು ನಗರದ ಬೆಂಗಳೂರು ದಕ್ಷಿಣ ವಿಧಾನಸಭಾಕ್ಷೇತ್ರದ ವ್ಯಾಪ್ತಿಯಲ್ಲಿನ ಭುವನೇಶ್ವರಿನಗರ ಕೊಳಚೆಪ್ರದೇಶದಲ್ಲಿ ನರ್ಮ್–ಬಿಎಸ್‌ಯುಪಿ ಹಂತ–03 ಯೋಜನೆಯಡಿ ನಿರ್ಮಿಸಲಾಗಿರುವ 880 ಮನೆಗಳಿಗೆ ಹಂಚಿಕೆ ಮಾಡುವ ಸಂಬಂಧ ಮಂಡಳಿಯಿಂದ ಈಗಾಗಲೇ ಅನುಮೋದಿತ 700 ಫಲಾನುಭವಿಗಳ ಪೈಕಿ 111 ಫಲಾನುಭವಿಗಳ ಪಟ್ಟಿಗೆ ಮಂಡಳಿಯಿಂದ ರದ್ದುಪಡಿಸಲು ಮತ್ತು ಬಾಕಿ ಉಳಿದ 331 ಫಲಾನುಭವಿಗಳ ಪಟ್ಟಿಗೆ ಮಂಡಳಿ ಸಭೆಯ ಅನುಮೊದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸುತ್ತಿರುವ ಬಗ್ಗೆ.

ಬೆಂಗಳೂರು ನಗರದ ಬೆಂಗಳೂರು ದಕ್ಷಿಣ ವಿಧಾನಸಭಾಕ್ಷೇತ್ರದ ವ್ಯಾಪ್ತಿಯಲ್ಲಿನ ಭುವನೇಶ್ವರಿನಗರ ಕೊಳಚೆಪ್ರದೇಶದಲ್ಲಿ ನರ್ಮ್–ಬಿಎಸ್‌ಯುಪಿ ಹಂತ–03 ರ ಯೋಜನೆಯಡಿಯಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ 880 ಮನೆಗಳನ್ನು (**In-Situ** ಜಿ+3, ಜಿ+4) ನಿರ್ಮಿಸಲಾಗಿದೆ.

ಬೆಂಗಳೂರು ದಕ್ಷಿಣ ವಿಧಾನ ಸಭಾಕ್ಷೇತ್ರದ ಭುವನೇಶ್ವರಿನಗರ ಕೊಳಚೆ ಪ್ರದೇಶದಲ್ಲಿ ಮಂಡಳಿಯಿಂದ ನರ್ಮ್–ಬಿಎಸ್‌ಯುಪಿ ಹಂತ–3ರಡಿಯಲ್ಲಿ 880 (ಜಿ+3 & ಜಿ+4) ಮನೆಗಳನ್ನು ನಿರ್ಮಿಸಲಾಗಿದ್ದು, ಈ ಹಿಂದೆ ದಿನಾಂಕ:25/02/2013ರ ಆಯುಕ್ತರ ಪತ್ರದಲ್ಲಿ ಮಂಡಳಿಯಿಂದ 622 ಮತ್ತು ದಿನಾಂಕ:22.06.2017ರ ಮಂಡಳಿ ಸಭೆಯ ವಿಷಯ ಸಂಖ್ಯೆ:31ರಲ್ಲಿ ಯಡಿಯೂರು ನಾಗಸಂದ್ರ ಕೊಳಚೆ ಪ್ರದೇಶದ 40 ಫಲಾನುಭವಿಗಳ ಮತ್ತು ದಿನಾಂಕ:18.12.2018ರಂದು ಮಂಡಳಿ ಸಭೆಯಲ್ಲಿ ವಿಷಯ ಸಂಖ್ಯೆ:42ರಲ್ಲಿ ಆನಂದಪುರಂ ಕೊಳಚೆ ಪ್ರದೇಶದ 38 ಫಲಾನುಭವಿಗೆ ಅನುಮೋದನೆಯಾಗಿದ್ದು, ಒಟ್ಟಾರೆ 700 ಫಲಾನುಭವಿಗಳಿಗೆ ಅನುಮೋದನೆಯಾಗಿರುತ್ತದೆ.

ಸದರಿ ಅನುಮೋದಿತ 700 ಫಲಾನುಭವಿಗಳ ಪೈಕಿ 111 ಫಲಾನುಭವಿಗಳು ಸುಮಾರು 08 ವರ್ಷದಿಂದ ಇದುವರೆಗೆ ಮನೆ ಹಂಚಿಕೆ ಸಂಬಂದ ದಾಖಲೆಗಳೊಂದಿಗೆ ಮಂಡಳಿಯನ್ನು ಸಂಪರ್ಕಿಸದ ಕಾರಣ ಸದರಿ 111 ಫಲಾನುಭವಿಗಳ ಪಟ್ಟಿಯನ್ನು ಮಂಡಳಿಯಿಂದ ರದ್ದುಪಡಿಸಬೇಕಾಗಿರುತ್ತದೆ. ಬಾಕಿ ಉಳಿದ 331 ಫಲಾನುಭವಿಗಳ ಪಟ್ಟಿಗೆ ಅನುಮೋಧನೆಯಾಗಬೇಕಾಗಿರುತ್ತದೆ.

ದಿನಾಂಕ:18.01.2020 ರಂದು ಮನೆ ಹಂಚಿಕಾತಿ ಸಮಿತಿಯ ಸಭೆ ನಡೆಸಲಾಗಿದ್ದು ಉಪ ವಿಭಾಗದಿಂದ ದಿನಾಂಕ:01.06.2019 ಮತ್ತು 30.07.2019& 31.07.2019ರಂದು ದಾಖಲೆಗಳನ್ನು ಪರಿಶೀಲಿಸಿ ಸ್ಥಳಿಯ ಕೊಳಚೆ ನಿವಾಸಿಗಳು ಮತ್ತು ಮಂಡಳಿಯಿಂದ ನೀಡಿರುವ ತಿಳುವಳಿಕೆ ಪತ್ರವನ್ನು ಮತ್ತು ಸದರಿ ಕೊಳಚೆ ಪ್ರದೇಶದ ವಿಳಾಸವನ್ನು ಹೊಂದಿರುವವರನ್ನು ಪರಿಗಣಿಸಿ 114 ಫಲಾನುಭವಿಗಳ ಪಟ್ಟಿಯನ್ನು ಹಂಚಿಕಾತಿ ಸಭೆಯಲ್ಲಿ ಅಂತಿಮಗೊಳಿಸಲಾಗಿದ್ದು, ಸದರಿ ಮಂಡಳಿ ಸಭೆಯ ಅನುಮೋದನೆಗೆ ತೀರ್ಮಾನಿಸಲಾಗಿರುತ್ತದೆ.

ಉತ್ತರಹಳ್ಳಿ ವಾರ್ಡ್ 184ರಲ್ಲಿ ಕಡು ಬಡವರು, ಭುವನೇಶ್ವರಿ ನಗರದಲ್ಲಿ ಮಂಡಳಿ ವತಿಯಿಂದ ನಿರ್ಮಿಸಿರುವ ಮನೆಗಳನ್ನು ಹಂಚಿಕೆ ಮಾಡುವ ಬಗ್ಗೆ ಅರ್ಜಿ ಸಲ್ಲಿಸಿದ್ದ ಕಾರಣ ಇವರುಗಳ ಪೈಕಿ ವಸತಿಹೀನರನ್ನು ಪರಿಗಣಿಸಿ 202 ಫಲಾನುಭವಿಗಳನ್ನು ಆಯ್ಕೆಮಾಡಲಾಗಿದ್ದು, ಸದರಿಯವರಿಗೆ ಯಾವುದೆ ಸ್ವಂತವಾದ ಮನೆ ಇಲ್ಲದಿರುವ ಹಾಗೂ ಹಾಲಿ ಸಮರ್ಥಿಸಲಾಗದ ಪ್ರದೇಶದಲ್ಲಿ ವಾಸಿಸುತ್ತಿರುವ ಕಾರಣ ಪರಿಗಣಿಸಲಾಗಿದ್ದು, ಸದರಿ 202 ಫಲಾನುಭವಿಗಳಿಗೆ ಮಂಡಳಿ ಸಭೆಯ ಅನುಮೋದನೆಗೆ ಪರಿಗಣಿಸಲು ತೀರ್ಮಾನಿಸಲಾಗಿರುತ್ತದೆ. ಒಟ್ಟಾರೆಯಾಗಿ 331 ಫಲಾನುಭವಿಗಳ ಪಟ್ಟಿಯನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಬೆಂಗಳೂರು ದಕ್ಷಿಣ ವಿಧಾನ ಸಭಾಕ್ಷೇತ್ರದ ಭುವನೇಶ್ವರಿನಗರ ಕೊಳಚೆ ಪ್ರದೇಶದಲ್ಲಿ ಮಂಡಳಿಯಿಂದ ನಿರ್ಮಿಸಿರುವ ಮನೆಗಳನ್ನು ಹಂಚಿಕೆ ಮಾಡುವಂತೆ ಹಲವಾರು ಕಡೆಗಳಿಂದ ಅರ್ಜಿ ಸ್ವೀಕೃತವಾಗಿದ್ದು, ಇವುಗಳ

ಪೈಕಿ ಸ್ಥಳೀಯ ಶಾಸಕರು–197, ಸ್ಥಳೀಯ ಸಂಸದರು 77, ದಲಿತ ಸಂಘ ಸಮಿತಿ ರವರು–151, ಸಮತಾ ಸೈನಿಕ ದಳರವರು–120, ಮಂಗಳ ಮುಖಿ ರವರು–11, ವಸಂತಪುರದ ಕೊಳಚೆ ಪ್ರದೇಶದ ನಿವಾಸಿಗಳು–20, ಉತ್ತರಹಳ್ಳಿ ಕೊಳಚೆ ಪ್ರದೇಶದ ನಿವಾಸಿಗಳು–120, ಸ್ಥಳೀಯ ಪತ್ರಕರ್ತರು–05, ಜಯನಗರ ಶಾಸಕರು–30, ಚಾಮರಾಜಪೇಟೆ ವಿಧಾನ ಸಭಾಕ್ಷೇತ್ರದ ಅಂಬೇಡ್ಕರ್ ಸಂಘದ ವತಿಯಿಂದ–20, ಸನ್ಯಾಸಿಕುಂಟೆ–2 ರವರು–55, ಮತ್ತು ರಾಜಕೀಯ ಮುಖಂಡರು–20, ಇತರೆ ಕೊಳಚೆ ಪ್ರದೇಶಗಳಿಂದ–80, ಒಟ್ಟು –906 ಫಲಾನುಭವಿಗಳ ಮನೆ ಹಂಚಿಕೆ ನೀಡುವಂತೆ ಮಂಡಳಿಗೆ ಅರ್ಜಿಯನ್ನು ಸಲ್ಲಿಸಿದ್ದು, ಪ್ರಸ್ತುತ ಭುವನೇಶ್ವರಿನಗರ ಕೊಳಚೆ ಪ್ರದೇಶದಲ್ಲಿ 459 ಮನೆಗಳನ್ನು ಹಂಚಿಕೆ ಮಾಡಿ ಹಾಗೂ 331 ಮನೆಗಳ ಫಲಾನುಭವಿಗಳನ್ನು ಈ ಸಮಿತಿಯಲ್ಲಿ ಮನೆ ಹಂಚಿಕೆ ಮಾಡಲು ಶಿಫಾರಸ್ಸು ಮಾಡಿ ಉಳಿದಿರುವ 90 ಮನೆಗಳನ್ನು ಸದರಿಯವರಿಗೆ ಹಂಚಿಕೆ ಮಾಡುವ ಸಂಬಂಧ ಮಂಡಳಿ ಸಭೆಯ ನಿರ್ದೇಶನ ಕೋರಲಾಗಿದೆ.

ಪ್ರಸ್ತುತ 331 ಫಲಾನುಭವಿಗಳ ಪಟ್ಟಿಯಲ್ಲಿರುವವರಿಗೆ ಮನೆಗಳನ್ನು ಹಂಚಿಕೆ ಮಾಡಲು ಪಟ್ಟಿಯನ್ನು ಅನುಬಂಧದಲ್ಲಿ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ :

ಈ ಬಗ್ಗೆ ಸ್ಥಳೀಯ ಮಾನ್ಯ ಶಾಸಕರೊಂದಿಗೆ ಮಂಡಳಿಯ ಸಂಬಂಧಿತ ಅಧಿಕಾರಿಗಳು ಚರ್ಚಿಸಿ ಅವರ ಅಭಿಪ್ರಾಯದೊಂದಿಗೆ ಮುಂದಿನ ಮಂಡಳಿ ಸಭೆಯಲ್ಲಿ ಮಂಡಿಸಲು ತಿಳಿಸಿ ವಿಷಯವನ್ನು ಮುಂದೂಡಲಾಯಿತು.

ಕ್ರಮ :– ಆಯುಕ್ತರು, ಕಕೊಅಮ

ವಿಷಯ ಸಂಖ್ಯೆ :– 15

ವಿಷಯ :– ಬೆಂಗಳೂರು ನಗರದ ಗೋವಿಂದರಾಜನಗರ ವಿಧಾನ ಸಭಾ ಕ್ಷೇತ್ರದ ಎ.ಡಿ.ಹಳ್ಳಿ ಕೊಳಚೆ ಪ್ರದೇಶದ 23 ಫಲಾನುಭವಿಗಳ ಪಟ್ಟಿಯನ್ನು ಮಂಡಳಿ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ

ಬೆಂಗಳೂರು ನಗರದ ಗೋವಿಂದರಾಜನಗರ ವಿಧಾನ ಸಭಾ ಕ್ಷೇತ್ರದ ಎ.ಡಿ.ಹಳ್ಳಿಕೊಳಚೆ ಪ್ರದೇಶದ ನಿವಾಸಿಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಯೋಜನೆಯಡಿಯಲ್ಲಿ 65 ಮನೆಗಳನ್ನು ನಿರ್ಮಿಸಲು ಮಂಜೂರಾಗಿದ್ದು, ಸದರಿ 65ಮನೆಗಳನ್ನು ಮಂಡಳಿ ವತಿಯಿಂದ ನಿರ್ಮಿಸಲು ಅನುಮೋದನೆಯಾಗಿರುತ್ತದೆ. ಅದರಂತೆ 65 ಮನೆಗಳನ್ನು ನಿರ್ಮಿಸಲಾಗಿದ್ದು ಸದರಿ ಮನೆಗಳನ್ನು ನಿರ್ಮಿಸುವ ಸಮಯದಲ್ಲಿ ತೆರವುಗೊಳಿಸಲಾದ 35 ಆರ್ಥಿಕ–ಸಾಮಾಜಿಕ ಸಮಿತಿ ನಡೆಸಿ ದಾಕಲಿಸಲಾಗಿದೆ, ಮನೆಗಳು ಪೂರ್ಣಗೊಂಡ ನಂತರ ಮನೆಗಳಲ್ಲಿ ವಾಸಿಸಲು ಅನುವು ಮಾಡಿಕೊಡಲಾಗಿರುತ್ತದೆ.

ಸದರಿ ಕೊಳಚೆ ಪ್ರದೇಶದಲ್ಲಿ ಒಟ್ಟಾರೆ 65 ಮನೆಗಳನ್ನು ನಿರ್ಮಿಸಿರುವುದರಿಂದ ಹಾಗೂ ಸದರಿ ಫಲಾನುಭವಿಗಳನ್ನು ಬಿಬಿಎಂಪಿ ವತಿಯಿಂದ ಅನುಮೋದನೆ ಮಾಡಬೇಕಾದ್ದರಿಂದ ಬಿಬಿಎಂಪಿಗೆ ದಿನಾಂಕ:03.06.2015 ರಂದು ಫಲಾನುಭವಿಗಳ ಪಟ್ಟಿಯನ್ನು ಅನುಮೋದನೆಗಾಗಿ ಸಲ್ಲಿಸಲಾಗಿತ್ತು. ಬಿಬಿಎಂಪಿ ರವರು ಪಟ್ಟಿಯನ್ನು ಅನುಮೋದಿಸಲು ವಿಳಂಬವಾದ ಕಾರಣ ಮಂಡಳಿಯಿಂದ ಬಿಬಿಎಂಪಿಗೆ ಸಲ್ಲಿಸಿದ್ದ ಪಟ್ಟಿಯನ್ನು ಮಂಡಳಿ ಸಭೆ ದಿನಾಂಕ:18.12.2017 ರಂದು ವಿಷಯ ಸಂಖ್ಯೆ:45ರಲ್ಲಿ ಮಂಡಿಸಿ 65 ಫಲಾನುಭವಿಗಳ ಪಟ್ಟಿಗೆ ಅನುಮೋದನೆ ಪಡೆಯಲಾಗಿರುತ್ತದೆ.

ಮುಂದುವರೆದಂತೆ ದಿನಾಂಕ: 02.11.2019 ರಂದು ಬಿ.ಬಿ.ಎಂ.ಪಿ,ಯು 30 ಫಲಾನುಭವಿಗಳ ಪಟ್ಟಿಗೆ ವಾರ್ಡ್ ಸಮಿತಿ ಸಭೆಯ ನಡವಳಿಯೊಂದಿಗೆ ಅನುಮೋದನೆ ನೀಡಿ ದರಿ 30 ಫಲಾನುಭವಿಗಳಿಗೆ ಮಂಡಳಿಯಿಂದ ಮನೆಗಳನ್ನು ಹಂಚಿಕೆ ಮಾಡಲು ಸಲ್ಲಿಸಲಾಗಿರುತ್ತದೆ. ಮೂರು ವರ್ಷಗಳ ವಿಳಂಬದ ನಂತರ ಸದರಿ ಕೊಳಚೆ ಪ್ರದೇಶದ ಅನುಮೋಧಿತ ಪಟ್ಟಿಯು ಬಂದಿರುತ್ತದೆ. ಈ ಹಿಂದೆ ಮಂಡಳಿಯಿಂದ ಮಂಜೂರಾಗಿದ್ದ 30 ಫಲಾನುಭವಿಗಳ ಪೈಕಿ 08 ಫಲಾನುಭವಿಗಳು ಎರಡೂ ಅನುಮೋದಿತ ಪಟ್ಟಿಯಲ್ಲಿ ಇರುವ ಕಾರಣ ಸದರಿ 08 ಫಲಾನುಭವಿಗಳನ್ನು ಹೊರತು ಪಡಿಸಿ ಉಳಿಕೆ 23 ಫಲಾನುಭವಿಗಳು ಮಂಡಳಿಯಿಂದ ಅನುಮೋದನೆಯಾಗಿರುವ ಪಟ್ಟಿಯನ್ನು ರದ್ದುಪಡಿಸಬೇಕಾಗಿರುವುದರಿಂದ ವಾಸದ ಘಟಕದ ಹಂಚಿಕಾತಿ ಸಮಿತಿ ಸಭೆಯನ್ನು ನಡೆಸಲಾಯಿತು.

ಸದರಿ ಸಭೆಯಲ್ಲಿ ಮಂಡಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಮನೆಗಳನ್ನು ನಿರ್ಮಿಸುವ ಪೂರ್ವದಲ್ಲಿ ವಾಸಿಸುತ್ತಿದ್ದ 35 ಫಲಾನುಭವಿಗಳ ಪೈಕಿ ಈ ಹಿಂದೆ 34 ಫಲಾನುಭವಿಗಳಿಗೆ ಮಾತ್ರ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆದಿರುವ ಕಾರಣ, ಉಳಿದ ಓರ್ವ ಫಲಾನುಭವಿಯಾದ ಶ್ರೀಮತಿ ಲಕ್ಷ್ಮಿ ಕೋಂ ಸಂಗಪ್ಪ ರವರಿಗೆ ಮನೆ ಹಂಚಿಕೆ ಮಾಡಲು ಮತ್ತು ಮಂಡಳಿ ಸಭೆ ಅನುಮೋದನೆಗೆ ಮಂಡಿಸಲು

ತೀರ್ಮಾನಿಸಲಾಯಿತು ಹಾಗೂ ಮಂಡಳಿಯಿಂದ ಅನುಮೋದನೆಯಾಗಿರುವ 23 ಫಲಾನುಭವಿಗಳ ದಾಖಲಾತಿಗಳನ್ನು ಮತ್ತು ವಾಸ ಸ್ಥಳದ ದೃಢೀಕರಣ ಪತ್ರಗಳು ಪರಿಶೀಲಿಸಿ ಹಾಗೂ ಅನುಮೋದಿತ ಫಲಾನುಭವಿಗಳು ಮನೆ ಹಂಚಿಕೆ ಪಡೆಯುವ ಬಗ್ಗೆ ಮಂಡಳಿಯನ್ನು ಸಂಪರ್ಕಿಸದ ಕಾರಣ ಸದರಿ 23 ಫಲಾನುಭವಿಗಳ ಪಟ್ಟಿಯನ್ನು ರದ್ದುಗೊಳಿಸಿ, ಹಾಗೂ ದಿನಾಂಕ: 02.11.2019 ರಂದು ಬಿಬಿಎಂಪಿಯಿಂದ ಅನುಮೋದಿತರಾಗಿರುವ 30 ಫಲಾನುಭವಿಗಳ ಪಟ್ಟಿಯ ಪೈಕಿ 22 ಫಲಾನುಭವಿಗಳ ಪಟ್ಟಿಯನ್ನು ಮಂಡಳಿ ಸಭೆಗೆ ಮಂಡಿಸಿ ಅನುಮೋದನೆಗೆ ಪರಿಗಣಿಸಬಹುದಾಗಿರುತ್ತದೆ. ಹಾಗೂ ಓರ್ವ ಫಲಾನುಭವಿಯಾದ ಶ್ರೀಮತಿ ಲಕ್ಷ್ಮಿ ಕೋಂ ಸಂಗಪ್ಪ ರವರಿಗೂ ಸಹ ಮಂಡಳಿ ಸಭೆ ಅನುಮೋದನೆ ಪಡೆಯಬೇಕಾಗಿರುತ್ತದೆ.

ಆದ್ದರಿಂದ ಬಿಬಿಯಂಪಿ ಯಿಂದ ಅನುಮೋದಿತರಾಗಿರುವ 22 ಫಲಾನುಭವಿಗಳ ಪಟ್ಟಿಯನ್ನು ಮಂಡಳಿ ಸಭೆಗೆ ಅನುಮೋದನೆಗಾಗಿ ಮಂಡಿಸಿದೆ. ಹಾಗೂ ಮೂಲ ಫಲಾನುಭವಿಯಾದ ಶ್ರೀಮತಿ ಲಕ್ಷ್ಮಿ ಕೋಂ ಸಂಗಪ್ಪ ರವರ ಪಟ್ಟಿಗೂ ಮಂಡಳಿ ಸಭೆ ಅನುಮೋದನೆ ಕೋರಲಾಗಿದೆ.

ನಿರ್ಣಯ :

ಮಂಡಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಿದ ಸಭೆಯು ಸದರಿ ಪ್ರದೇಶದಲ್ಲಿ ಮಂಡಳಿಯಿಂದ ನಿರ್ಮಿತವಾದ ಮನೆಗಳಲ್ಲಿರುವ ಅನರ್ಹ ವ್ಯಕ್ತಿಗಳನ್ನು ತೆರವುಗೊಳಿಸಿ, ಸದರಿ ಹಂಚಿಕೆಯನ್ನು ರದ್ದುಪಡಿಸಿ ಮೂಲ ಕೊಳಚೆ ನಿವಾಸಿಗಳಾದ ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡಲು ಕ್ರಮ ವಹಿಸುವ ಬಗ್ಗೆ ಮಂಡಿಸಿರುವ ಪ್ರಸ್ತಾವನೆಗೆ ಮಂಡಳಿಯ ಅನುಮೋದನೆ ನೀಡಲಾಯಿತು.

ಕ್ರಮ : ಆಯುಕ್ತರು, ಕಕೊಅಮ

ವಿಷಯ ಸಂಖ್ಯೆ :– 16

ವಿಷಯ : – ಶಿವಮೊಗ್ಗ ನಗರದಕರ್ಲಟ್ಟಿ ಎ.ಕೆ.ಕಾಲೋನಿ ಕೊಳಚೆ ಪ್ರದೇಶ ಹಾಗೂ ಭದ್ರಾವತಿ ನಗರದ ವಾರ್ಡ್ ನಂ:30ರ ಫಿಲ್ಟರ್‌ಶೆಡ್‌ಕೊಳಚೆ ಪ್ರದೇಶದ ನಿವಾಸಿಗಳ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷಾ ಪಟ್ಟಿಯನ್ನುಅನುಮೋದನೆಗಾಗಿ ಮಂಡಿಸಿದೆ.

ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ ನಗರದ ಕರ್ಲಟ್ಟಿ ಎ.ಕೆ.ಕಾಲೋನಿ ಕೊಳಚೆ ಪ್ರದೇಶ ಹಾಗೂ ಭದ್ರಾವತಿ ನಗರದ ವಾರ್ಡ್ ನಂ:30ರ ಫಿಲ್ಟರ್‌ಶೆಡ್‌ಕೊಳಚೆ ಪ್ರದೇಶದ ನಿವಾಸಿಗಳನ್ನು ಮಂಡಳಿವತಿಯಿಂದ ಕೊಳಗೇರಿ ನಿವಾಸಿಗಳ ಸಾಮಾಜಿಕ ಮತ್ತುಆರ್ಥಿಕ ಸಮೀಕ್ಷೆ ಮಾಡಿರುವ ವಿವರವು ಈ ಕೆಳಕಂಡಂತೆ ನಮೂದಿಸಲಾಗಿದೆ.

| ಕ್ರ.ಸಂಖ್ಯೆ | ಕೊಳಗೇರಿ ಪ್ರದೇಶದ ಹೆಸರು | ಕುಟುಂಬಗಳ ಸಂಖ್ಯೆ |
|---|---|---|
| 1 | ಕರ್ಲಟ್ಟಿಎ.ಕೆ ಕಾಲೋನಿ ಕೊಳಚೆ ಪ್ರದೇಶ | 41 ಕುಟುಂಬಗಳು |
| 2 | ಭದ್ರಾವತಿ ನಗರದ ವಾರ್ಡ್ ನಂ:30 ರ ಫಿಲ್ಟರ್‌ಶೆಡ್ ಕೊಳಚೆ ಪ್ರದೇಶ | 191 ಕುಟುಂಬಗಳು |

ಮಂಡಳಿಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಶಿವಮೊಗ್ಗ–ಉಪ ವಿಭಾಗರವರು ದಿನಾಂಕ: 20–12–2019 ರಂದು ಸಲ್ಲಿಸಲಾದ ಪಟ್ಟಿಯನ್ನು ಸರ್ಕಾರದ ಆದೇಶದನ್ವಯ ರಚಿಸಲಾಗಿರುವ ಸಾಮಾಜಿಕ ಮತ್ತುಆರ್ಥಿಕ ಸಮೀಕ್ಷೆ ಸಮಿತಿಯ ಸಭೆಯನ್ನು ದಿನಾಂಕ:17–01–2020 ರಂದು ನಡೆಸಲಾಗಿದ್ದು. ಫಲಾನುಭವಿಗಳ ಸಮೀಕ್ಷೆ ಪಟ್ಟಿಗೆ ಯಾವುದೇ ಆಕ್ಷೇಪಣೆ ಬಾರದಿರುವುದರಿಂದ ಸದರಿ ಪಟ್ಟಿಯನ್ನು ಅಂತಿಮಗೊಳಿಸಿ ಅನುಮೋದನೆ ನೀಡಲಾಗಿದೆ. ಸದರಿ ನಿವಾಸಿಗಳಿಗೆ ನಿಯಮಾನುಸಾರ ಪರಿಚಯ ಪತ್ರವನ್ನು ವಿತರಿಸಲು ನಿವಾಸಿಗಳ ಪಟ್ಟಿಯನ್ನು ಮಂಡಳಿ ಸಭೆಯಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ :

ಈ ವಿಷಯದ ಬಗ್ಗೆ ಸ್ಥಳೀಯ ಸಂಸದರ ಅವಗಾಹನೆಗೆ ತಂದು ಅವರ ಅಭಿಪ್ರಾಯ ಪಡೆದು ಮುಂದಿನ ಕ್ರಮ ವಹಿಸಲು ಸೂಚಿಸಲಾಯಿತು.

ಕ್ರಮ : ಆಯುಕ್ತರು, ಕಕೊಅಮ

# ಹೆಚ್ಚುವರಿ ವಿಷಯಗಳು

**ಹೆಚ್ಚುವರಿ ವಿಷಯ ಸಂಖ್ಯೆ:– 1**

**ವಿಷಯ : – ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಹೊಸದಾಗಿ 2 ವೃತ್ತ ಕಛೇರಿ, 2 ವಿಭಾಗ ಕಛೇರಿ ಮತ್ತು 4 ಉಪ–ವಿಭಾಗ ಕಛೇರಿಗಳನ್ನು ಸ್ಥಾಪಿಸುವ ಬಗ್ಗೆ.**

ಸರ್ಕಾರದ ಆದೇಶ ಸಂಖ್ಯೆ: ವಇ 06 ಕೊಮಂಸೇ 2014 ದಿನಾಂಕ: 28.08.2014 ರಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳು ಹಾಗೂ ಸರ್ಕಾರದ ಇತರೆ ಯೋಜನೆಗಳ ಕಾರ್ಯಕ್ರಮಗಳನ್ನು ರಾಜ್ಯದ್ಯಂತ ಸಮರ್ಥವಾಗಿ ತ್ವರಿತಗತಿಯಲ್ಲಿ 'ಕಾಲಮಿತಿ ಅವಧಿ'ಯಲ್ಲಿ ಅನುಷ್ಠಾನಗೊಳಿಸಲು ಮಂಡಳಿಯ ಅಂಗಪುನರ್ರಚನೆ (Restructure) ಮೂಲಕ ಈಗಿರುವ 2 ತಾಂತ್ರಿಕ ನಿರ್ದೇಶಕ ವೃತ್ತ ಕಛೇರಿಗಳ ಜೊತೆಗೆ ಹೆಚ್ಚುವರಿಯಾಗಿ 2 ವೃತ್ತ ಕಛೇರಿಗಳು ಸೇರಿದಂತೆ ಬೆಂಗಳೂರು, ಮೈಸೂರು, ಧಾರವಾಡ ಹಾಗೂ ಕಲಬುರಗಿ ನಗರಗಳಲ್ಲಿ ಸದರಿ ಆದೇಶದ 'ಅನುಬಂಧ–ಅ' ರಲ್ಲಿ ನಮೂದಿಸಿರುವಂತೆ ನಾಲ್ಕು ವೃತ್ತಗಳನ್ನು ಸ್ಥಾಪಿಸಲು ಮತ್ತು ಹೆಚ್ಚುವರಿ 2 ವೃತ್ತಗಳ Superintending Engineer ಹುದ್ದೆಗಳಿಗೆ ಈಗಾಗಲೇ ಮಂಜೂರಾಗಿರುವ 12 ಕಾರ್ಯಪಾಲಕ ಇಂಜಿನಿಯರ್ ಹುದ್ದೆಗಳ ಪೈಕಿ 2 ಹುದ್ದೆಗಳನ್ನು 2 Superintending Engineer ಹುದ್ದೆಗಳನ್ನಾಗಿ ಉನ್ನತೀಕರಿಸಲು ಹಾಗೂ ವಿವಿಧ ವೃಂದದ 107 ಹುದ್ದೆಗಳನ್ನು ಹೊಸದಾಗಿ ಸೃಜಿಸಿ ಭರ್ತಿ ಮಾಡಿಕೊಳ್ಳಲು ಸರ್ಕಾರವು ಮಂಜೂರಾತಿ ನೀಡಿರುತ್ತದೆ ಮತ್ತು ಸದರಿ 107 ಹುದ್ದೆಗಳ ಆಡಳಿತಾತ್ಮಕ ವೆಚ್ಚವನ್ನು 'ರಾಜೀವ್ ಅವಾಸ್ ಯೋಜನೆ' ಶೀರ್ಷಿಕೆಯಡಿಯಲ್ಲಿ ಭರಿಸಲು ಮತ್ತು ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಅವಶ್ಯಕವಿರುವಲ್ಲಿ ಸೂಕ್ತವಾದ ತಿದ್ದುಪಡಿ ಮಾಡಲು ಆದೇಶಿಸಲಾಗಿರುತ್ತದೆ.

ಪ್ರಸ್ತುತ ಮಂಡಳಿಯ ಆದೇಶ ಸಂಖ್ಯೆ: ಕಕೊಅಮ/ಆಡಳಿತ/94/2017–18 ದಿನಾಂಕ 08/03/2019 ರಲ್ಲಿ ಮಂಡಳಿಯ ಕಾರ್ಯಕ್ಷೇತ್ರಗಳನ್ನು ಉತ್ತರ ಮತ್ತು ದಕ್ಷಿಣ ಭಾಗಗಳಾಗಿ ವಿಂಗಡಿಸಿ ಸಂಬಂಧಿಸಿದ 10 ವಿಭಾಗ ಕಛೇರಿಗಳು ಮತ್ತು 20 ಉಪ–ವಿಭಾಗ ಕಛೇರಿಗಳನ್ನು ತಾಂತ್ರಿಕ ನಿರ್ದೇಶಕರು–1 ರವರಿಗೆ ದಕ್ಷಿಣ ಭಾಗ ಹಾಗೂ ತಾಂತ್ರಿಕ ನಿರ್ದೇಶಕರು–2 ರವರಿಗೆ ಉತ್ತರ ಭಾಗದ ಕಾರ್ಯಕ್ಷೇತ್ರಗಳ ಮರು ವಿಂಗಡಣೆ ಮಾಡಿ ಆದೇಶಿಸಿದೆ.

ಮಂಡಳಿಯಲ್ಲಿ ಪ್ರಸ್ತುತ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಅವಾಸ್ ಯೋಜನೆ (PMAY-HFA) ಯಡಿ ರಾಜ್ಯದಲ್ಲಿನ ವಿವಿಧ ನಗರ / ಪಟ್ಟಣಗಳಲ್ಲಿರುವ ಕೊಳಗೇರಿ ಪ್ರದೇಶಗಳಿಗೆ ಮೂಲಭೂತ ಸೌಲಭ್ಯಗಳೊಂದಿಗೆ 1,80,253 ಮನೆಗಳ ನಿರ್ಮಾಣ ಕಾಮಗಾರಿಯನ್ನು ರೂ.10,975.98 ಕೋಟಿಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು CSMC ಯಿಂದ ಅನುಮೋದನೆಯಾಗಿರುತ್ತದೆ. ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ರೂ. 5,965.22 ಕೋಟಿಗಳ ಅನುದಾನ ಬೇಡಿಕೆ ಇದ್ದು, ಈ ಎಲ್ಲಾ ಯೋಜಿತ ಯೋಜನೆಗಳನ್ನು ರಾಜ್ಯಾದ್ಯಂತ ಹಂತ ಹಂತವಾಗಿ ಮಂಜೂರಾತಿ ನೀಡುತ್ತಿರುವುದರಿಂದ ಮಂಡಳಿಯ ಕಾರ್ಯವ್ಯಾಪ್ತಿ ಹೆಚ್ಚಾಗಿರುತ್ತದೆ. ಮಂಡಳಿಯ ಆಯವ್ಯಯ 1979 ರಲ್ಲಿ ರೂ.75.64 ಲಕ್ಷಗಳಿಂದ ಆರಂಭಗೊಂಡು ಪ್ರಸಕ್ತ ಸಾಲಿನ ಆಯವ್ಯಯ ರೂ. 4,687.15 ಕೋಟಿಗಳ ಅನುದಾನ ಬೇಡಿಕೆ ಇದ್ದು, ಮಂಡಳಿಯ ಕಾರ್ಯಾಚರಣೆ ಹಂತ ಹಂತವಾಗಿ ಹೆಚ್ಚಾಗುತ್ತಿರುತ್ತದೆ.

ರಾಜ್ಯ ಸರ್ಕಾರದ ವಿವಿಧ ಯೋಜನೆಗಳ ಗುರಿ ಸಾಧಿಸಬೇಕಾದಲ್ಲಿ ಮಂಡಳಿಯ ಆಡಳಿತಾತ್ಮಕ ಹಿತದೃಷ್ಟಿಯಿಂದ ಹೆಚ್ಚುವರಿಯಾಗಿ 2 ವೃತ್ತ ಕಛೇರಿಗಳು, 2 ವಿಭಾಗ ಕಛೇರಿ ಮತ್ತು 4 ಉಪ–ವಿಭಾಗ ಕಛೇರಿಗಳನ್ನು ಹೊಸದಾಗಿ ಸ್ಥಾಪಿಸಿದಲ್ಲಿ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಯೋಜನೆಗಳನ್ನು ಸಾಕಾರಗೊಳಿಸಲು ಸಾಧ್ಯವಾಗುತ್ತದೆ.

ಆದುದರಿಂದ ಸರ್ಕಾರದ ಆದೇಶ ಸಂಖ್ಯೆ: ವಇ 06 ಕೊಮಂಸೇ 2014 ದಿನಾಂಕ: 28.08.2014 ರ ಆದೇಶದಂತೆ ಮಂಡಳಿಯಲ್ಲಿ ಪ್ರಸ್ತುತ ಇರುವ 2 ತಾಂತ್ರಿಕ ನಿರ್ದೇಶಕರ ಕಛೇರಿಯ ಜೊತೆಗೆ ಹಾಲಿ ಇರುವ 12 ಕಾರ್ಯಪಾಲಕ ಅಭಿಯಂತರರುಗಳ ಹುದ್ದೆಗಳನ್ನು 2 ತಾಂತ್ರಿಕ ನಿರ್ದೇಶಕರ ಹುದ್ದೆಗಳನ್ನಾಗಿ ಉನ್ನತೀಕರಿಸಿ ಬೆಂಗಳೂರು, ಮೈಸೂರು, ಧಾರವಾಡ ಮತ್ತು ಕಲಬುರಗಿ ನಗರಗಳಲ್ಲಿ 4 ವೃತ್ತ ಕಛೇರಿಗಳನ್ನು ಸ್ಥಾಪಿಸಿ ಹಾಗೂ ಬೆಂಗಳೂರಿನಲ್ಲಿ ಹಾಲಿ ಇರುವ 3 ವಿಭಾಗ ಕಛೇರಿಗಳ ಜೊತೆಗೆ 2 ವಿಭಾಗ ಕಛೇರಿಗಳನ್ನು ಹಾಗೂ ಅಧೀನದಲ್ಲಿ 4

ಉಪ–ವಿಭಾಗ ಕಚೇರಿಗಳನ್ನು ಹೊಸದಾಗಿ ಸ್ಥಾಪಿಸಿ, ಕಾರ್ಯಕ್ಷೇತ್ರಗಳನ್ನು ಮರುವಿಂಗಡಣೆ ಮಾಡಲು ಅನುಮೋದನೆ ಕೋರಿದೆ.

ಮಂಡಳಿಯಲ್ಲಿ ಹಾಲಿ ಮಂಜೂರಾಗಿರುವ 324 ಹುದ್ದೆಗಳ ಜೊತೆಗೆ ಮೇಲಿನ ಸರ್ಕಾರದ ಆದೇಶದಲ್ಲಿ ಹೊಸದಾಗಿ ಸೃಜಿಸಿರುವ 107 ಹುದ್ದೆಗಳ ಪೈಕಿ ದಿನಾಂಕ 08/11/2019 ರ ಮಂಡಳಿ ಸಭೆಯಲ್ಲಿ ಅನುಮೋದನೆಗೆ ವಿಷಯ ಮಂಡಿಸಿರುವಂತೆ ಪರಿಷ್ಕೃತ 99 ಹುದ್ದೆಗಳನ್ನು ನಿಯೋಜನೆ / ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲು ಅನುಮೋದನೆ ನೀಡಲಾಗಿರುತ್ತದೆ ಹಾಗೂ ದಿನಾಂಕ 10/01/2020 ರಂದು ಮಾನ್ಯ ಮುಖ್ಯಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ನಡೆದ 5ನೇ ಸಮನ್ವಯ ಸಮಿತಿ ಸಭೆಯಲ್ಲಿ ಸರ್ಕಾರವು ಪ್ರತಿ ಫಲಾನುಭವಿಗೆ ನೀಡುವ ಘಟಕ ವೆಚ್ಚದಲ್ಲಿ ಮಂಡಳಿ ರೂ.200/– ಗಳನ್ನು ಒಂದು ಸಾರಿ ಮಾತ್ರ ಹಿಡಿದುಕೊಂಡು ಅದರಿಂದ ಸಂಗ್ರಹವಾಗುವ ಅನುಧಾನವನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿಗೆ ತಗಲುವ ಹುದ್ದೆಗಳ ಸಿಬ್ಬಂದಿ ವೆಚ್ಚಕ್ಕೆ ಬಳಸಿಕೊಳ್ಳಲು ನಿರ್ಧರಿಸಲಾಗಿದೆ. ಈ ಬಗ್ಗೆ ಸರ್ಕಾರಕ್ಕೆ ಆದೇಶ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದೆ.

ಮೇಲೆ ವಿವರಿಸರಿವಂತೆ ಹೊಸದಾಗಿ 2 ತಾಂತ್ರಿಕ ನಿರ್ದೇಶಕರ ವೃತ್ತ ಕಛೇರಿಗಳನ್ನು ಮತ್ತು 2 ವಿಭಾಗ ಮತ್ತು 4 ಉಪ ವಿಭಾಗ ಕಛೇರಿಗಳನ್ನು ಸ್ಥಾಪಿಸಲು ಹಾಗೂ ಹೊಸಾದಾಗಿ ಸ್ಥಾಪಿಸುವ ವಿಭಾಗ / ಉಪ ವಿಭಾಗ ಕಛೇರಿಗಳಿಗೆ ಅಗತ್ಯವಿರುವ ಈ ಕೆಳಕಂಡ ವಿವಿಧ ವರ್ಗದ ಹುದ್ದೆಗಳನ್ನು ಹೊಸದಾಗಿ ಸೃಜಿಸಿಕೊಂಡು ಕಾರ್ಯನಿರ್ವಹಿಸುವ ಕುರಿತು ಅಗತ್ಯ ಕ್ರಮ ಜರುಗಿಸುವ ಬಗ್ಗೆ ಮಂಡಳಿ ಸಭೆಯ ಅನುಮೋದನೆ ಕೋರಿ ವಿಷಯ ಮಂಡಿಸಿದೆ.

| ಕ್ರ.ಸಂ. | ಹುದ್ದೆಯ ಹೆಸರು | ಹೊಸದಾಗಿ ಸೃಜಿಸಬೇಕಾಗಿರುವ ಹುದ್ದೆಗಳು |
|---|---|---|
| 1. | ಕಾರ್ಯಪಾಲಕ ಅಭಿಯಂತರರು | 2 |
| 2. | ಸಹಾಯಕ ಕಾರ್ಯಪಾಲಕ ಅಭಿಯಂತರರು | 4 |
| 3. | ಅಧೀಕ್ಷಕರು | 2 |
| 4. | ಸಹಾಯಕ ಅಭಿಯಂತರರು | 14 |
| 5. | ಕಿರಿಯ ಅಭಿಯಂತರರು | 6 |
| 6. | ಪ್ರಥಮ ದರ್ಜೆ ಸಹಾಯಕರು | 8 |
| 7. | ದ್ವಿತೀಯ ದರ್ಜೆ ಸಹಾಯಕರು | 12 |
| 8. | ಡ್ಯಾಟಾ ಎಂಟ್ರಿ ಆಪರೇಟರ್ | 6 |
| 9. | ಗ್ರೂಪ್–ಡಿ | 6 |
| 10. | ಡ್ರೈವರ್ | 6 |
| | ಒಟ್ಟು | 66 |

ನಿರ್ಣಯ :

**ಮಂಡಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಮಂಡಳಿಯ ಅಗತ್ಯಕ್ಕೆ ಅನುಗುಣವಾಗಿ ಹೊಸ ಹುದ್ದೆಗಳನ್ನು ಸೃಜಿಸಲು ಸರ್ಕಾರಕ್ಕೆ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ತೀರ್ಮಾನಿಸಲಾಯಿತು.**

**ಕ್ರಮ : ಆಯುಕ್ತರು, ಕಕೊಅಮ**

ಹೆಚ್ಚುವರಿ ವಿಷಯ ಸಂಖ್ಯೆ:-2

ವಿಷಯ:- ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳನ್ನು ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಸಮನ್ವಯಗೊಳಿಸಿ ಮೂಲಭೂತ ಸೌಲಭ್ಯಗಳೊಂದಿಗೆ ರಾಜ್ಯದ ನಗರ / ಪಟ್ಟಣಗಳ ವಿವಿಧ ಕೊಳಚೆ ಪ್ರದೇಶಗಳಲ್ಲಿ 83119 ಮನೆಗಳ ನಿರ್ಮಾಣ ಮಾಡಲು ಕಾರ್ಯಾದೇಶ ನೀಡಿರುವ ಗುತ್ತಿಗೆ ಕಾಮಗಾರಿಗಳ ಬಗ್ಗೆ

ಪ್ರಧಾನ ಮಂತ್ರಿ ಆವಾಸ್ ಯೋಜನೆ-ಸರ್ವರಿಗೂ ಸೂರು (PMAY-HFA (U)) ಯೋಜನೆಯನ್ನು ರಾಜ್ಯದ ವಿವಿಧ ವಸತಿ ಯೋಜನೆ (ನಗರ) ಗಳನ್ನು ಸಮನ್ವಯಗೊಳಿಸಿ ರಾಜ್ಯದ ವಿವಿಧ ನಗರ/ಪಟ್ಟಣಗಳ ಕೊಳಗೇರಿ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ 83119 ಮನೆಗಳ ನಿರ್ಮಾಣ ಕಾಮಗಾರಿಗಳ ಯೋಜನೆಗಳನ್ನು (GF/G+1/G+2/G+3) ರೂ. 445971.93 ಲಕ್ಷಗಳ ಮೊತ್ತದಲ್ಲಿ ಕೈಗೊಳ್ಳಲು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪ್ರಾಧಿಕಾರಿಗಳಾದ SLAC ಮತ್ತು SLSMC ಹಾಗೂ CSMC ಸಭೆಗಳಲ್ಲಿ ಅನುಮೋದನೆ ದೊರಕಿರುವಂತೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಅದಂತೆ ಕಾಮಗಾರಿಗಳಿಗೆ ನಿಯಮಾನುಸಾರ ಇ-ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಿ ಟೆಂಡರ್ ಪರಿಶೀಲನಾ ಸಭೆಯಲ್ಲಿ ಮಂಡಿಸಿ ಟೆಂಡರ್ ಪರಿಶೀಲನಾ ಸಮಿತಿ ಸಭೆಯ ತೀರ್ಮಾನದಂತೆ ಅರ್ಹತೆ ಹೊಂದಿದ ಅರ್ಹ ಟೆಂಡರ್‌ದಾರರ ತಾಂತ್ರಿಕ ಬಿಡ್‌ಗಳ ಅನುಮೋದನೆಗೆ ಪ್ರಧಾನ ಮಂತ್ರಿ ಆವಾಸ್ ಯೋಜನೆಯ ರಾಜ್ಯ ಮಟ್ಟದ ನೋಡಲ್ ಏಜೆನ್ಸಿಯಾದ ರಾಜೀವ್ ಗಾಂಧೀ ವಸತಿ ನಿಗಮ ನಿಯಮಿತ ರವರಿಗೆ ಸಲ್ಲಿಸಿ ಸಕ್ಷಮ ಪ್ರಾಧಿಕಾರಿಗಳಾದ SLAC ಮತ್ತು SLSMC ರಾಜ್ಯ ಮಟ್ಟದ ಮಂಜೂರಾತಿ ಮತ್ತು ಉಸ್ತುವಾರಿ ಸಮಿತಿಗಳಿಂದ ಕ್ರಮವಾಗಿ ದಿನಾಂಕ:18-02-2017, 16-10-2017, 15-03-2018, 19-09-2018 ಅನುಮೋದನೆ ಪಡೆದು ಅದರಂತೆ ಅರ್ಹ ಗುತ್ತಿಗದಾರರಿಗೆ ಕಾಮಗಾರಿಗಳನ್ನು ನಿರ್ವಹಿಸಲು ಕಾರ್ಯಾದೇಶ ನೀಡಲಾಗಿರುತ್ತದೆ. ಅದರಂತೆ ಆಯಾ ಕೊಳಗೇರಿಗಳಲ್ಲಿ ನಿವಾಸಿಗಳು ವಾಸಿಸುವ ಜಾಗದ ಅಳತೆಗೆ ಅನುಗುಣವಾಗಿ ಮತ್ತು ಅವರುಗಳ ಒಪ್ಪಿಗೆಯಂತೆ ಪರಿಸ್ಥಿತಿಗೆ ಅನುಗುಣವಾಗಿ ಅನುಮೋದಿತ ಕಾರ್ಪೆಟ್ ವಿಸ್ತೀರ್ಣದಂತೆ ಮನೆಗಳನ್ನು ನಿರ್ಮಿಸಲು ಗುತ್ತಿಗೆ ದಾರರಿಗೆ ನಿವೇಶನಗಳನ್ನು ಹಂತ ಹಂತವಾಗಿ ಹಸ್ತಾಂತರಿಸಿ ಇದುವರೆವಿಗೂ ರಾಜ್ಯದ ವಿವಿಧ ನಗರ / ಪಟ್ಟಣಗಳ ಕೊಳಗೇರಿ ಪ್ರದೇಶಗಳಲ್ಲಿ ಒಟ್ಟು 43846 ಮನೆಗಳ ನಿರ್ಮಾಣವನ್ನು ಪ್ರಾರಂಭಿಸಿ ಕಾಮಗಾರಿಗಳು ಪ್ರಗತಿಯಲ್ಲಿತ್ತು.

ಈ ಮಧ್ಯೆ ವಸತಿ ಇಲಾಖೆಯ ಸರ್ಕಾರದಆದೇಶ ಸಂಖ್ಯೆ:ವ.ಇ.16ಹೆಚ್.ಎಫ್.ಎ2019 ದಿ:11-07-2019 ಅನ್ವಯ ಎ.ಹೆಚ್.ಪಿ ಘಟಕದಡಿ ಅನುಮೋದನೆಗೊಂಡು, ಬಿಡಿ ಮನೆಗಳನ್ನಾಗಿ ನಿರ್ಮಿಸಲು ಉದ್ದೇಶಿಸಿರುವ ಯಾವುದೇ ಹೊಸ ಮನೆಗಳ ನಿರ್ಮಾಣ ಕಾಮಗಾರಿಗಳನ್ನು ಸ್ಥಗಿತಗೊಳಿಸತಕ್ಕದ್ದು, ಅದರಂತೆ ಮನೆಗಳ ನಿರ್ಮಾಣದ ಕಾರ್ಯಾದೇಶವನ್ನು ಗುತ್ತಿಗೆದಾರರಿಗೆ ನೀಡಿ ಮತ್ತು ಕಾಮಗಾರಿಯನ್ನು ಇನ್ನೂ ಪ್ರಾರಂಭಿಸಿಲ್ಲದ ಪ್ರಕರಣಗಳಲ್ಲಿಯೂ ಸಹ ಮನೆಗಳ ನಿರ್ಮಾಣದ ಕಾಮಗಾರಿಯನ್ನು ಕೈಗೊಳ್ಳಬಾರದೆಂದು ಆದೇಶ ನೀಡಿ ಕೈಗೊಂಡ ಕ್ರಮ ಬಗ್ಗೆ ಅನುಸರಣಾ ವರದಿಯನ್ನು 2 ವಾರದ ಒಳಗಾಗಿ ಸಲ್ಲಿಸಲು ಹಾಗೂ ಈ ಆದೇಶವನ್ನು ಜಾರಿಗೊಳಿಸುವಲ್ಲಿ ಇರಬಹುದಾದ ನ್ಯೂನ್ಯತೆಗಳು, ಸ್ಪಷ್ಟೀಕರಣ ಇತ್ಯಾಧಿಗಳ ಬಗ್ಗೆ ಸರ್ಕಾರದ ಗಮನಕ್ಕೆ ತರುವಂತೆ ಸೂಚಿಸಲಾಗಿರುತ್ತದೆ. ಅದರಂತೆ ಸಂಬಂಧಿಸಿದ ಮಂಡಳಿಯ ಎಲ್ಲಾ ಕಾರ್ಯಪಾಲಕ ಅಭಿಯಂತರರು ರವರಿಗೆ ಪ್ರಾರಂಭವಾಗದೇ ಇರುವ ಮನೆಗಳ ಕಾಮಗಾರಿಗಳನ್ನು ಸ್ಥಗಿತಗೊಳಿಸಲು ಹಾಗೂ ಸೂಕ್ತಕ್ರಮ ವಹಿಸಿ ವರದಿ ಸಲ್ಲಿಸಲು ಸೂಚಿಸಲಾಗಿರುತ್ತದೆ.

ಮಂಡಳಿಯಿಂದ ಸರ್ಕಾರಕ್ಕೆ ದಿನಾಂಕ:26-07-2019, 16-08-2019 ಮತ್ತು 25-10-2019 ಗಳಂದು ಸರ್ಕಾರಕ್ಕೆ ಈ ಕೆಳಕಂಡಂತೆ ವಿವರವಾದ ವರದಿಯನ್ನು ಸಲ್ಲಿಸಲಾಗಿತ್ತು.

PMAY-HFA (U) ಯೋಜನೆಯಡಿ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳ ಗುತ್ತಿಗೆಕರಾರು ಒಪ್ಪಂದಗಳು ಈ ಕೆಳಕಾಣಿಸಿದ ಷರತ್ತುಗಳನ್ನು ಒಳಗೊಂಡಿದ್ದು, ಕಾಮಗಾರಿಗಳನ್ನು ಈ ಹಂತದಲ್ಲಿ ಹಿಂಪಡೆದರೆಸದರಿ ಷರತ್ತುಗಳನ್ವಯ ಉಂಟಾಗಬಹುದಾದ ಕಾನೂನಾತ್ಮಕ ಪರಿಣಾಮಗಳ ವಿವರಗಳು:

Tender Agreement providesfollowing clauses/ conditions with regard to closure/withdrawal/termination of contract.

1. Under general conditions of Contract and also in special conditions of Contract vide page No. 32-44 does not provides any clauses for closing of the contract. However, there is provision of clause regarding termination of contract at the employer's convenience vide clause 50.2 which envisages as under.

   ***50.2****If the contract is terminated at the Employer's convenience or because of a fundamental breach of Contract by the Employer, the Employer shall prepare bill for the value of the work done, the reasonable cost of removal of Equipment, repatriation of the Contractor's personnel employed solely on the Works, and the Contractor's costs of protecting and securing the Works and less advance payments received up to the date of the certificate, less other recoveries due in terms of the contract, and less taxes due to be deducted at source as per applicable law and make payment accordingly.*

2. Further, in the Contract Agreement there is a provision of clause towards procedures for resolution of disputes under clause No. 24 which states as below,

   ***Aggravated contractor to approach Civil Court***

   ***24.2(h)*** *it is clearly understood and agreed upon by both the parties that no part of the above 24 shall be construed to an arbitration clause under the Arbitration and Conciliation Act 1996 or any other Act. In the event of any dispute or difference arising between the parties to this Contract: upon existing the remedies available under clauses 24 (a) to (g). The only final remedy available shall be approached the Court by filing a suit in accordance with law.*

ಮೇಲಿನ ಟೆಂಡರ್ ಕರಾರಿನ ಷರತ್ತುಗಳ ಹಿನ್ನೆಲೆಯಲ್ಲಿ, ಈ ಹಂತದಲ್ಲಿ ಗುತ್ತಿಗೆಗಳುನ್ನು ಯಥಾಸ್ಥಿತಿಯಲ್ಲಿ ಹಿಂಪಡೆದಲ್ಲಿಅದನ್ನು ಮೇಲಿನ Clause 50.2 ರ ಹಿನ್ನೆಲೆಯಲ್ಲಿ fundamental breach of Contract by the Employer ಎಂದು ಪರಿಗಣಿಸಿ Clauseಅನ್ವಯಗುತ್ತಿಗೆದಾರರಿಗೆ ಕಾನೂನು ಬದ್ಧವಾಗಿಪರಿಹಾರ ನೀಡಬೇಕಾಗುತ್ತದೆ.

ಮುಂದುವರೆದು, PMAY(U)-HFA ಕಾಮಗಾರಿಗಳ ಕರಾರು ಒಪ್ಪಂದಗಳು Arbitration clauseನ್ನೂ ಸಹ ಒಳಗೊಂಡಿರುವುದರಿಂದ ಗುತ್ತಿಗೆದಾರರು ನ್ಯಾಯಾಲಯದ ಮೊರೆ ಹೋಗಲು ಅವಕಾಶವಿದ್ದು, ನ್ಯಾಯಾಲಯದಲ್ಲಿ ಪ್ರಕರಣಗಳು ಇತ್ಯರ್ಥವಾಗುವವರೆಗೆ ಕಾಮಗಾರಿಗಳು ಸ್ಥಗಿತಗೊಂಡು ಅವುಗಳ ಪ್ರಗತಿ ಕುಂಠಿತಗೊಳ್ಳುವುದಲ್ಲದೇ, ವೃಥಾ

ವಿಳಂಬದಿಂದ ಯೋಜನೆಗಳ ವೆಚ್ಚವು ಗಣನೀಯವಾಗಿ ವೃದ್ಧಿಸುವ (Cost overrun) ಸಂಭವವಿರುತ್ತದೆ ಹಾಗೂ ಈ ಯೋಜನೆಗಳಲ್ಲಿ ಐಟಂವಾರು ಟೆಂಡರ್‌ಗಳಲ್ಲಿ ಕೈಗೊಂಡಿರುವ ಪ್ರತಿ ಮನೆಗಳ In-situ ನಿರ್ಮಾಣವನ್ನು ಕೊಳಗೇರಿಗಳಲ್ಲಿ ನಿವಾಸಿಗಳು ವಾಸಿಸುತ್ತಿರುವ ಲಭ್ಯವಿರುವ ನಿವೇಶನಗಳ ಅಳತೆಗನುಗುಣವಾಗಿ ಅನುಮೋದಿತ ಕಾರ್ಪೆಟ್ ವಿಸ್ತೀರ್ಣದಂತೆ ಪ್ರತಿ ಮನೆಗಳ ಯೂನಿಟ್ ಪ್ಲಾನ್‌ಗಳ ವಿನ್ಯಾಸಗಳನ್ನು ತಯಾರಿಸಿ ಮನೆಗಳನ್ನು ನಿರ್ಮಿಸುತ್ತಿರುವುದರಿಂದ ದಿನಾಂಕ: 11/07/2019 ರಂದು ಹೊರಡಿಸಿರುವ ಸರ್ಕಾರದ ಆದೇಶವನ್ನು ಮಾರ್ಪಡಿಸಲು ಹಾಗೂ ಸದರಿ ಯೋಜನೆಗಳ ಟೆಂಡರ್ ಕಾಮಗಾರಿಗಳನ್ನು ಮುಂದುವರೆಸಲು ಆದೇಶ ನೀಡಬೇಕಾಗಿ ಕೋರಲಾಗಿರುವ ಹಿನ್ನೆಲೆಯಲ್ಲಿ ಸರ್ಕಾರವು ತನ್ನ ಸರ್ಕಾರದ ಆದೇಶ ಸಂಖ್ಯೆ: ವ.ಇ/16/ ಹೆಚ್.ಎಫ್.ಎ2019, ಬೆಂಗಳೂರು, ದಿನಾಂಕ:12/12/2019 ರಲ್ಲಿ "ಅನುಮೋದನೆಗೊಂಡಿರುವ 89119 ಮನೆಗಳ ನಿರ್ಮಾಣ ಕಾಮಗಾರಿಯ ಪೈಕಿ 43846 ಮನೆಗಳ ನಿರ್ಮಾಣ ಕಾಮಗಾರಿಯು ಪ್ರಾರಂಭಗೊಂಡಿದ್ದು, ಬಾಕಿ ಇರುವ 39273 ಮನೆಗಳನ್ನು ವಿಸ್ತೃತ ಯೋಜನಾ ವರದಿಯಂತೆ ಅನುಷ್ಠಾನಗೊಳಿಸುವಂತೆ" ಆದೇಶಿಸಲಾಗಿರುತ್ತದೆ. ಅದರಂತೆ ದಿನಾಂಕ: 18/12/2019ರ ಸುತ್ತೋಲೆಯಲ್ಲಿ ಮಂಡಳಿಯು ಬಾಕಿ ಇರುವ 39273 ಮನೆಗಳ ಟೆಂಡರ್ ಕಾಮಗಾರಿಗಳನ್ನು ಪ್ರಾರಂಭಿಸಲು ಸೂಚಿಸಲಾಗಿರುತ್ತದೆ.

ಮುಂದುವರೆದಂತೆ ದಿನಾಂಕ:20/01/2020 ರಂದು ಮಾನ್ಯ ವಸತಿ ಸಚಿವರು ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾನ್ಯ ಸಚಿವರು ಮೌಖಿಕವಾಗಿ ಪ್ರಾರಂಭವಾಗದೇ ಇರುವ ಮನೆಗಳ ವಿವರಗಳನ್ನು ಮಂಡಳಿ ಸಭೆಗೆ ಪ್ರಸ್ತಾವನೆಯನ್ನು ಮಂಡಿಸಲು ಮಂಡಳಿಯ ಆಯುಕ್ತರಿಗೆ ಸೂಚಿಸಿರುತ್ತಾರೆ.

ಮೇಲೆ ವಿವರಿಸಿರುವ ಅಂಶಗಳಂತೆ ಗುತ್ತಿಗೆ ಕರಾರಿನಡಿ ಕೈಗೊಂಡಿರುವ ಎಲ್ಲಾ ಕಾಮಗಾರಿಗಳನ್ನು ಗುತ್ತಿಗೆ ಕರಾರಿನನ್ವಯ ಯೋಜನೆಗಳನ್ನು ಕಾರ್ಯಾಗತಗೊಳಿಸುವುದು ಸೂಕ್ತವಾಗಿರುತ್ತದೆ. ಒಂದು ವೇಳೆ ಗುತ್ತಿಗೆದಾರರು ಗುತ್ತಿಗೆ ಕರಾರು ನಿಯಮಗಳನ್ನು ಉಲ್ಲಂಘಿಸಿದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳುವುದು ಸೂಕ್ತವಾಗಿರುತ್ತದೆ ಮತ್ತು ಮೇಲಿನ ಅಂಶಗಳಿಗೆ ತಾಂತ್ರಿಕ ಸಲಹಾ ಸಮಿತಿಯಲ್ಲಿ ಸಮಾಲೋಚಿಸಿ ಸಮಿತಿಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ ಎಂದು ಹಾಗೂ ಸಕ್ಷಮ ಪ್ರಾಧಿಕಾರದ ಅವಗಾಹನೆಗೆ ತರುವುದು ಸೂಕ್ತವೆಂದು ಅಭಿಪ್ರಾಯಿಸಿ, ರಾಜ್ಯದ ವಿವಿಧ ನಗರ/ಪಟ್ಟಣಗಳಲ್ಲಿ ಯೋಜನಾವಾರು ವಿದಾನ ಸಭಾ ಕ್ಷೇತ್ರವಾರು ಕಾಮಗಾರಿಯ ಹೆಸರು, ಮಂಜೂರಾದ ಮನೆಗಳ ಸಂಖ್ಯೆ, ಯೋಜನಾ ಮೊತ್ತ, ಗುತ್ತಿಗೆದಾರರ ಹೆಸರು, ಕಾರ್ಯಾದೇಶ ನೀಡಿದ ದಿನಾಂಕ ,ಪ್ರಾರಂಭಿಸಿದ ದಿನಾಂಕ,ಪ್ರಗತಿಯಲ್ಲಿರುವ ಮನೆಗಳ ಸಂಖ್ಯೆ, ಪ್ರಾರಂಭಿಸಬೇಕಾಗಿರುವ ಮನೆಗಳ ಸಂಖ್ಯೆ ಮುಂತಾದ ವಿವರಗಳನ್ನು ನಮೂನೆಯಲ್ಲಿ ಭರ್ತಿಮಾಡಿ ಅನುಬಂಧದಲ್ಲಿ ಮಂಡಳಿ ಸಭೆಗೆ ಅವಗಾಹನೆಗಾಗಿ ಮಂಡಿಸಿದೆ

**ನಿರ್ಣಯ :**

ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳನ್ನು ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಸಮನ್ವಯಗೊಳಿಸಿ ಮೂಲಭೂತ ಸೌಲಭ್ಯಗಳೊಂದಿಗೆ ರಾಜ್ಯ ವಿವಿಧ ನಗರ / ಪಟ್ಟಣಗಳಲ್ಲಿನ ವಿವಿಧ ಕೊಳಚೆ ಪ್ರದೇಶಗಳಲ್ಲಿ 83119 ಮನೆಗಳ ನಿರ್ಮಾಣ ಮಾಡಲು ಕಾರ್ಯಾದೇಶ ನೀಡಿರುವ ಗುತ್ತಿಗೆ ಕಾಮಗಾರಿಗಳ ಬಗ್ಗೆ ಮಂಡಿಸಿರುವ ಪ್ರಸ್ತಾವನೆಯನ್ನು ವಿವರವಾಗಿ ಪರಿಶೀಲಿಸಲಾಯಿತು.

ವಿವಿಧ ತಾಂತ್ರಿಕ / ಇನ್ನಿತರೆ ಕಾರಣಗಳಿಂದ ಇನ್ನು ಪ್ರಾರಂಭಿಸಲು ಸಾಧ್ಯವಾಗದೇ ಇರುವ ಕಡೆಗಳಲ್ಲಿ ಹಾಗೂ ಅನುಮೋದಿತ ಯೋಜನೆಗಳಂತೆ ಎಸ್.ಸಿ / ಎಸ್.ಟಿ. ಫಲಾನುಭವಿಗಳು ಲಭ್ಯವಿಲ್ಲದಿದ್ದ ಕಾರಣ ಮತ್ತು ಮನೆಗಳನ್ನು ಪ್ರಾರಂಭಿಸುವಲ್ಲಿ ಕಷ್ಟಸಾಧ್ಯವಾಗಿರುವ ಹಿನ್ನೆಲೆಯಲ್ಲಿ ಹಾಗೂ ಯೋಜನೆಯನ್ನು ನಿಗಧಿತ ಕಾಲಾವಧಿಯೊಳಗೆ ಪೂರ್ಣಗೊಳಿಸಲು ಬೇಡಿಕೆಯಾನುಸಾರ ಇತರೆ ಕೊಳಚೆ ಪ್ರದೇಶಗಳಿಗೆ ಅಥವಾ ರಾಜ್ಯದ ಇತರೆ ನಗರ / ಸ್ಥಳೀಯ ಸಂಸ್ಥೆಗಳಿಗೆ ಅವಶ್ಯಕತೆಗನುಗುಣವಾಗಿ ಸ್ಥಳ ಬದಲಾವಣೆಯೊಂದಿಗೆ ಮನೆಗಳ ನಿರ್ಮಾಣ ಕಾಮಗಾರಿಯನ್ನು ಪರಿಣಾಮಕಾರಿಯಾಗಿ ಮತ್ತು ಯಶಸ್ವಿಯಾಗಿ ಪೂರ್ಣಗೊಳಿಸಲು ಮೂಲ ಗುತ್ತಿಗೆದಾರರಿಂದ ಹೆಚ್ಚುವರಿ ಆರ್ಥಿಕ ಹೊರೆಯಾಗದಂತೆ, ಅನುಮೋದನೆಗೊಂಡ ಯೋಜನಾ ಮೊತ್ತದಲ್ಲಿಯೇ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಗಳಿಗೆ ಪ್ರಸ್ತಾವನೆ ಸಲ್ಲಿಸಿ, ಅನುಮೋದನೆ ಪಡೆಯಲು ತೀರ್ಮಾನಿಸಲಾಯಿತು.

**ಕ್ರಮ : ಆಯುಕ್ತರು / ತಾಂತ್ರಿಕ ನಿರ್ದೇಶಕರು-1 & 2, ಕಕೊಅಮ**

**ಹೆಚ್ಚುವರಿ ವಿಷಯ ಸಂಖ್ಯೆ: 3**

**ವಿಷಯ :- ಮಂಡಳಿಯಲ್ಲಿ ನಗರ ಮಟ್ಟದತಾಂತ್ರಿಕ ಕೋಶಗಳಿಗೆ 32 ತಜ್ಞರುಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಕಾರ್ಯಾದೇಶ ನೀಡುವ ಬಗ್ಗೆ.**

ರಾಜ್ಯ ಸರ್ಕಾರದ ವಿವಿಧ ನಗರ ವಸತಿ ಯೋಜನೆಗಳನ್ನು ಸಮನ್ವಯಗೊಳಿಸಿ ಅನುಷ್ಠಾನಗೊಳಿಸುತ್ತಿರುವ **PMAY (U)-HFA** ಯೋಜನೆಯ ಮಾರ್ಗಸೂಚಿ (**Capacity Building Activities**)ಯಲ್ಲಿ ಯೋಜನೆಯ ಪರಿಣಾಮಕಾರಿ ಮತ್ತು ಯಶಸ್ವಿ ಅನುಷ್ಠಾನಕ್ಕಾಗಿ ನಗರ ಮಟ್ಟದತಾಂತ್ರಿಕ ಕೋಶ (CLTC) ಗಳನ್ನು ರಚಿಸಿ ತಜ್ಞರುಗಳನ್ನು '***Open Transparent process***'ಮೂಲಕ ನೇಮಕ ಮಾಡಿಕೊಂಡು ಮತ್ತುಗುತ್ತಿಗೆಕರಾರನ್ನು ಮಾಡಿಕೊಳ್ಳಲು ಹಾಗೂ ಸದರಿ ತಜ್ಞರುಗಳಿಗೆ ನೀಡಲಾಗುವ ವೇತನದ ಶೇ 75 ರಷ್ಟು ಮೊತ್ತವನ್ನು ಕೇಂದ್ರ ಸರ್ಕಾರ ಮತ್ತು ಶೇ. 25 ರಷ್ಟು ಮೊತ್ತವನ್ನು ರಾಜ್ಯ ಸರ್ಕಾರ ಭರಿಸುವ ಬಗ್ಗೆಯೂ ತಿಳಿಸಲಾಗಿದೆ. ಮುಂದುವರೆದು ದಿನಾಂಕ: **20.06.2018** ರಂದು ನಡೆದ **12**ನೇ **SLSMC** ಸಭೆಯಲ್ಲಿನಗರ ಮಟ್ಟದತಾಂತ್ರಿಕ ಕೋಶಗಳ ಹುದ್ದೆಗಳಿಗೆ ತಜ್ಞರುಗಳನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲು ಅನುಮೋದನ 'ನೀಡಲಾಗಿದ್ದು, **SLNA** ರವರು ತಮ್ಮ ಪತ್ರ ದಿನಾಂಕ **08.08.2018**ರಲ್ಲಿ **CLTC** ಗಳನ್ನು ರಚಿಸಿ ಕೆಳಕಂಡ ಹುದ್ದೆಗಳಿಗೆ ತಜ್ಞರನ್ನು ನೇಮಕ ಮಾಡಿಕೊಳ್ಳಲು ತಿಳಿಸಿರುತ್ತಾರೆ.

| **Name of the Post** | **Posts** |
|---|---|
| Social Development Specialist | 12 |
| MIS Specialist | 14 |
| Municipal/ Civil Engineer | 05 |
| Procurement Specialist | 01 |

ಮುಂದುವರೆದು ನಗರ ಮಟ್ಟದ ತಾಂತ್ರಿಕ ಕೋಶಗಳ ಹುದ್ದೆಗಳಿಗೆ 32 ತಜ್ಞರುಗಳನ್ನು ನೇಮಿಸಿಕೊಳ್ಳಲು ದಿನಾಂಕ **06.12.2018** ರಂದು ಮಂಡಳಿಯಿಂದ **Expression of Interest (EoI)** ಟೆಂಡರ್ ಅಧಿಸೂಚನೆ ಹೊರಡಿಸಲಾಗಿರುತ್ತದೆ. **M/s. Keerthi Enterprises, Mandya,** ರವರುಟೆಂಡರ್‌ನಲ್ಲಿ ಭಾಗವಹಿಸಿ **KTPP** ನಿಯಮಾನುಸಾರ ಹೊರಗುತ್ತಿಗೆ ಆಧಾರದ ಮೇಲೆ **Manpower** ಒದಗಿಸಲು ಅರ್ಹತೆ ಪಡೆದಿರುತ್ತಾರೆ. ತದನಂತರ ಸದರಿ ಸಂಸ್ಥೆಯವರಿಗೆ ಮಂಡಳಿಯಿಂದ ದಿನಾಂಕ **12.06.2019** ರಂದು ಒಪ್ಪಿಗೆ ಪತ್ರ / **Letter of Acceptance (LoA)**ನ್ನು ನೀಡಲಾಗಿದ್ದು, ಪತ್ರದಲ್ಲಿ ತಿಳಿಸಿರುವಂತೆ **20** ದಿನಗಳೊಳಗೆ ಮಾನವ ಸಂಪನ್ಮೂಲ ಒದಗಿಸಲು ಕರಾರಿನೊಂದಿಗೆ ಕಾರ್ಯಾದೇಶ ನೀಡಬೇಕಾಗಿದ್ದು, ಕೇಂದ್ರ ಸರ್ಕಾರದ ಅನುದಾನ ಬಿಡುಗಡೆಯಲ್ಲಿ ವಿಳಂಬವಾಗಿರುವುದರಿಂದಾಗಿ ಕಾರ್ಯಾದೇಶ ನೀಡಲಾಗಿರುವುದಿಲ್ಲ.

ಮಾನ್ಯಅಧ್ಯಕ್ಷರು ಹಾಗೂ ವಸತಿ ಸಚಿವರುಕಡತದಲ್ಲಿ 'ಮಂಡಳಿ ಸಭೆಯ ಮುಂದೆ ಮಂಡಿಸುವುದು' ಎಂದು ಆದೇಶಿಸಿರುವುದರಿಂದ ಕಾರ್ಯಾದೇಶ ನೀಡುವ ಬಗ್ಗೆ ಮಂಡಳಿ ಸಭೆಯಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:- ಟೆಂಡರ್ ಪ್ರಕ್ರಿಯೆ ಕಾಲಾವಧಿ ಮುಕ್ತಾಯವಾಗಿರುವುದರಿಂದ ಸದರಿ ಟೆಂಡರನ್ನು ರದ್ದುಪಡಿಸಲು ತೀರ್ಮಾನಿಸಲಾಯಿತು. ಮುಂದುವರೆದು, PMAY (U)ಯೋಜನೆಯ ಮಾರ್ಗ ಸೂಚಿಯನ್ವಯ ನಗರ ಮಟ್ಟದ ತಾಂತ್ರಿಕ ಕೋಶದಲ್ಲಿನ 32 ಹುದ್ದೆಗಳಿಗೆ ತಜ್ಞರುಗಳನ್ನು '*Open Transparent process*' ಮೂಲಕ ಗುತ್ತಿಗೆ ಮೇಲೆ ನೇಮಕ ಮಾಡಿಕೊಳ್ಳಲು ತೀರ್ಮಾನಿಸಲಾಯಿತು.**

ಕ್ರಮ:– ಆಯುಕ್ತರು, ಕಕೊಅಮ

## ಹೆಚ್ಚುವರಿವಿಷಯ ಸಂಖ್ಯೆ: 4

**ವಿಷಯ:– ಚಿಕ್ಕಮಗಳೂರು ಜಿಲ್ಲೆಕಡೂರು ವಿಧಾನಸಭಾಕ್ಷೇತ್ರದ ಬೀರೂರು ಪುರಸಭೆ ವ್ಯಾಪ್ತಿಯ ಖಾಸಗಿ ಬಸ್ ನಿಲ್ದಾಣದಲ್ಲಿರುವ ಶೌಚಾಲಯದ ನಿರ್ವಹಣೆಯ ಮೆ॥ ಸುಲಬ್ ಇಂಟರ್ ನ್ಯಾಷನಲ್ ಸಂಸ್ಥೆರವರಿಗೆ ನೀಡಿದ್ದಆದೇಶವನ್ನು ಹಿಂಪಡೆದು ಮುಂದಿನ ನಿರ್ವಹಣೆಗಾಗಿ ಬೀರೂರು ಪುರಸಭೆ ಸುಪರ್ದಿಗೆ ವಹಿಸಿಕೊಡುವ ಬಗ್ಗೆ.**

ಚಿಕ್ಕಮಗಳೂರು ಜಿಲ್ಲೆಕಡೂರು ವಿಧಾನಸಭಾಕ್ಷೇತ್ರದ ಬೀರೂರು ಪುರಸಭೆ ವ್ಯಾಪ್ತಿಯ ಖಾಸಗಿ ಬಸ್ ನಿಲ್ದಾಣದಲ್ಲಿರುವ ಶೌಚಾಲಯದ ನಿರ್ವಹಣೆಗೆ ಸಂಬಂಧಿಸಿದಂತೆ 1988ರಲ್ಲಿ ಮೆ॥ ಸುಲಬ್ ಇಂಟರ್ ನ್ಯಾಷನಲ್ ಸಂಸ್ಥೆಯವರೊಂದಿಗೆ 30 ವರ್ಷಗಳ ಒಪ್ಪಂದ ಮಾಡಿಕೊಂಡಿದ್ದು, ಸದರಿಒಪ್ಪಂದವು 2018 ಡಿಸೆಂಬರ್‌ನಲ್ಲಿಅಂತ್ಯಗೊಂಡಿರುತ್ತದೆ. ನಂತರ ಮೆ॥ ಸುಲಬ್ ಇಂಟರ್ ನ್ಯಾಷನಲ್ ಸಂಸ್ಥೆ ರವರಿಗೆ ದಿನಾಂಕ:07/03/2018ರಂದು ನಡೆದ ಮಂಡಳಿ ಸಭೆಯಲ್ಲಿ ಸದರಿ ಶೌಚಾಲಯದ ನಿರ್ವಹಣೆಯನ್ನು ಮುಂದಿನ 20 ವರ್ಷಗಳ ಅವಧಿಗೆ ರೂ.10,000/–ಗಳನ್ನು ವಾರ್ಷಿಕವಾಗಿ ಮಂಡಳಿಗೆ ಭರಿಸುವ ಷರತ್ತಿಗೊಳಪಟ್ಟು, ಶಿಥಿಲಾವಸ್ಥೆಯಲ್ಲಿಯಿದ್ದ ಶೌಚಾಲಯವನ್ನು ಸ್ಥಳೀಯ ಸಂಸ್ಥೆಗೆ ವಹಿಸಿದ್ದಲ್ಲಿ ಶೌಚಾಲಯವನ್ನು ನವೀಕರಣ ಮಾಡಿಉಪಯೋಗಕ್ಕೆ ಅನುಕೂಲ ಮಾಡಿಕೊಡುವುದರಿಂದ ಸರ್ಕಾರಕ್ಕೆಆರ್ಥಿಕವಾಗಿ ಹೊರೆಯಾಗುವ ಸಂಭವವಿರುತ್ತದೆ. ಆದ್ದರಿಂದ ಈಗಾಗಲೇ ಸುಲಭ್ ಶೌಚಾಲಯ ಸಂಸ್ಥೆಯವರ ಶೌಚಾಲಯ ನಿರ್ವಹಣೆಯಲ್ಲಿ ಪರಿಣಿತಿ ಹೊಂದಿರುವುದರಿಂದ 20 ವರ್ಷಗಳ ಹಳೆಯದಾದ ಶೌಚಾಲಯವನ್ನು ಸದರಿ ಸಂಸ್ಥೆಯವರೆ ಶೌಚಾಲಯವನ್ನು ನವೀಕರಣಗೊಳಿಸಿ.ಸುಸ್ಥಿತಿಗೆ ತಂದು ಸಾರ್ವಜನಿಕರಉಪಯೋಗಕ್ಕೆ ಅವಕಾಶ ಮಾಡಿ, ಹಾಗೂ ಸರ್ಕಾರಕ್ಕೆಅರ್ಥಿಕ ಹೊರೆಯಾಗದಿರುವುದರಿಂದ ಸದರಿ ಸಂಸ್ಥೆಯವರಿಗೆ ಮುಂದಿನ 20 ವರ್ಷಗಳ ಅವಧಿ ನಿರ್ವಹಣೆ ವಹಿಸುವುದು ಸೂಕ್ತವೆಂದು ನವೀಕರಣ ಮಾಡಲಾಗಿರುತ್ತದೆ.

ಈ ಕುರಿತು ದಿನಾಂಕ:24.07.2019ರ ಪತ್ರ ಸಂಖ್ಯೆ 398/2019–20ರಲ್ಲಿ ಸನ್ಮಾನ್ಯ ಶಾಸಕರವರಿಗೆ ಮಾಹಿತಿಯನ್ನು ಸಲ್ಲಿಸಲಾಗಿರುತ್ತದೆ.

ಮುಂದುವರೆದಂತೆ ಮಾನ್ಯ ಶ್ರೀ ಬೆಳ್ಳಿ ಪ್ರಕಾಶ್, ವಿಧಾನ ಸಭಾ ಸದಸ್ಯರುಕಡೂರು ವಿಧಾನ ಸಭಾಕ್ಷೇತ್ರತಮ್ಮ ಪತ್ರ ಸಂಖ್ಯೆ:ಕವಿ/ಶಾಕ/ಬೆಂ/323/2019–20 ದಿನಾಂಖ:07/01/2020ರಲ್ಲಿ ಮಾರ್ಚ್ 2018ರಲ್ಲಿ ನಡೆದ ಪುರಸಭೆಯ ಸಾಮಾನ್ಯ ಸಭೆಯಲ್ಲಿ ಸದರಿ ಶೌಚಾಲಯದ ಸ್ವತ್ತನ್ನು ಬೀರೂರು ಪುರಸಭೆ ಸುಪರ್ದಿಗೆ ವಾಪಸ್ಸು ಪಡೆದುಕೊಳ್ಳಲು ನಿರ್ಣಯದಂತೆ ಮಂಡಳಿಯವರು ಪುರಸಭೆ ಆಡಳಿತದ ಗಮನಕ್ಕೆ ತಾರದೆಅನ್ಯರಾಜ್ಯದ ಸಂಸ್ಥೆಗೆ 20 ವರ್ಷಗಳ ನಿರ್ವಹಣೆ ಮಾಡಲುಒಪ್ಪಂದ ನವೀಕರಣ ಮಾಡಿಕೊಟ್ಟಿದ್ದು, ಇದು ಪುರಸಭೆ ನಿಯಮಾವಳಿಗಳ ಸ್ಪಷ್ಟಉಲ್ಲಂಘನೆಯಾಗಿರುತ್ತದೆಎಂದು ತಿಳಿಸಿ, ಸದರಿ ಶೌಚಾಲಯದ ನಿರ್ವಹಣೆಯನ್ನು ಬೀರೂರು ಪುರಸಭೆ ಸುಪರ್ದಿಗೆ ವಹಿಸಿಕೊಡುವಂತೆ ಮಾನ್ಯ ವಸತಿ ಸಚಿವರುರವರಲ್ಲಿ ಮನವಿಯನ್ನು ಸಲ್ಲಿಸಿರುತ್ತಾರೆ. "ಈ ಬಗ್ಗೆ ಕೂಡಲೇ ಪರಿಶೀಲಿಸಿ ಮಾನ್ಯ ಶಾಸಕರಕೋರಿಕೆಯಂತೆ ಸದರಿ ಸ್ವತ್ತನ್ನು ಪುರಸಭೆ ಸುಪರ್ದಿಗೆ ನೀಡಲು ಆದೇಶಿಸಿದೆ" ಎಂದು ಮಾನ್ಯ ಸಚಿವರು ನಿರ್ದೇಶಿಸಿರುತ್ತಾರೆ.

ಅದರಂತೆ ಮಾನ್ಯ ವಸತಿ ಸಚಿವರು ಈ ಬಗ್ಗೆ ಕೂಡಲೇ ಪರಿಶೀಲಿಸಿ ಮಾನ್ಯ ಶಾಸಕರಕೋರಿಕೆಯಂತೆ ಸದರಿ ಸ್ವತ್ತನ್ನು ಪುರಸಭೆ ಸುಪರ್ದಿಗೆ ನೀಡಲು ಮಾನ್ಯ ಸಚಿವರು ಆದೇಶಿಸಿರುತ್ತಾರೆ.

ಈ ಹಿಂದೆ ದುಸ್ಥಿತಿಯಲ್ಲಿಯಿದ್ದ ಶೌಚಾಲಯಕಟ್ಟಡವನ್ನು ಮೆ॥ ಸುಲಭ್‌ಇಂಟರ್ ನ್ಯಾಷನಲ್ ಸಂಸ್ಥೆಯವರು ನವೀಕರಿಸಿ ಉಪಯೋಗಿಸಲು ಯೋಗ್ಯವನ್ನಾಗಿರಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳಿಗೆ ಮಂಡಳಿ ಸಭೆಯಅನುಮೋದನೆಗಾಗಿ ಮಂಡಿಸಿದೆ.

1. ಚಿಕ್ಕಮಗಳೂರು ಜಿಲ್ಲೆ ಕಡೂರು ವಿಧಾನಸಭಾಕ್ಷೇತ್ರದ ಬೀರೂರು ಪುರಸಭೆ ವ್ಯಾಪ್ತಿಯ ಖಾಸಗಿ ಬಸ್ ನಿಲ್ದಾಣದಲ್ಲಿರುವ ಶೌಚಾಲಯದ ನಿರ್ವಹಣೆಗಾಗಿ ಮೆ॥ ಸುಲಭ್ ಇಂಟರ್ ನ್ಯಾಷನಲ್ ಸಂಸ್ಥೆರವರಿಗೆ ನೀಡಿದ್ದ ಆದೇಶವನ್ನು ಹಿಂಪಡೆಯಲು ಅನುಮೋದನೆಗಾಗಿ

**ನಿರ್ಣಯ:– ಮೇಲಿನ ಕ್ರಮ ಸಂಖ್ಯೆ 1 ಅಂಶಕ್ಕೆ ಮಂಡಳಿ ಅನುಮೋದನೆ ನೀಡಲಾಯಿತು. ಮುಂದುವರೆದು ರಾಜ್ಯದಲ್ಲಿರುವ ಶೌಚಾಲಯಗಳನ್ನು ಖಾಸಗಿ ಸಂಸ್ಥೆಗಳಿಗೆ ಗುತ್ತಿಗೆ ನೀಡಿರುವುದನ್ನು ರದ್ದು ಪಡಿಸಲು ಕ್ರಮ ವಹಿಸಲು ಸೂಚಿಸಲಾಯಿಯತು.**

**ಕ್ರಮ:– ಆಯುಕ್ತರು, ಕಕೊಅಮ**

**ಸಾಮಾನ್ಯ ಚರ್ಚೆ:–**

- **ಕರ್ನಾಟಕ ಕೊಳಗೇರಿ ಅಭಿವೃದ್ದಿ ಮಂಡಳಿಯಿಂದ ಕೈಗೊಳ್ಳುವ ಪ್ರಮುಖ ಯೋಜನೆಗಳಿಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ನೋಡಲ್ ಏಜನ್ಸಿಯಾಗಿರುವುದರಿಂದ ಸದರಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರನ್ನು ಕರ್ನಾಟಕ ಕೊಳಗೇರಿ ಅ ಭಿವೃದ್ದಿ ಮಂಡಳಿಯ ಮಂಡಳಿ ಸದಸ್ಯರನ್ನಾಗಿ ನೇಮಿಸಲು ಸರ್ಕಾರಕ್ಕೆ ತಕ್ಷಣವೇ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಯಿತು.**
- **ಮೈಸೂರು ನಗರದ ಏಕಲವ್ಯನಗರ ಪ್ರದೇಶದಲ್ಲಿ ಮಂಡಳಿಯಿಂದ ಮನೆಗಳ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಿದ್ದು, ಸದರಿ ಜಾಗದ ಹೆಸರನ್ನು ಬದಲಾವಣೆ ಮಾಡಿ ಆದೇಶ ಹೊರಡಿಸಿರುವುದಾಗಿ ತಿಳಿದು ಬಂದಿದ್ದು, ಈ ಬಗ್ಗೆ ಸ್ಥಳೀಯ ನಿವಾಸಿಗಳು ವಿರೋಧ ವ್ಯಕ್ತಪಡಿಸುತ್ತಿರುವುದರಿಂದ ಅವರ ಬೇಡಿಕೆಯಂತೆ ಸದರಿ ಪ್ರದೇಶ ಮೂಲ ಹೆಸರನ್ನು ಬದಲಾವಣೆ ಮಾಡದೇ ಏಕಲವ್ಯನಗರ ಎಂಬ ಹೆಸರಿನಂತೆ ಮಾರ್ಪಡಿಸಿ ಈ ಬಗ್ಗೆ ಸೂಕ್ತ ಆದೇಶ ಹೊರಡಿಸಿ ನಾಮಫಲಕ ಅಳವಡಿಸಲು ಸೂಚಿಸಲಾಯಿತು.**

ವಂದನಾರ್ಪಣೆಯೊಂದಿಗೆ ವಿಷಯವನ್ನು ಮುಕ್ತಾಯಗೊಳಿಸಲಾಯಿತು.

ಸಹಿ/
(ಪಿ.ಆರ್. ಶಿವಪ್ರಸಾದ್, ಕ.ಆ.ಸೇ)
ಆಯುಕ್ತರು ಹಾಗೂ ಸದಸ್ಯ ಕಾರ್ಯದರ್ಶಿ,
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ಬೆಂಗಳೂರು

ಸಹಿ/
ಶ್ರೀ. ವಿ. ಸೋಮಣ್ಣ
ಮಾನ್ಯ ಅಧ್ಯಕ್ಷರು,
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಹಾಗೂ
ಮಾನ್ಯ ವಸತಿ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು